ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ   Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 65 ಸಂಚಿಕೆ- 65 | PAGE- 8 ಪುಟ-8 | ಬುಧವಾರ 16.04.2025 | RS.2/- ಬೆಲೆ 2/-

## ಮುಡಾ ಹಗರಣ:ಮೇ 7ಕ್ಕೆ ವಿಚಾರಣೆ ಮುಂದೂಡಿಕೆ



ಮಲ್ಲಮ ನುಡಿ ವಾರ್ತೆ ಬೆಂಗಳೂರು:ಏ.15: ಮುಡಾ ಹಗರಣಕ್ಕೆಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಸದ್ಯಕ್ಕೆ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡಿದ್ದಾರೆ. ಮುಹಾ ಹಗರಣಕ್ಕೆಸಂಬಂಧಿಸಿದಂತೆ ಲೋಕಾಯುಕ್ತಸಲ್ಲಿಸಿರುವಬಿರಿಪೋರ್ಟ್ ಕುರಿತಂತೆ ಯಾವುದೇ ಅಂತಿಮ ನಿರ್ಧಾರವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಪ್ರಕಟಿಸಿಲ್ಲ. ಇನ್ನು ಹಗರಣದ ಕುರಿತಂತೆ ತನಿಖೆ ಮುಂದೂವರೆಸಲು ಲೋಕಾಯುಕ್ತ-ಕ್ಕೆ ಸೂಚನೆ ನೀಡಿದ್ದು ಮುಂದಿನ ವಿಚಾರಣೆಯನ್ನು ಮೇ 7ಕ್ಕೆ ಮುಂದೂಡಿದೆ.ಮುಡಾ ನಿವೇಶನ ಹಂಚಿಕೆ ಪ್ರಕರಣದ ತನಿಖೆ ನಡೆಸಿದ ಲೋಕಾಯುಕ್ತ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿದ್ದು ಆರೋಪಿಗಳಿಗೆ ಕ್ಲೀನ್ ಚಿಟ್ ನೀಡಿದ್ದರು. ಇದರ ವಿರುದ್ಧ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಗೆ ತಕಾರಾರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನ್ಯಾಯಧೀಶ ಸಂತೋಷ್ ಗಜಾನನ ಭಟ್ ಅವರು ಪ್ರಕರಣ ಸಂಬಂಧ ಯಾವುದೇ ತೀರ್ಪು ನೀಡಿಲ್ಲ. ಬದಲಿಗೆ ಲೋಕಾಯುಕ್ತ ಪೊಲೀಸರಿಗೆ ತನಿಖೆಗೆ ಮುಂದೂವರೆಸಲು ಸೂಚಿಸಿದ್ದು ಸಂಪೂರ್ಣ ವರದಿ ಸಲ್ಲಿಸಿದ ಬಳಿಕ ಮುಂದಿನ ಆದೇಶ ನೀಡಲಿದೆ. ಇನ್ನು ಇದೇ ಪ್ರಕರಣ ಸಂಬಂಧ ಇಡಿ ಸಹ ತಕರಾರು ಅರ್ಜಿ ಸಲ್ಲಿಸಲು ಕೋರ್ಟ್ ಅನುಮತಿ ನೀಡಿದೆ.

ಇದಕ್ಕೂಮೊದಲು, ಸಿದ್ದರಾಮಯ್ಯ ಮತ್ತು ಇತರ ಮೂವರ ವಿರುದ್ಧದ ಆರೋಪಗಳ ವಿಚಾರಣೆಯ ಆಧಾರದ ಮೇಲೆ ಲೋಕಾಯುಕ್ತ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿದ್ದರು. ಆದಾಗ್ಯೂ, ತನಿಖೆಯನ್ನು ಕೇವಲ ನಾಲ್ವರು ವ್ಯಕ್ತಿಗಳಿಗೆ ಸೀಮಿತಗೊಳಿಸಬಾರದು ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದ್ದು, ಭಾಗಿಯಾಗಿರುವ ಎಲ್ಲರನ್ನೂ ತನಿಖೆ ಮಾಡಿ ಸಮಗ್ರ ವರದಿ ಸಲ್ಲಿಸುವಂತೆ ಪೊಲೀಸರಿಗೆ ನಿರ್ದೇಶಿಸಿದೆ.

ಈ ಪ್ರಕರಣವು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದೆ. ಇದರಲ್ಲಿ ಸಿಎಂ ಸಿದ್ದರಾಮಯ್ಯ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ಆರೋಪಗಳು ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಉಲ್ಲಂಘಿಸಿ ವಸತಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಿಂದ ಸಿದ್ದರಾಮಯ್ಯ ಅವರ ಕುಟುಂಬ

(2ನೇ ಪುಟ ನೋಡಿ)

# ನ್ಯಾಷನಲ್ ಹೆರಾಲ್ಡ್ ಪ್ರಕರಣ: ಸೋನಿಯಾ, ರಾಹುಲ್ ವಿರುದ್ಧ ಚಾರ್ಜ್ ಶೀಟ್



ಮಲ್ಲಮ್ಮನುಡಿವಾರ್ತೆನವದೆಹಲಿ:ಏ.15: ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಅವರ ತಾಯಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಕಾಂಗ್ರೆಸ್ ಸಾಗರೋತ್ತರ ಮುಖ್ಯಸ್ಥ ಸ್ಯಾಮ್ ಪಿತ್ರೋಡಾ ವಿರುದ್ಧ ಜಾರಿ ನಿರ್ದೇಶನಾಲಯ ಮಂಗಳವಾರ ಕೋರ್ಟ್ ಗೆ ಚಾರ್ಜ್ ಶೀಟ್ ಸಲ್ಲಿಸಿದೆ.

ಇಡಿ ಅಧಿಕಾರಿಗಳು ಇಂದು ದೆಹಲಿಯ ರೋಸ್ ಅವೆನ್ಯೂ ಕೋರ್ಟ್ ಗೆ ಚಾರ್ಜ್ ಶೀಟ್ ಸಲ್ಲಿಸಿದ್ದು, ಆರೋಪಪಟ್ಟಿಯಲ್ಲಿ ಸುಮನ್ ದುಬೆ ಮತ್ತು ಇತರರ ಹೆಸರುಗಳಿವೆ.ನ್ಯಾಯಾಲಯವು ಇದೇ ಏಪ್ರಿಲ್ 25 ರಂದು ವಿಚಾರಣೆ ನಿಗದಿಪಡಿಸಿದೆ.

ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಸಲ್ಲಿಸಿದ ಖಾಸಗಿ ದೂರಿನ ಆಧಾರದ ಮೇಲೆ ನ್ಯಾಷನಲ್? ಹೆರಾಲ್ಡ್ ಪ್ರಕರಣ ದಾಖಲಾಗಿದ್ದು, ಸೋನಿಯಾ ಗಾಂಧಿ,

ರಾಹುಲ್ ಗಾಂಧಿ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್ ಮೂಲಕ 2000 ಕೋಟಿ ರೂ. ಮೌಲ್ಯದ ಎಜೆಎಲ್ ಆಸ್ತಿಗಳನ್ನು ಕೇವಲ 50 ಲಕ್ಷ ರೂ. ಗಳಿಗೆ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಇಡಿ ಆರೋಪಿಸಿದೆ.

## ಭಾರತದಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ಮಾನ್ಸೂನ್ ಮಳೆ ಸಾಧ್ಯತೆ



ಮಲ್ಲಮ್ಮ ನುಡಿ ವಾರ್ತೆ ನವದೆಹಲಿ:ಏ.15: ಈ ಬಾರಿ ಭಾರತದಲ್ಲಿ ಇಡೀ ಋತುವಿನಲ್ಲಿ ಎಲ್ ನಿನೊ ಪರಿಸ್ಥಿತಿಯ ಸಾಧ್ಯತೆ ಇಲ್ಲ ಎಂದು ಹೇಳಿರುವ ಭಾರತೀಯ ಹವಾಮಾನ ಇಲಾಖೆ, ಈ ಮಾನ್ಸೂನ್‌ನಲ್ಲಿ ಭಾರತದಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹೇಳಿದೆ.

"ಭಾರತವು ನಾಲ್ಕು ತಿಂಗಳ ಮಾನ್ಸೂನ್ ಋತುವಿನಲ್ಲಿ (ಜೂನ್ ನಿಂದ ಸೆಪ್ಟೆಂಬರ್) ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆಯಿದೆ. ದೀರ್ಘಾವಧಿಯ ಸರಾಸರಿ 87 ಸೆಂ.ಮೀ.ನಷ್ಟು ಸಂಚಿತ ಮಳೆಯಾಗುವ ಅಂದಾಜು ಮಾಡಲಾಗಿದೆ" ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುಖ್ಯಸ್ಥ ಮೃತ್ಯುಂಜಯ್ ಮೊಹಾಪಾತ್ರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಭಾರತದಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಾನ್ಸೂನ್ ಮಳೆಗೆ ಸಂಬಂಧಿಸಿದ ಎಲ್ ನಿನೊ ಪರಿಸ್ಥಿತಿಗಳು ಈ ಬಾರಿ ಅಭಿವೃದ್ಧಿ ಹೊಂದುವ ಸಾಧ್ಯತೆ ಇಲ್ಲ. ದೇಶದ ಕೆಲವು ಭಾಗಗಳು ಈಗಾಗಲೇ ತೀವ್ರ ಶಾಖವನ್ನು

(2ನೇ ಪುಟ ನೋಡಿ)

## ಮುಷ್ಕರ ನಿರತ ಲಾರಿ ಮಾಲೀಕರ ಜೊತೆ ಮುಖ್ಯಮಂತ್ರಿ ಸಂಧಾನ



ಮಲ್ಲಮ್ಮನುಡಿವಾರ್ತೆಬೆಂಗಳೂರು, ಏ.15:ಡಿಸೇಲ್ ದರ ಹೆಚ್ಚಳ ಕೈ ಬಿಡುವುದು ಸೇರಿದಂತೆ ಅನೇಕ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ನಿನ್ನೆ ಮಧ್ಯ ರಾತ್ರಿಯಿಂದ ಮುಷ್ಕರ ಆರಂಭಿಸಿರುವ ಲಾರಿ ಮಾಲಿಕರ ಸಂಘದ ಪ್ರತಿನಿಧಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಸಿರುವ ಸಂಧಾನ ಸಭೆ ಫಲ ನೀಡಿಲ್ಲ.

ಮುಖ್ಯಮಂತ್ರಿ ಅಧಿಕೃತ ನಿವಾಸ ಕಾವೇರಿಯಲ್ಲಿ ಸಂಜೆ ಸಭೆ ನಡೆಸಲಾಯಿತು. ಗೃಹ ಸಚಿವ ಜಿ.ಪರಮೇಶ್ವರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಲಾರಿ ಮಾಲಿಕರ ಸಂಘದ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಮುಷ್ಕರ ನಿರತರ ಮನವೊಲಿಸಲು ಯತ್ನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಬಾರಿ ಬಜೆಟ್ ನಲ್ಲಿ ಡಿಸೇಲ್ ಮೇಲಿನ ಸುಂಕ ರೂ.2 ಹೆಚ್ಚಳ ಮಾಡಲಾಗಿದೆ. ಆದರೆ ನೆರೆ

(2ನೇ ಪುಟ ನೋಡಿ)

## ನವಜಾತ ಶಿಶುಗಳ ಕಳ್ಳಸಾಗಣೆ ಮಾಡಿದರೆ ಆಸ್ಪತ್ರೆ ಪರವಾನಿಗೆ ಅಮಾನತುಗೊಳಿಸಿ: ಸುಪ್ರೀಂ

ಮಲ್ಲಮ್ಮ ನುಡಿ ವಾರ್ತೆ ನವದೆಹಲಿ:ಏ.15: ಆಸ್ಪತ್ರೆಯು ನವಜಾತ ಶಿಶುಗಳ ಕಳ್ಳಸಾಗಣೆ ಮಾಡಿದರೆ ಅಂತಹ ಆಸ್ಪತ್ರೆಗಳ ಪರವಾನಗಿಯನ್ನು ಕೂಡಲೇ ಅಮಾನತುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಮಹತ್ವದ ಆದೇಶ ನೀಡಿದೆ. ಅಲ್ಲದೇ ಮಕ್ಕಳ ಕಳ್ಳಸಾಗಣೆ ತಡೆಗಟ್ಟಲು ಮತ್ತು ಮಕ್ಕಳ ಕಳ್ಳಸಾಗಣೆ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ನಿಭಾಯಿಸಲು ರಾಜ್ಯಗಳು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಕೋರ್ಟ್ ನಿಗದಿಪಡಿಸಿದೆ.

ಉತ್ತರಪ್ರದೇಶದ ಮಕ್ಕಳ ಕಳ್ಳಸಾಗಣೆ ಪ್ರಕರಣದ ಆರೋಪಿಗಳು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗಳ

(2ನೇ ಪುಟ ನೋಡಿ)


ಕರ್ನಾಟಕ ಸರ್ಕಾರ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಬೆಂಗಳೂರು-ಬೀದರ್ ವಿಮಾನಯಾನ ಸೇವೆಯ ಪುನರಾರಂಭ
ಹಾಗೂ
ಬೀದರ್ ಜಿಲ್ಲೆಯಲ್ಲಿ ರೂ. 2025 ಕೋಟಿ ಮೌಲ್ಯದ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಯೋಜನೆ/ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಸಮಾರಂಭ



ಕ್ರೀಡಾ ಸಮುಚ್ಚಯ





ಪ್ರಜಾಸೌಧ



ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವರಾದ ಶ್ರೀ ಈಶ್ವರ ಬಿ ಖಂಡ್ರೆ, ಶ್ರೀ ರಹೀಂಖಾನ್ ಮತ್ತು ಸಂಸತ್ ಸದಸ್ಯ ಶ್ರೀ ಸಾಗರ್ ಈ ಖಂಡ್ರೆ

ಸರ್ವರಿಗೂ ಆತ್ಮೀಯ ಸ್ವಾಗತ



ಹೊನ್ನಿಕೇರಿ ಪರಿಸರ ಪ್ರವಾಸೋದ್ಯಮ




150 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ

ಸ್ಥಳ: ನೆಹರೂ ಕ್ರೀಡಾಂಗಣ, ಬೀದರ್
ದಿ.: 16.04.2025, ಬುಧವಾರ ಸಂಜೆ 4.00 ಗಂಟೆಗೆ



ಭಾಲ್ಕಿ: 400 ಮನೆಗಳ ಹಸ್ತಾಂತರ




220 ಕೆವಿ ಉಪಕೇಂದ್ರ



ಬ್ರಿಮ್ಸ್ ಹೃದ್ರೋಗ ಚಿಕಿತ್ಸಾ ಘಟಕ

## ಒಂದನೇ ಪುಟದಿಂದ

## ವಿಚಾರಣೆ ಮುಂದೂಡಿಕೆ

ಸದಸ್ಯರು ಸೇರಿದಂತೆ ಕೆಲವು ವ್ಯಕ್ತಿಗಳಿಗೆ ಹೆಚ್ಚಿನ ಲಾಭವಾಗಿದೆ ಎಂಬ ಆರೋಪ ಕೇಳಿಬಂದಿದೆ. ಕಾರ್ಯಕರ್ತೆ ಸ್ನೇಹಮಾಯಿ ಕೃಷ್ಣ ಸಲ್ಲಿಸಿದ ದೂರಿನ ಮೇರೆಗೆ ಲೋಕಾಯುಕ್ತರು ತನಿಖೆ ಆರಂಭಿಸಿತ್ತು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ವಿಚಾರದಲ್ಲಿ ಭಾರೀ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿ ಬಂದಿದೆ. 50:50 ಅನುಪಾತದಡಿ ನಿವೇಶನಗಳನ್ನು ಸರಿಯಾಗಿ ಹಂಚಿಕೆ ಮಾಡದೆ ಬೇಕಾಬಿಟ್ಟಿ ಹಂಚಿಕೆ ಮಾಡಲಾಗಿದ್ದು, ಅಂದಾಜು 5,000 ಕೋಟಿ ರೂ.ನಷ್ಟು ಭಾರೀ ಅಕ್ರಮ ನಡೆದಿದೆ ಎಂದು ಹೇಳಲಾಗುತ್ತಿದೆ.

ಪಾರ್ವತಿ ಸಿದ್ದರಾಮಯ್ಯ ಹೆಸರಿನಲ್ಲಿದ್ದ ಮೈಸೂರಿನ ಕೆಸರೆ ಗ್ರಾಮದ ಸರ್ವೆ ನಂ. 464ರಲ್ಲಿ 3 ಎಕರೆ 16 ಗುಂಟೆ ಜಮೀನನ್ನು ಪ್ರಾಧಿಕಾರವು ಬಳಸಿಕೊಂಡಿತ್ತು. ಇದಕ್ಕೆ ಪರಿಹಾರದ ಬದಲಾಗಿ ವಿಜಯನಗರ 3 ಮತ್ತು 4 ನೇ ಹಂತದಲ್ಲಿ ಪಾರ್ವತಿ ಸಿದ್ದರಾಮಯ್ಯ ಅವರಿಗೆ 14 ನಿವೇಶನಗಳನ್ನು ಮಂಜೂರು ಮಾಡಲಾಗಿತ್ತು. ಇದು ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿತ್ತು. ನಂತರ ತನಗೆ ಪ್ರಾಧಿಕಾರ ನೀಡಿದ್ದ 14 ಸೈಟುಗಳನ್ನು ವಾಪಸ್ ನೀಡುವುದಾಗಿ ಪಾರ್ವತಿ ಸಿದ್ದರಾಮಯ್ಯ ಘೋಷಿಸಿದ್ದರು.

## ಪರವಾನಿಗೆ ಅಮಾನತುಗೊಳಿಸಿ: ಸುಪ್ರೀಂ

ವಿಚಾರಣೆಯ ಸಂದರ್ಭದಲ್ಲಿ ನ್ಯಾ.ಜೆ.ಬಿ ಪಾರ್ದ್ರಿವಾಲಾ ನೇತೃತ್ವದ ದ್ವಿಸದಸ್ಯ ಪೀಠ ಈ ನಿರ್ದೇಶನಗಳನ್ನು ನೀಡಿದೆ. ಈ ಪ್ರಕರಣವನ್ನು ನಿಭಾಯಿಸಿದ ರೀತಿಗೆ ಅಲಹಾಬಾದ್ ಹೈಕೋರ್ಟ್ ಮತ್ತು ಉತ್ತರಪ್ರದೇಶ ಸರ್ಕಾರ ಎರಡನ್ನೂ ಸುಪ್ರೀಂ ಕೋರ್ಟ್ ಇಂದು ತರಾಟೆಗೆ ತೆಗೆದುಕೊಂಡಿತು. ಬಳಿಕ ಈ ಬಗ್ಗೆ ನಿರ್ದೇಶನಗಳನ್ನು ನೀಡಿದ ಪೀಠ, ಮಕ್ಕಳ ಕಳ್ಳಸಾಗಣೆ ಪ್ರಕರಣಗಳ ವಿಚಾರಣೆಯನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸಲು ಕೆಳ ನ್ಯಾಯಾಲಯಗಳಿಗೆ ನಿರ್ದೇಶನಗಳನ್ನು ನೀಡುವಂತೆ ದೇಶಾದ್ಯಂತದ ಹೈಕೋರ್ಟ್‌ಗಳಿಗೆ ನಿರ್ದೇಶನ ನೀಡಿತು. ನಿರ್ದೇಶನಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ನಿರ್ಲಕ್ಷ್ಯವನ್ನು ಗಂಭೀರವಾಗಿ ಪರಿಗಣಿಸಲಾಗುವುದು ಮತ್ತು ನ್ಯಾಯಾಲಯದ ತಿರಸ್ಕಾರವೆಂದು ಪರಿಗಣಿಸಲಾಗುತ್ತದೆ ಎಂದು ಪೀಠ ತಿಳಿಸಿದೆ.

ರಾಜ್ಯ ಸರ್ಕಾರಗಳು ನಮ್ಮ ವಿವರವಾದ ಶಿಫಾರಸುಗಳನ್ನು ಪರಿಶೀಲಿಸಿ, ಭಾರತೀಯ ಸಂಸ್ಥೆ ಸಲ್ಲಿಸಿದ ವರದಿಯನ್ನು ಅಧ್ಯಯನ ಮಾಡಿ, ಆದಷ್ಟು ಬೇಗ ಅದನ್ನು ಜಾರಿಗೆ ತರಬೇಕು. ಮಕ್ಕಳ ಕಳ್ಳಸಾಗಣೆ ಪ್ರಕರಣಗಳಲ್ಲಿ ಬಾಕಿ ಇರುವ ವಿಚಾರಣೆಯ ಸ್ಥಿತಿಗತಿಯನ್ನು ತಿಳಿಸಲು ದೇಶಾದ್ಯಂತದ ಹೈಕೋರ್ಟ್‌ಗಳಿಗೆ ನಿರ್ದೇಶನ ನೀಡಲಾಗಿದೆ. 6 ತಿಂಗಳಲ್ಲಿ ವಿಚಾರಣೆಯನ್ನು ಪೂರ್ಣಗೊಳಿಸಲು ಮತ್ತು ದಿನನಿತ್ಯದ ವಿಚಾರಣೆಯನ್ನು ನಡೆಸಲು ನಿರ್ದೇಶನಗಳನ್ನು ನೀಡಬೇಕು ಎಂದು ಪೀಠ ಆದೇಶಿಸಿತು.ಕಠಿಣ ಕಾನೂನುಗಳ ಹೊರತಾಗಿಯೂ ಭಾರತದಲ್ಲಿ ಮಕ್ಕಳ ಕಳ್ಳಸಾಗಣೆ ಮತ್ತು ಬಲವಂತದ ಬಾಲ ಕಾರ್ಮಿಕ ಪದ್ಧತಿ ಹೆಚ್ಚುತ್ತಿದೆ. 2020ರಿಂದ ಸುಮಾರು 36,000 ಮಕ್ಕಳು ಪತ್ತೆಯಾಗುತ್ತಿಲ್ಲ ಎಂದು ಕೇಂದ್ರವು ಫೆಬ್ರವರಿಯಲ್ಲಿ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು.

## ಸಾಮಾನ್ಯಕ್ಕಿಂತ ಹೆಚ್ಚು ಮಾನ್ಸೂನ್ ಮಳೆ ಸಾಧ್ಯತೆ

ಎದುರಿಸುತ್ತಿವೆ ಮತ್ತು ಏಪ್ರಿಲ್ ನಿಂದ ಜೂನ್ ಅವಧಿಯಲ್ಲಿ ಗಮನಾರ್ಹವಾಗಿ ಹೆಚ್ಚಿನ ಸಂಖ್ಯೆಯ ಉಷ್ಣ ಅಲೆ ದಿನಗಳನ್ನು ನಿರೀಕ್ಷಿಸಲಾಗಿದೆ. ಇದು ವಿದ್ಯುತ್ ಗ್ರಿಡ್‌ಗಳನ್ನು ಒತ್ತಡಕ್ಕೆ ಒಳಪಡಿಸಬಹುದು ಮತ್ತು ನೀರಿನ ಕೊರತೆಗೆ ಕಾರಣವಾಗಬಹುದು ಎಂದು ಅವರು ಹೇಳಿದರು.ಭಾರತದ ಕೃಷಿ ವಲಯಕ್ಕೆ ಮಾನ್ಸೂನ್ ನಿರ್ಣಾಯಕವಾಗಿದ್ದು, ಇದು ಸುಮಾರು ಶೇ. 42.3 ರಷ್ಟು ಜನಸಂಖ್ಯೆಯ ಜೀವನೋಪಾಯವನ್ನು ಬೆಂಬಲಿಸುತ್ತದೆ ಮತ್ತು ದೇಶದ ಜಿಡಿಪಿಗೆ ಶೇ. 18.2 ರಷ್ಟು ಕೊಡುಗೆ ನೀಡುತ್ತದೆ. ನಿವ್ವಳ ಸಾಗುವಳಿ ಪ್ರದೇಶದ ಶೇ.52ರಷ್ಟು ಭಾಗವು ಪ್ರಾಥಮಿಕ ಮಳೆ ವ್ಯವಸ್ಥೆಯನ್ನು ಅವಲಂಬಿಸಿದೆ.ದೇಶಾದ್ಯಂತ ವಿದ್ಯುತ್ ಉತ್ಪಾದನೆಯ ಜೊತೆಗೆ ಕುಡಿಯುವ ನೀರಿಗೆ ನಿರ್ಣಾಯಕವಾಗಿರುವ ಜಲಾಶಯಗಳ ಮರುಪೂರಣಕ್ಕೂ ಇದು ನಿರ್ಣಾಯಕವಾಗಿದೆ ಎಂದು ಹವಾಮಾನ ಇಲಾಖೆ ವರದಿಯಲ್ಲಿ ಉಲ್ಲೇಖಿಸಿದೆ.

ಆದ್ದರಿಂದ, ಮಾನ್ಸೂನ್ ಋತುವಿನಲ್ಲಿ ಸಾಮಾನ್ಯ ಮಳೆಯ ಮುನ್ಸೂಚನೆಯು ರಾಷ್ಟ್ರಕ್ಕೆ ದೊಡ್ಡ ಪರಿಹಾರವಾಗಿದೆ. ಸಾಮಾನ್ಯ ಸಂಚಿತ ಮಳೆಯು ದೇಶಾದ್ಯಂತ ಮಳೆಯ ಏಕರೂಪದ ತಾತ್ಕಾಲಿಕ ಮತ್ತು ಪ್ರಾದೇಶಿಕ ವಿತರಣೆಯನ್ನು ಖಾತರಿಪಡಿಸುವುದಿಲ್ಲ, ಹವಾಮಾನ ಬದಲಾವಣೆಯು ಮಳೆ ನೀಡುವ ವ್ಯವಸ್ಥೆಯ ವ್ಯತ್ಯಾಸವನ್ನು ಮತ್ತಷ್ಟು ಹೆಚ್ಚಿಸುತ್ತದೆ.ಹವಾಮಾನ ವಿಜ್ಞಾನಿಗಳು ಹೇಳುವಂತೆ ಮಳೆಗಾಲದ ದಿನಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ಭಾರೀ ಮಳೆಯ ಘಟನೆಗಳು (ಅಲ್ಪಾವಧಿಯಲ್ಲಿ ಹೆಚ್ಚಿನ ಮಳೆ) ಹೆಚ್ಚುತ್ತಿವೆ, ಇದು ಆಗಾಗ್ಗೆ ಬರ ಮತ್ತು ಪ್ರವಾಹಗಳಿಗೆ ಕಾರಣವಾಗುತ್ತದೆ ಎಂದು ಹೇಳಿದೆ.

## ಲಾರಿ ಮಾಲೀಕರ ಜೊತೆ ಮುಖ್ಯಮಂತ್ರಿ ಸಂಧಾನ

ಯ ರಾಜ್ಯಗಳಿಗೆ ಹೋಲಿಸಿದರೆ ಡಿಸೇಲ್ ದರ ನಮ್ಮ ರಾಜ್ಯದಲ್ಲಿ ಇನ್ನೂ ಕಡಿಮೆಯಿದೆ. ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಮುಷ್ಕರವನ್ನು ಕೈಬಿಡಿ ಎಂದು ಮನವಿ ಮಾಡಿದರು.

ಲಾರಿ ಮಾಲಿಕರ ಸಂಘದ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಅರಿವಿದೆ. ಸರ್ಕಾರ ಬಡವರ ಪರವಾಗಿದ್ದು ಸರ್ಕಾರದೊಂದಿಗೆ ಲಾರಿ ಮಾಲಿಕರು ಸಹಕರಿಸಬೇಕು. ರಸ್ತೆಗಳ ಸುಧಾರಣೆಗೆ ರಾಜ್ಯ ಸರ್ಕಾರ ಪ್ರತಿ ವರ್ಷ ಸುಮಾರು 14 ಸಾವಿರ ಕೋಟಿ ರೂ. ವೆಚ್ಚ ಮಾಡುತ್ತಿದೆ. 83 ಸಾವಿರ ಕೋಟಿ ರೂ. ಈ ವರ್ಷ ಬಂಡವಾಳ ವೆಚ್ಚಕ್ಕೆ ಮೀಸಲಿರಿಸಲಾಗಿದೆ. ಸಂಚಾರಿ ದಟ್ಟಣೆ ಅವಧಿಯಲ್ಲಿ ನಗರದ ಒಳಗೆ ಲಾರಿಗಳು ಪ್ರವೇಶಿಸುವುದರ ಬಗ್ಗೆ ಇರುವ ನಿರ್ಬಂಧ ತೆರವು ಸೇರಿದಂತೆ ಇತರ ಬೇಡಿಕೆಗಳ ಬಗ್ಗೆ ಪರಿಶೀಲನೆ ನಡೆಸಲಾಗುವುದು. ಈ ಕುರಿತಾಗಿ ಇನ್ನೊಮ್ಮೆ ಲಾರಿ ಮಾಲಿಕರ ಸಂಘದೊಂದಿಗೆ ಸಭೆ ನಡೆಸಲಾಗುವುದು ಎಂದರು.

# ಹೈಟೆನ್ಷನ್ ವೈಯರ್ ತಗುಲಿ ಬೈಕ್ ಸವಾರ ಸ್ಥಳದಲ್ಲೇ ಸಾವು

ಯಾದಗಿರಿ:ಏ.15: ಜೆಸ್ಕಾಂ ನಿರ್ಲಕ್ಷ್ಯದಿಂದ ತುಂಡರಿಸಿ ಬಿದ್ದ ವಿದ್ಯುತ್ ಹೈಟೆನ್ಷನ್ ವೈಯರ್ ತಗುಲಿ ಬೈಕ್ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಯಾದಗಿ-ರಿಯ ಮಾತಾಮಣಿಕೇಶ್ವರ ನಗರದಲ್ಲಿ ನಡೆದಿದೆ.ವಡಗೇರಾ ತಾಲೂಕಿನ ಬಬಲಾದ ಗ್ರಾಮದ ನಿವಾಸಿ ಕಾಜಾ ಪಟೇಲ್(23) ಮೃತ ಬೈಕ್ ಸವಾರ. ಕಾಜಾ ಪಟೇಲ್, ಯಾದಗಿರಿಯ ಸಹೋದರಿ ಮನೆಗೆ ತೆರಳಿ, ವಾಪಸ್ ಆಗುತ್ತಿದ್ದ ವೇಳೆ ತುಂಡರಿಸಿ ಬಿದ್ದಿದ್ದ ಹೈಟೆನ್ಷನ್ ವೈಯರ್ ನೋಡದೇ ಬೈಕ್‌ನಲ್ಲಿ ಹೋಗುತ್ತಿದ್ದಾಗ ವಿದ್ಯುತ್ ಸ್ಪರ್ಶಿಸಿ ಸಾವನ್ನಪ್ಪಿದ್ದಾರೆ. ಕಳೆದ ಮೂರು ದಿನದ ಹಿಂದೆ ಬಿರುಗಾಳಿ ಮಳೆಗೆ ಹೈಟೆನ್ಷನ್ ವೈಯರ್ ತುಂಡರಿಸಿ ಬಿದ್ದಿದ್ದು, ತುಂಡರಿಸಿ ಬಿದ್ದಿದ್ದ ವೈಯರನ್ನು ಸರಿಪಡಿಸದೇ ಜೆಸ್ಕಾಂ ಅಧಿಕಾರಿಗಳು ನಿರ್ಲಕ್ಷ್ಯವಹಿಸಿದ್ದಾರೆ. ಜೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ-ಕ್ಕೆ ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದಾರೆ.ಯಾದಗಿರಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

# ಬೀರನಳ್ಳಿ ರಸ್ತೆ ಕಾಮಗಾರಿ ಪೂರ್ಣಗೊಳಿಸುವಂತೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಸೇಡಂ: ಏ. 15: ತಾಲೂಕಿನ ಬೀರನಹಳ್ಳಿ ಗ್ರಾಮದಲ್ಲಿ. ಸಿ. ಸಿ ರಸ್ತೆಯ ಕಾಮಗಾರಿ ನಡೆದಿದ್ದು ಅದನ್ನು ಅರ್ಧಕ್ಕೆ ಮೊಟಕುಗೊಳಿಸಲಾಗಿದ್ದು ಸುಮಾರು ಮೂರು ತಿಂಗಳು ಕಳೆದರು ಸಂಬಂಧ ಪಟ್ಟ ಗುತ್ತಿಗೆದಾರರಾಗಲಿ ಸಂಬಂಧ ಪಟ್ಟ ಇಲಾಖೆಯವರಾಗಲಿ ಗ್ರಾಮಕ್ಕೆ ಬಾರದೆ ಇರುವುದು ವಿಪರ್ಯಾಸವೆ ಸರಿ ಈ ರಸ್ತೆಯು ಮೀನ ಹಾಬಾಳ ತೊಟ್ನಳ್ಳಿ ಹಾಗೂ ಇನ್ನಿತರ ಗ್ರಾಮಗಳಿಗೆ ಹೋಗಲು ಸಂಪರ್ಕ ನೀಡುವ ಮೂಲ ರಸ್ತೆಯಾಗಿದೆ ಟ್ರ್ಯಾಕ್ಟರ್, ಎತ್ತಿನ ಗಾಡಿ, ದ್ವಿ ಚಕ್ರ ವಾಹನಗಳು ದಿನಾಲೂ ಈ ರಸ್ತೆಯ ಮುಕಾಂತರ ತಿರುಗಾಡುತ್ತವೆ. ಪಾದಚಾರಿಗಳಿಗೆ ಹಿರಿಯರಿಗೆ ಮಕ್ಕಳಿಗೆ ತಿರುಗಾಡಲು ತೆ-ಊಂದರೆ ಆಗುತ್ತಿದೆ. ಆದಕಾರಣ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇತ್ತಕಡೆ ಗಮನ ಹರಿಸಿ ಆದಷ್ಟು ಬೇಗನೆ ಈ ರಸ್ತೆ ಕಾಮಗಾರಿ ಪೂರ್ಣಗೊಳಿಸಿಲು ಸಂಬಂಧ ಪಟ್ಟ ಗುತ್ತಿಗೆದಾರರಿಗೆ ಆದೇಶ ನೀಡಬೇಕೆಂದು ಅಶೋಕ. ಬಿ. ಕುಂಬಾರ ಜನಸೈನ್ಯ ಜಿಲ್ಲಾ ಅಧ್ಯಕ್ಷರು ಆಗ್ರಹಿಸಿದ್ದಾರೆ.

# ಏ.18 ಬಿಜೆಪಿ ಜನಾಕ್ರೋಶ ಯಾತ್ರೆ: ಭಾಲ್ಕಿಯಿಂದ ಅಪಾರ ಜನರು ಭಾಗಿ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಏ.15:ಇದೇ ಏ.18 ರಂದು ಭಾರತೀಯ ಜನತಾ ಪಕ್ಷದಿಂದ ಕರ್ನಾಟಕ ಕಾಂಗ್ರೆಸ್ ಪಕ್ಷದ ದುರಾಡಳಿತದಿಂದ ಬೇಸತ್ತ ಜನಾಕ್ರೋಶ ಯಾತ್ರೆಯಲ್ಲಿ ಭಾಲ್ಕಿಯಿಂದ ಅಪಾರ ಜನರು ಭಾಗಿಯಾಗುವರು ಎಂದು ಮಾಜಿ ಶಾಸಕ ಪ್ರಕಾಶ ಖಂಡ್ರೆ ಹೇಳಿದರು.ಪಟ್ಟಣದ ಬಿ.ಜೆ.ಪಿ ಕಚೇರಿಯಲ್ಲಿ ಮಂಗಳವಾರ ಕ-ರೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.ಬರುವ ಏ.18 ರಂದು ಬಿದರಿನ ಗಣೇಶ ಮೈದಾನದಲ್ಲಿ ಜನಾಕ್ರೋಶ ಯಾತ್ರೆಯ ಸಾರ್ವಜನಿಕ ಸಭೆ ಏರ್ಪಡಿಸಲಾಗಿದ್ದು. ಈ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಯಡಿಯ್ಯೂರಪ್ಪ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಚಲುವ ನಾರಾಯಣಸ್ವಾಮಿ, ಮಾಜಿ ಮುಖ್ಯಮಂತ್ರಿ ಜಗದೀಶ ಶಟ್ಟರ್, ಸದಾನಂದ ಗೌಡರು ಸೇರಿದಂತೆ ಜಿಲ್ಲೆ, ರಾಜ್ಯ, ರಾಷ್ಟ್ರದ



ನಾಯಕರು ಭಾಗಿಯಾಗುತ್ತಲಿದ್ದಾರೆ. ಬೀದರಿನ ವಿವಿಧ ಬಡಾವಣೆಗಳ ಮೂಲಕ ಮೆರವಣಿಗೆಯಲ್ಲಿ ಜನಾಕ್ರೋಶ ಯಾತ್ರೆ ತೆರಳಿ ಗಣೇಶ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಸಲಾಗುವುದು.ಮೆರವಣಿಗೆಯಲ್ಲಿ ಭಾಲ್ಕಿಯಿಂದ ಅಪಾರ ಜನಸಂಖೆ ಭಾಗವಹಿಸುವ ನಿರೀಕ್ಷೆಯಿದೆ. ಕರ್ನಾಟಕ ಕಾಂಗ್ರೆಸ್ ಸರ್ಕಾರ 2 ವರ್ಷಗಳ ಕಾಲ ಆಡಳಿತ ನಡೆಸಿ, ರಾಜ್ಯವನ್ನು ನಿರ್ನಾಮ ಮಾಡಿದೆ. ಯಾವುದೇ ಅಭಿವೃದ್ಧಿ ಕಾರ್ಯಗಳು ನಡೀತಾ ಇಲ್ಲ. ನಮ್ಮ ಬೊಮ್ಮಾಯಿ ಮತ್ತು ಯಡಿಯ್ಯೂರಪ್ಪ ಸರ್ಕಾರದ ಕಾಲಾವಧಿಯ ಕಾಮಗಾರಿಗಳನ್ನೇ ಕುಂಟುತ್ತಾ ಮಾಡುತ್ತಿರುವ ಸರ್ಕಾರ ದಿವಾಳಿ ಅಂಚಿನಲ್ಲಿದೆ. ಗ್ಯಾರಂಟಿ ಯೋಜನೆ ಹೆಸರಿನಲ್ಲಿ ಎಸ್.ಎಸ್. ಎಸ್.ಟಿ ಅನುದಾನವೂ ಸರಿಗಯಾಗಿ ಬಳಸದೇ, ಹಿಂದುಳಿದ ವರ್ಗಗಳ ಜನರಿಗೆ ಮೋಸ ಮಾಡುತ್ತಿದೆ. ವಿದ್ಯುತ್ ದರ, ಬಸ್ ದರ್, ಸೇರಿದಂತೆ ವಿವಿಧ ವಸ್ತುಗಳ ದರಗಳನ್ನು ಗಗನಕ್ಕ ಏರಿಸಿ, ಸಾಮಾನ್ಯ ಜನರ ಜೋಬಿಗೆ ಕತ್ತರಿ ಹಾಕುತ್ತಿದೆ. ಇದನ್ನು ಬೇಸತ್ತು ಸಾರ್ವಜನಿಕರು ಭಾರತೀಯ ಜನತಾ ಪಕ್ಷದೊಂದಿಗೆ ಸೇರಿ, ಜನಾಕ್ರೋಶ ಯಾತ್ರೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಹೇಳಿದರು. ಬಿಜೆಪಿ ತಾಲೂಕು ಅಧ್ಯಕ್ಷ ವೀರಣ್ಣಾ ಕಾರಬಾರಿ ಜನಾಕ್ರೋಶಯಾತ್ರೆಯ ರೂಪರೇಶಗಳ ಬಗ್ಗೆ ಮಾಹಿತಿ ನೀಡಿದರು.ಈ ಸಂದರ್ಭದಲ್ಲಿ ಪ್ರಮುಖರಾದ ಗೋವಿಂದರಾವ ಬಿರಾದಾರ, ಕೆ.ಡಿ.ಗಣೇಶ, ಪಂಢರಿ ಮೇತ್ರೆ, ಶಾವುರಾಜ, ಡಾ. ಜಗದೀಶ ಭೂರೆ, ಸಂತೋಷ ಪಾಟೀಲ ಇದ್ದರು.

## ಉಪ ಮುಖ್ಯಮಂತ್ರಿಗಳ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.15:ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನಿಂದ ವಿಶೇಷ ವಿಮಾನದ ಮೂಲಕ ಏಪ್ರಿಲ್ 16 ರಂದು ಬುಧವಾರ ಬೆಳಿಗ್ಗೆ 11ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣಕ್ಕೆ ಆಗಮಿಸುವರು.

ಅಂದು ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಕಲಬುರಗಿ ಹಾಗೂ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಬೆಂಗಳೂರು ಇವುಗಳ ಸಂಯುಕ್ತಾಶ್ರಯದಲ್ಲಿ ಕಲಬುರಗಿ ಕೆ.ಸಿ.ಟಿ. ಕಾಲೇಜ ಆವರಣದಲ್ಲಿ ಹಮ್ಮಿಕೊಳ್ಳಲಾದ ಬೃಹತ್ ಉದ್ಯೋಗ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.

ಅಂದುಮಧ್ಯಾಹ್ನ1.15 ಗಂ-ಟೆಗೆ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ವತಿಯಿಂದ 8ನೇ, 9ನೇ ಮತ್ತು 10ನೇ ಮಹಡಿಯಲ್ಲಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ವೀಕ್ಷಣೆ ಹಾಗೂ ಲೋಕಾರ್ಪಣೆ ಸಮಾರಂಭದಲ್ಲಿ ಭಾಗವಹಿಸುವರು.

ಅಂದು ಮಧ್ಯಾಹ್ನ 1.30 ಗಂಟೆಗೆ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಿಂದ ನೂತನ ಜಿಟಿಟಿಸಿ ಬಹುಕೌಶಲ್ಯ ಅಭಿವೃದ್ಧಿ ಕೇಂದ್ರ (ಎಂಎಸ್‌ಡಿಸಿ) ಮತ್ತು ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ಹಾಗೂ 09 ವಿವಿಧ ಕಾಮಗಾರಿಗಳ ಅಡಿಗಲ್ಲು ಹಾಗೂ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 3.45 ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಬೀದರಿಗೆ ಪ್ರಯಾಣಿಸುವರು.

# ಭಾರತ ದೇಶಕ್ಕೆ ಸರ್ವಶ್ರೇಷ್ಠ ಸಂವಿಧಾನವನ್ನು ನೀಡಿರುವ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಕೊಡುಗೆ ಅಪಾರ:ಸಚಿವ ಈಶ್ವರ ಬಿ.ಖಂಡ್ರೆ

ಮಲ್ಲಮ್ಮನುಡಿ ವಾರ್ತೆ ಬೀದರ :ಏ.15.ಮಹಾಮಾನವತಾವಾದಿ ಭಾರತ ರತ್ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾರತ ದೇಶಕ್ಕೆ ಸರ್ವಶ್ರೇಷ್ಠ ಸಂವಿಧಾನವನ್ನು ನೀಡಿದ್ದಾರೆ. ನಮ್ಮ ದೇಶಕ್ಕೆ ಅವರ ಕೊಡುಗೆ ಅಪಾರವಾಗಿದೆ ಎಂದು ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ತಿಳಿಸಿದರು.




ಅವರು ಸೋಮವಾರ ಸಂಜೆ ನಗರದ ಅಂಬೇಡ್ಕರ್ ವೃತ್ತದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,ನಗರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಮ್ಮ ದೇಶದಲ್ಲಿದ್ದ ಅಸಮಾನತೆ, ಅಸ್ಪೃಶ್ಯತೆ, ಮೌಢ್ಯತೆ, ಅಂ-ಧಕಾರ ಮತ್ತು ಅರ್ಥವಿಲ್ಲದ ಆಚರಣೆಗಳನ್ನು ಕಣ್ಣಾರೆ ಕಂಡು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತುಂಬಾನೇ ಮನನೊಂದಿದರು. ಅನೇಕ ಬಾರಿ ಅವರು ಕೂಡ ಅಸ್ಪೃಶ್ಯತೆ, ಅಸಮಾನತೆ,ಮೌಢ್ಯತೆಗಳಿಂದಾಗಿ ಅವಮಾನ,ಅಪಮಾನಗಳನ್ನು ಎದುರಿಸಿದರು.ಎಷ್ಟೇ ಅವಮಾನ, ಅಪಮಾನಗಳು ಎದುರಾದರೂ ಕೂಡ ತಮ್ಮ ಶಿಕ್ಷಣವನ್ನು ಮುಂದುವರಿಸಿ ಅಮೆರಿಕ ಮತ್ತು ಲಂಡನ್‌ಗಳಲ್ಲಿ ಶಿಕ್ಷಣ ಪೂರ್ಣಗೊಳಿಸಿದರು. ಮುಂದೆ ಭಾರತಕ್ಕೆ ಹಿಂತಿರುಗಿ ಅನೇಕ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಟ ಕೈಗೊಂಡರು. ಪತ್ರಿಕೆಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು. ಮಹಿಳೆಯರು ಶಿಕ್ಷಣಕ್ಕೆ ಅರ್ಹರಲ್ಲ ಎನ್ನುವ ಮನುಸ್ಮೃತಿಯನ್ನು ನಡು ಬೀದಿಯಲ್ಲಿ ಸುಟ್ಟರು. ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿ ದೀನ ದಲಿತರ ಸಮಸ್ಯೆಗಳನ್ನು ಸಭೆಯ ಮುಂದಿಟ್ಟರು. ಸಂವಿಧಾನ ಕರಡು ಸಮಿತಿ ಅಧ್ಯಕ್ಷರಾಗಿ ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠವಾದ ಸಂವಿಧಾನವನ್ನು ನಮ್ಮ ದೇಶಕ್ಕೆ ನೀಡಿದ್ದಾರೆ ಎಂದು ಹೇಳಿದರು.

ಸಮಾಜದ ಎಲ್ಲವರ್ಗದ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಏಳಿಗೆ ಕಾಣಬೇಕು ಮತ್ತು ಸಮಾನವಾಗಿ ಜೀವನ ನಡೆಸಬೇಕು ಎನ್ನುವುದು ಇವರ ಆಶಯವಾಗಿದೆ. ಎಲ್ಲಾ ವರ್ಗದವರು ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡುತ್ತಿರುವುದು ನಮ್ಮ ಸಂವಿಧಾನ ನೀಡಿರುವ ಶಿಕ್ಷಣ, ಸ್ವಾತಂತ್ರ್ಯ, ಸಮಾನತೆಗಳಿಂದ ಸಾಧ್ಯವಾಗಿದೆ. ಮೊದಲು ರಾಜರ ಮಕ್ಕಳೇ ರಾಜರಾಗುತ್ತಿದ್ದರು. ಸಂವಿಧಾನ ಜಾರಿಗೆ ಬಂದ ಮೇಲೆ ಭಾರತದ ಯಾವುದೇ ಪ್ರಜೆ ಈ ದೇಶದಲ್ಲಿ ರಾಷ್ಟ್ರಪತಿ, ಪ್ರಧಾನಿಮಂತ್ರಿ, ಮುಖ್ಯಮಂತ್ರಿ ಏನು ಬೇಕಾದರೂ ಆಗಬಹುದು. ಸಂವಿಧಾನವನ್ನು ತಿಳಿದುಕೊಳ್ಳಬೇಕು ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತತ್ವ-ಸಿದ್ಧಾಂತಗಳು ನಾವೇಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಚಿವರು ತಿಳಿಸಿದರು.

ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಂ ಖಾನ್ ಮಾತನಾಡಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅವಕಾಶ ಸಿಗುವಂತಹ ಹಾಗೂ ಸಮಾಜದ ಎಲ್ಲಾ ವರ್ಗಗಳ ಏಳ್ಗೆಗೆ ಸಾಧ್ಯವಾಗುವಂತಹ ಸಂವಿಧಾನವನ್ನು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ನಮಗೆ ನೀಡಿದ್ದಾರೆ. ಸಮಾಜದಲ್ಲಿ ಸಮಾನತೆಯಿಂದ ಮತ್ತು ಸಹಬಾಳ್ವೆಯಿಂದ ಬದುಕಬೇಕು, ಐಕ್ಯತೆ ಬಹಳ ಮುಖ್ಯವಾಗಿದೆ. ಹಿಗಾಗಿ ನಾವೆಲ್ಲರೂ ಒಗ್ಗಟ್ಟಾಗಿ ಈ ದೇಶದ ಅಭಿವೃದ್ಧಿಗಾಗಿ ದುಡಿಯಬೇಕು ಎಂದು ತಿಳಿಸಿದರು.

ಬೀದರ ದಕ್ಷಿಣದ ಶಾಸಕರಾದ ಡಾ.ಶೈಲೇಂದ್ರ ಕೆ. ಬೆಲ್ದಾಳೆ ಅವರು ಮಾತನಾಡಿ, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಎಲ್ಲಾ ವರ್ಗಗಳ ಏಳ್ಗೆಗೆ ಮತ್ತು ದೇಶದ ಅಭಿವೃದ್ಧಿಗೆ ಪೂರಕವಾಗುವ ಸಂವಿಧಾನವನ್ನು ನಮಗೆ ನೀಡಿದ್ದಾರೆ, ಅವರ ಮಾರ್ಗದರ್ಶನದಲ್ಲಿ ನಾವೆಲ್ಲ ಸಾಗಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಸಂವಿಧಾನ ಪೀಠಿಕೆಯನ್ನು ಬೋಧಿಸಿದರು. ಶಾಹೀನ್ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಅಬ್ದುಲ್ ಖಲೀದ್ ಅವರನ್ನು ವಿಶೇಷ ಸನ್ಮಾನ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಬೈಲೂರ ಮುಂಡರಗಿ ಹಾಗೂ ನಿಷ್ಕಲ ಮಂಟಪ, ತೋಂಟದಾರ್ಯ ಮಠದ ಸ್ವಾಮೀಜಿ ನಿಜಗುಣ ಪ್ರಭು ತೋಂಟದಾರ್ಯ ಮಹಾಸ್ವಾಮಿಗಳು, ಅಣದೂರ ವೈಶಾಲಿ ನಗರ ಬುದ್ಧ ವಿಹಾರ ಭಂತೆ ಜ್ಞಾನಸಾಗರ, ನಗರ ಸಭೆ ಅಧ್ಯಕ್ಷರಾದ ಮಹಮ್ಮದ ಗೌಸ, ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಗಿರೀಶ ಬದೋಲೆ,, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪ್ರದೀಪ್ ಗುಂಟಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಸಿಂಧು ರಘು ಹೆಚ್. ಎಸ್, ಮಾರುತಿ ಬೌದ್ಧೆ, ಅನೀಲ ಬೆಲ್ದಾರ, ಪಂಡಿತರಾವ ಚಿದ್ರಿ, ಅಭಿ ಕಳೆ, ವಿಜಯಕುಮಾರ ಸೊನಾರೆ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ವಚನ ಸಾಹಿತ್ಯದಲ್ಲಿದೆ ಸಮಸ್ಯೆಗಳಿಗೆ ಪರಿಹಾರ:ಸಚಿವ ಈಶ್ವರ ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಏ.15: ಮನುಷ್ಯನ ಎಲ್ಲ ಸಮಸ್ಯೆಗಳಿಗೆ ವಚನ ಸಾಹಿತ್ಯದಲ್ಲಿ ಪರಿಹಾರ ಇದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು. ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಸಂಪಾದಕತ್ವದಲ್ಲಿ ಪ್ರಕಟಗೊಂಡ ವಚನ ಪಾರಾಯಣ ಗ್ರಂಥ ಮಂಗಳವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.



ಬಸವಾದಿ ಶರಣರು ಜಗತ್ತಿಗೆ ಸಮಾನತೆ ಸಂದೇಶ ಸಾರಿದರು. ವಚನ ಸಾಹಿತ್ಯದ ಎಲ್ಲ ಆಶಯಗಳು ಸಂವಿಧಾನದಲ್ಲಿ ಅಡಗಿವೆ. ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದ 770 ಶರಣ ಶರಣೆಯರು ರಚಿಸಿರುವ ಸುಮಾರು 30 ಸಾವಿರ ವಚನಗಳು ದಕ್ಕಿವೆ. ಉಳಿದ ಶರಣರ ವಚನಗಳಿಗೆ ಶೋಧ ನಡೆಯುತ್ತಿದೆ. ಶರಣರು ಮಾನವ ಕಲ್ಯಾಣಕ್ಕಾಗಿ ವಚನಗಳನ್ನು ರಚಿಸಿದ್ದಾರೆ. ಅವುಗಳನ್ನು ಉಳಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ವಿಶ್ವಸಂಸ್ಥೆ ಸಾರುವ ಶಾಂತಿಯ ಪಾಠದ ಅಂಶಗಳು ಕೂಡ ವಚನಗಳಲ್ಲಿವೆ ಹಾಗಾಗಿ ಎಲ್ಲರೂ ವಚನಗಳನ್ನು ಓದುವ ಮತ್ತು ಅರ್ಥೈಸಿಕೊಳ್ಳುವ ಹವ್ಯಾಸ ರೂಪಿಸಿಕೊಂಡರೇ ಬದುಕು ಸುಂದರವಾಗಿ ರೂಪಗೊಳ್ಳಲಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಪ್ರಕಾಶ ಖಂಡ್ರೆ ಮಾತನಾಡಿ, ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ತಮ್ಮ ಇಡೀ ಬದುಕು ಬಸವತತ್ವ ಪ್ರಚಾರ ಪ್ರಸಾರಕ್ಕಾಗಿ ಮೀಸಲಿಟ್ಟಿದ್ದಾರೆ. ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರು ತೋರಿರುವ ಮಾರ್ಗವನ್ನು ಅನುಸರಿಸಿ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಉತ್ತಮ ಸೇವೆಗೈಯುತ್ತಿದ್ದಾರೆ ಎಂದು ತಿಳಿಸಿದರು.

ನೇತೃತ್ವ ವಹಿಸಿದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಸಂಪಾದಕತ್ವದಲ್ಲಿ ಹೊರ ತಂದಿರುವ ವಚನ ಪಾರಾಯಣ ಗ್ರಂಥದಲ್ಲಿ ಎಲ್ಲ ಶರಣರ ವಚನಗಳನ್ನು ಸಂಗ್ರಹಿಸಲಾಗಿದೆ. ಈ ಗ್ರಂಥ ಪ್ರತಿದಿನ ವಚನ ಪಾರಾಯಣ ಮಾಡುವ ಬಸವ ಭಕ್ತರಿಗೆ ಅನುಕೂಲ ಆಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಸವಕಲ್ಯಾಣ ಅನುಭವಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಗೋವಿಂದರಾವ ಬಿರಾದಾರ್, ವಿಶ್ವಕ್ರಾಂತಿ ದಿವ್ಯ ಪೀಠದ ಅಧ್ಯಕ್ಷ ಓಂಪ್ರಕಾಶ ರೊಟ್ಟೆ ಸೇರಿದಂತೆ ಹಲವರು ಇದ್ದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಸಾನ್ನಿಧ್ಯವಹಿಸಿ ಮಾತನಾಡಿದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಸಂಪಾದಕತ್ವದಲ್ಲಿ ಹೊರ ತಂದಿರುವ ವಚನ ಪಾರಾಯಣ ಗ್ರಂಥ ಅತ್ಯಂತ ಉಪಯುಕ್ತವಾಗಿದೆ. ಪ್ರತಿಯೊಬ್ಬರು ವಚನಗಳನ್ನು ಅಧ್ಯಯನ ಮಾಡುವುದನ್ನು ರೂಢಿಸಿಕೊಳ್ಳಬೇಕು.

**–ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವರು ಬೀದರ್**

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಸಮಾಜಪರ ಮತ್ತು ಜೀವಪರ ಕಾರ್ಯಗಳು ನಮ್ಮೆಲ್ಲರಿಗೂ ಪ್ರೇರಣೆ ನೀಡುತ್ತವೆ. ಅವರು ಧರ್ಮದ ಕಾರ್ಯದ ಜತೆಗೆ ವಿವಿಧ ಗ್ರಂಥಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರಕ್ಕೂ ಉತ್ತಮ ಕೊಡುಗೆ ನೀಡುತ್ತಿದ್ದಾರೆ.

**–ಪ್ರಕಾಶ ಖಂಡ್ರೆ ಮಾಜಿ ಶಾಸಕರು ಭಾಲ್ಕಿ**

## ಸಮಾನತೆಯ ಹರಿಕಾರ ಡಾ. ಬಿ.ಆರ್. ಅಂಬೇಡ್ಕರ್ ತತ್ವಗಳು ಅತ್ಯಗತ್ಯ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಸ್ವತಂತ್ರ ಭಾರತದ ಸಮಾನತೆಯ ಹರಿಕಾರ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರ ತತ್ವಗಳು ಇಂದಿನ ದಿನಮಾನಗಳಲ್ಲಿ ಅತ್ಯಗತ್ಯವಾಗಿವೆ ಎಂದು ಕೆಎಲ್‌ಇ ಸಂಸ್ಥೆಯ ಆಡಳಿತಾಧಿಕಾರಿ ಕ್ರಾಂತಿ ಕಲವಾಡಿಕರ್ ಅಭಿಪ್ರಾಯಪಟ್ಟರು.

ತಾಲೂಕಿನ ಕಲವಾಡಿ ಗ್ರಾಮದ ಮಹಾತ್ಮಾಗಾಂಧಿ ಪ್ರೌಢಶಾಲೆಯಲ್ಲಿ ರವಿವಾರ ಆಯೋಜಿಸಿದ್ದ ಡಾ. ಬಿ.ಆರ್.ಅಂಬೇಡ್ಕರ್ ರವರ 134ನೇ ಜಯಂತಿ ಮಹೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರು ಇಲ್ಲದಿದ್ದರೆ, ಈ ದೇಶದಲ್ಲಿ ದಲಿತರಿಗೆ, ವಂಚಿತ ಸಮಾಜದ ಜನರಿಗೆ ತುಂಬಾ ತೊಂದರೆ ಇತ್ತು, ಅಂದು ಅವರು ತಮಗಾದ ಅನ್ಯಾಯವನ್ನು ಸಹಿಸಲು, ಶಿಕ್ಷಣ ಕಲಿತು, ಹೋರಾಟ ಮಾಡಿದ್ದರ ಫಲವಾಗಿ ಇಂದು ದಲಿತರು, ವಂಚಿತರು ತಲೆಯೆತ್ತಿ ಬಾಳುವಂತಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ರವರ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಮುಖ್ಯಶಿಕ್ಷಕ ಕಿರಣಕುಮಾರ ಭಾಟಸಾಂಗವಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನಿವೃತ್ತ ಮುಖ್ಯ ಶಿಕ್ಷಕ ಜಯರಾಜ ದಾಬಶೆಟ್ಟಿ ಡಾ. ಬಿ.ಆರ್.ಅಂಬೇಡ್ಕರ್ ರವರ ಬಗ್ಗೆ ವಿಶೇಷ ಉಪನ್ಯಾಸ ಮಂಡಿಸಿದರು.

ಕಾರ್ಯಕ್ರಮದಲ್ಲಿ ಶಿವಕುಮಾರ ವಾಡಿಕರ, ವಿಜಯಕುಮಾರ ಗುತೆ-ದಾರ, ಓಂರ್ಝುಡ್ ಬಿರಾದಾರ, ಪ್ರವೀಣ ಸಿಂಧೆ, ಪ್ರದೀಪ ಜೊಳದಪಕೆ, ಆರತಿ ಥಮಕೆ, ಆನಂದ ಖಂಡಗೊಂಡ, ಕಲ್ಲಪ್ಪ ಬೀದರ ಉಪಸ್ಥಿತರಿದ್ದರು.

ಶಿವಕುಮಾರ ಸ್ವಾಗತಿಸಿದರು. ವಿಜಯಕುಮಾರ ನಿರೂಪಿಸಿದರು. ಪ್ರವೀಣ ವಂದಿಸಿದರು.

## ಹಿರಿಯ ಪತ್ರಕರ್ತ ಎಸ್.ಕೆ.ಶ್ಯಾಮಸುಂದರ್ ನಿಧನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಸಂತಾಪ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ಪಬ್ಲಿಕ್ ಟಿವಿ, ಒನ್ ಇಂಡಿಯಾ ಸೇರಿದಂತೆ ಹಲವೆಡೆ ಕೆಲಸ ಮಾಡಿದ್ದ ಹಿರಿಯ ಪತ್ರಕರ್ತರಾದ ಎಸ್.ಕೆ. ಶ್ಯಾಮಸುಂದರ್ (72) ಸೋಮವಾರ ರಾತ್ರಿ ನಿಧನರಾದರು.

ಕೆಲ ದಿನಗಳಿಂದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ದಿಗ್ವಿಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಆರೋಗ್ಯ ಕ್ಷೀಣಿಸಿದ್ದರಿಂದ ಅವರು ಕೋಮಾಗೆ ಜಾರಿದ್ದರು. ಸತತವಾಗಿ ಚಿಕಿತ್ಸೆ ನೀಡಿದ್ದರೂ ಆರೋಗ್ಯದಲ್ಲಿ ಚೇತರಿಕೆ ಕಾಣದೆ ಕೊನೆಯುಸಿರೆಳೆದಿದ್ದಾರೆ. ಚಾಮರಾಜಪೇಟೆ ಹಿಂದೂ ರುದ್ರಭೂಮಿಯಲ್ಲಿ ನಡೆದ ಎಸ್.ಕೆ. ಶ್ಯಾಮಸುಂದರ್ ಅವರ ಅಂತಿಮ ಸಂಸ್ಕಾರದಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸೇರಿದಂತೆ ಹಲವರು ಭಾಗವಹಿಸಿದ್ದರು. **ಕೆಯುಡಬ್ಲ್ಯೂಜೆ ಸಂತಾಪ:** ಹಿರಿಯ ಪತ್ರಕರ್ತ ಎಸ್.ಕೆ. ಶ್ಯಾಮಸುಂದರ್ (ಶ್ಯಾಮಣ್ಣ) ಅವರ ನಿಧನಕ್ಕೆ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ತೀವ್ರ ಸಂತಾಪ ವ್ಯಕ್ತಪಡಿಸಿದೆ. ನಾಲ್ಕು ದಶಕಗಳ ಕಾಲ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿದ್ದ ಮಾಹಿತಿ ಕಣಜವಾಗಿ ಕೆಲಸ ಮಾಡಿದ್ದ ಶ್ಯಾಮಸುಂದರ್ ಅವರ ನಿಧನದಿಂದ ಅನುಭವವಿರುವ ಹಿರಿಯ ಪತ್ರಕರ್ತರೊಬ್ಬರನ್ನು ಕಳೆದುಕೊಂಡಂತಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಶೋಕಿಸಿದ್ದಾರೆ.

## ಹನುಮಾನ ದೇವರ ಜಯಂತಿಯ ಹಾಗೂ 51 ಅಡಿಯಷ್ಟು ಬೃಹತ್ ಭಗವಾ ಧ್ವಜ ಲೋಕಾರ್ಪಣೆ.

ಮಲ್ಲಮ್ಮ ನುಡಿ ವಾರ್ತೆ


ಬಸವಕಲ್ಯಾಣ:- ನಗರದ ಮುಂಡೆಪಾಳಿ ಹನುಮಾನ ದೇವರ ಗುಡ್ಡ ಮೇಲೆ ವಿಶ್ವ ಹಿಂದೂ ಪರಿಷತ ಬಜರಂಗದಳ ಹಾಗೂ ಹಿಂದೂ ಸಮಾಜ ಬಾಂಧವರಿಂದ 51 ಅಡಿಯಷ್ಟ ಬೃಹತ ಭಗವಾ ಧ್ವಜ ಲೋಕಾರ್ಪಣೆ. ರಾಷ್ಟ್ರೀಯ ಕಾರ್ಯದರ್ಶಿಗಳು ಹಾಗೂ ವಿಶ್ವ ಹಿಂದೂ ಪರಿಷತ್ ಹಾಗೂ ಅಯೋಧ್ಯ ಶ್ರೀ ರಾಮ ಮಂದಿರದ ಉಸ್ತುವಾರಿಗಳಾದ ಶ್ರೀಯುತ ಗೋಪಾಲ ಜೀ ಅವರಿಂದ ಹನುಮಾನ ದೇವರ ಹಾಗೂ ಬೃಹತ್ ಭಗವಾ ಧ್ವಜಕ್ಕೆ ಪೂಜೆ ನೆರೆವರಿಸಿ ಧ್ವಜಾರೋಹಣದ ಜೊತೆಗೆ ಜೈ ಘೋಷಗಳು ಮಧ್ಯೆ ಲೋಕಾರ್ಪಣೆ ಮಾಡಲಾಯಿತು, ಈ ಸಂದರ್ಭದಲ್ಲಿ ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿಜಿ. ತಿಪುರಾಂತಿನ ಪೂಜ್ಯಶ್ರೀ ಡಾ.ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು. ಡಾ,ಚಂದ್ರಕಾಂತ ಎಕಲುರೆ ಗುರೂಜಿ, ದತ್ತ ಮಂದಿರದ ಶ್ರೀ ಬಸವರಾಜ ಮಹಾರಾಜ, ವಿಶ್ವ ಹಿಂದೂ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಸತೀಶ ನಬಾದೆ, ಜಿಲ್ಲಾ ಗೋರಕ್ಷಾ ಪ್ರಮುಖರಾದ ಮಹದೇವ ಗೌವಳಿ, ತಾಲೂಕು ಅಧ್ಯಕ್ಷರಾದ ಶ್ರೀಶೈಲ ವಾತಾಡೆ ನಗರ ಅಧ್ಯಕ್ಷರಾದ ಪ್ರಕಾಶ ನಿರಾಳೆ, ಹನುಮಾನ ದೇವರ ಗುಡ್ಡದ ಮಂದಿರದ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಭರತಸಿಂಗ ಠಾಕೂರ, ಬಜರಂಗದಳ ತಾಲೂಕು ಸಂಯೋಜಕರಾದ ರವಿ ನಾವದ್ಗೇಕರ್ ವಿ,ಹಿ,ಪ ಕಾರ್ಯದರ್ಶಿಗಳಾದ ರವಿ ಸಕಟ, ಹಿರಿಯ ಮುಖಂಡರಾದ ರವಿ ಚಂದನಕೆರೆ ಸಮಾಜ ಮುಖಂಡರಾದ ಸಂಜಯಸಿಂಗ ಹಜಾರಿ ಸಂಘದ ಹಿರಿಯರಾದ ಬಂಡೆಪ್ಪ ಹುಲಸೂರಕರ ಗೋರಕ್ಷಾ ಪ್ರಮುಖರಾದ ವಿನೋದ್ ಬಡಿಗೇಕರ್ ಬಜರಂಗದಳ ಸಹ ಸಂಯೋಜಕರಾದ ಸಚ್ಚಿನ ಗರುಡಕರ ಸುರಕ್ಷಾ ಪ್ರಮುಖರಾದ ಸಚಿನ ಸೂರ್ಯವಂಶಿ, ಪೂಜಾರಿಗಳಾದ ಶ್ರೀ ನರಸಿಂಗ ಭೈರಾಗಿ ಲಖನ್ ಭೈರಾಗಿ ಹಾಗೂ ವಿಶ್ವ ಹಿಂದು ಪರಿಷತ್ ಬಜರಂಗದಳ ಹಾಗೂ ಸಂಘದ ಅನೇಕ ಕಾರ್ಯಕರ್ತರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.





ಬಸವಕಲ್ಯಾಣ :- ಹುಲಸೂರ ತಾಲೂಕಿನ ತೊಗಲೂರ ಗ್ರಾಮದ ಶ್ರೀ ಜೈ ಹನುಮಾನ ಮೂರ್ತಿಯ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ತಮ್ಮ ಅಮೃತ ಹಸ್ತದಿಂದ ಬೆಳ್ಳಿ ಕವಚ ಧಾರಣೆ ಮಾಡಿದರು. ಈ ಸಂದರ್ಭದಲ್ಲಿ ಎಂ. ಜಿ. ರಾಜೋಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಜಗತ್ತಿಗೆ ಶಾಂತಿಯ ಸಂದೇಶವನ್ನು ನೀಡಿದ ಗೌತಮ ಬುದ್ಧನ ಆದರ್ಶಗಳು ಜೀವನದಲ್ಲಿ ಅಳವಡಿಸಿಕೊಳ್ಳಿ: ಭಂತೆ ಧಮ್ಮನಾಗ ಮಹಾಸ್ತವಿರ







ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಜಗತ್ತಿಗೆ ಶಾಂತಿಯ ಸಂದೇಶವನ್ನು ನೀಡಿದ ಗೌತಮ ಬುದ್ಧನ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂದು ಪೂಜ್ಯ ಭಂತೆ ಧಮ್ಮನಾಗ ಮಹಾಸ್ತವಿರ ತಾಲೂಕಿನ ಮುತ್ತಂಗಿ ಗ್ರಾಮದಲ್ಲಿ ತಥಾಗತ ಭಗವಾನ ಗೌತಮ ಬುದ್ಧರ ಮೂರ್ತಿ ಪ್ರತಿಷ್ಠಾಪನೆ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಮನುಷ್ಯನಲ್ಲಿ ಅಹಂ ಹೆಚ್ಚಾದರೆ ಭಿನ್ನಮತಗಳು ಹೆಚ್ಚಾಗುತ್ತವೆ. ಗೌತಮ ಬುದ್ಧನ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶಾಂತಿ ತತ್ವಗಳ ಆಧಾರದಲ್ಲಿ ಸೇವಾ ಮನೋಭಾವನೆಯನ್ನು ಹೊಂದಿರು ವುದರಿಂದ ಆತ್ಮಕ್ಕೆ ಹೆಚ್ಚಿನ ಬಲ ಬರುತ್ತದೆ ದಿನ ನಿತ್ಯ ವಿಹಾರದಲ್ಲಿ ಪ್ರಾರ್ಥನೆ ಮಾಡಬೇಕು ಎಂದು ಹೇಳಿದರು. ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್ ಮಾತನಾಡಿ, ಇತಿಹಾಸವನ್ನು ಅರಿತವರು ಮಾತ್ರ ಇತಿಹಾಸವನ್ನು ನಿರ್ಮಿಸಬಲ್ಲರು ಎಂಬ ಅಂಬೇಡ್ಕರ್ ಅವರ ಮಾತಿನಂತೆ ಬುದ್ಧ ಬಸವ ಅಂಬೇಡ್ಕರ್ ಅವರಂತ ಅನೇಕ ಮಹಾತ್ಮರ ಚರಿತ್ರೆಗಳನ್ನ ನಾವು ಓದಿ ಇತಿಹಾಸವನ್ನು ಅರಿತುಕೊಳ್ಳಬೇಕು. ಅವರ ತತ್ವ ಆದರ್ಶಗಳನ್ನು, ವಿಚಾರಧಾರೆಗಳನ್ನು ಕೇವಲ ಭಾಷಣದಲ್ಲಿ ಹೇಳಿದರೆ ಸಾಲದು, ನಮ್ಮ ಬದುಕಿನಲ್ಲಿ ನುಡಿದಂತೆ ನಡೆದು ತೋರಿಸಿದಾಗ ಮಹಾತ್ಮರ ಜನ್ಮದಿನಾಚರಣೆಗೆ ಒಂದು ಅರ್ಥ ಬರುತ್ತದೆ, ಅಂಬೇಡ್ಕರ್ ಅವರು ಭಾರತಕ್ಕೆ ಶ್ರೇಷ್ಠವಾದ ಸಂವಿಧಾನ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು ನಮ್ಮೆಲ್ಲರಿಗೆ ಕೇವಲ ಭಾರತ ರತ್ನವಲ್ಲ, ವಿಶ್ವ ರತ್ನವಾಗಿ ನಮ್ಮೆಲ್ಲರ ಬದುಕಿಗೆ ಆದರ್ಶವಾಗಬೇಕು. ಅವರ ವಿಚಾರಧಾರೆಗಳು ಇಂದಿನ ಯುವ ಪೀಳಿಗೆಗೆ ಸ್ಫೂರ್ತಿ ಆಗಬೇಕೆಂದು ಕರೆ ನೀಡಿದರು. ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಮಾತನಾಡಿ, ಬುದ್ಧ, ಬಸವಣ್ಣ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಅವರು ಸರ್ವ ಜನಾಂಗದವರು ಒಪ್ಪಿಕೊಳ್ಳುವ ಮಹಾನ್ ವ್ಯಕ್ತಿಗಳಾಗಿದ್ದಾರೆ. ಅವರ ಆದರ್ಶ ತತ್ವಗಳನ್ನು ಪ್ರತಿಯೊಬ್ಬರು ಪಾಲಿಸಬೇಕು, ಭಗವಾನ್ ಬುದ್ಧನು ಆಸೆಯೇ ದುಃಖಕ್ಕೆ ಮೂಲ ಎಂದು ಸಾರಿದರೇ, ಬಸವಣ್ಣನವರು ಕಾಯಕವೇ ಕೈಲಾಸ ಎಂದು ಹಾಗೂ ಡಾ. ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ ಮತ್ತು ಒಗ್ಗಟ್ಟಿನ ಹೋರಾಟ ಎಂಬ ಸಂದೇಶವನ್ನು ಸಮಾಜಕ್ಕೆ ಸಾರಿದ್ದಾರೆ. ಜೀವನದ ಸಾರವನ್ನು ತಿಳಿಸುವ ಈ ಸಂದೇಶಗಳು ಮಾದರಿಯಾಗಿವೆ ಎಂದರು, ಭಗವಾನ್ ಬುದ್ಧರು ಸುಮಾರು 2500 ವರ್ಷಗಳ ಹಿಂದೆ ಭಾರತ ದೇಶದಲ್ಲಿ ಹುಟ್ಟಿ ತಮ್ಮ ಧ್ಯಾನದ ಮೂಲಕ ಇಡೀ ವಿಶ್ವವೇ ತಮ್ಮ ಕಡೆ ತಿರುಗಿಸಿದರು, ನಮ್ಮ ದೇಶದಲ್ಲಿರುವ ಬೌದ್ಧ ಧರ್ಮದ ಪ್ರಚಾರಕ್ಕಿಂತಲು ಅಂತರ ರಾಷ್ಟ್ರ ಮಟ್ಟದಲ್ಲಿ ಹೆಚ್ಚುವಿದೆ ಪ್ರತಿಯೊಬ್ಬರು ಅವರ ಆದರ್ಶಗಳನ್ನು ಪಾಲಿಸಬೇಕು ಎಂದರು. ಬೌದ್ಧ ವಿಹಾರ ಅಭಿವೃದ್ಧಿಗೆ 10 ಲಕ್ಷ ರೂಪಾಯಿ ಅತೀ ಶೀಘ್ರದಲ್ಲೇ ನೀಡುತ್ತೇನೆ ಎಂದು ಭರವಸೆ ನೀಡಿದರು. ಮಾಜಿ ಶಾಸಕ ಅಶೋಕ ಖೇಣಿ, ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಮಾತನಾಡಿದರು. ಪೂಜ್ಯ ಭಂತೆ ಧರ್ಮಪಾಲ ರೇಕುಳಗಿ ದಿವ್ಯ ಸಾನಿಧ್ಯ ವಹಿಸಿದ್ದರು. ಗ್ರಾಮ ಪಂಚಾಯತ್ ಅಧ್ಯಕ್ಷೆ ನಾಗಮ್ಮ ತಾಳಮಡಗಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಸಂಧ್ಯಾ ಧೂಮಳೆ, ಸವಿತಾಬಾಯಿ ಎಲ್. ಭಯ್ಯ ಸೇರಿದಂತೆ ಗ್ರಾಮ ಪಂಚಾಯತ್ ಸದಸ್ಯರು, ಸಮಾಜದ ಮುಖಂಡರು, ಹಿರಿಯರು, ಯುವಕರು, ಮಹಿಳೆಯರು, ಮಕ್ಕಳು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು. ಸಂತೋಷಕುಮಾರ ಆರ್. ದೇಗಲಮಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಸವರಾಜ ಶರೀಕಾರ ಸ್ವಾಗತಿಸಿದರು. ಶಿಕ್ಷಕ ಶಿವಕಾಂತ್ ಚಿಮ್ಮ ಸಂವಿಧಾನ ಪೀಠಿಕೆ ಭೋದಿಸಿ, ನಿರೋಪಿಸಿದರು. ಇದೆ ವೇಳೆ ನಿವೃತ್ತ ಸರ್ಕಾರಿ ನೌಕರರಿಗೆ ಸನ್ಮಾನಿಸಿದರು.

## ಶ್ರೀ ಮಠದ ಅಭಿವೃದ್ಧಿಗೆ ಸದಾ ಸಿದ್ಧನಾಗಿರುವೆ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:-ಏ 15 ಮಠದ ಅಭಿವೃದ್ಧಿಗೆ ಸದಾ ಸಿದ್ಧನಾಗಿರುವೆ ಎಂದು ಮಾಜಿ ಸಚಿವರಾದ ರಾಜಶೇಖರ್ ಬಿ ಪಾಟೀಲ್ ತಿಳಿಸಿದರು ತಾಲೂಕಿನ ಖೇಡಾ9 (ಬಿ), ಗ್ರಾಮದ ಸದ್ಗುರು ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವದ ಧರ್ಮಸಭೆ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ನಾನು ಪ್ರತಿ ವರ್ಷ ಈ ಕ್ಷೇತ್ರಕ್ಕೆ ಜನಪ್ರತಿನಿಧಿಯಾಗಿ ಬಂದಿಲ್ಲ ಮಠದ ಭಕ್ತನಾಗಿ ಬರುತ್ತೇನೆ ಅಧಿಕಾರದಲ್ಲಿದ್ದಾಗ ಮಠದ ಅಭಿವೃದ್ಧಿಗೆ ಶ್ರಮಿಸಿದ್ದು ಮುಂದೆಯೂ ಸಹ ವಿಧಾನಪರಿಷತ್ತಿನ ಸದಸ್ಯರೊಂದಿಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಮಠದ ಅಭಿವೃದ್ಧಿಗೆ ಸದಾ ಸಿದ್ಧನಾಗಿರುವೆ. ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಡಾ. ಶಿವಾನಂದ್ ಮಹಾಸ್ವಾಮಿಗಳಿಗೆ ಸಾಧನೆ ಗುರುತಿಸಿ ಶಿವಲಿಂಗ ಪ್ರಶಸ್ತಿ ನೀಡಿ ಗೌರವಿಸಲಾಯಿತು ಪ್ರಶಸ್ತಿ ಸ್ವೀಕರಿಸಿಕೊಂಡು ಮಾತನಾಡಿದ ಅವರು ಈ ಪ್ರಶಸ್ತಿ ನನಗೆ ಅತೀವ ಸಂತೋಷ ನೀಡಿದೆ ಎಂದ ಅವರು ತಾವು ಭಕ್ತಿವಂತ ಪ್ರೀತಿವಂತರಾಗಿ ಅಲ್ಲದೆ ಮಕ್ಕಳಿಗೆ ಶಿಕ್ಷಣದೊಂದಿಗೆ ಸಂಸ್ಕಾರ ನೀಡಿ ತಂದೆ ತಾಯಿ ಗುರುಗಳಿಗೆ ಗೌರವದಿಂದ ಕಾಣಿರಿ ಎಂದರು.

ನೇತೃತ್ವ ವಹಿಸಿದ ಮಠದ ಪೂಜ್ಯರಾದ ಶ್ರೀ ಮ.ನಿ.ಪ್ರ. ಶಿವಲಿಂಗ ಮಹಾ ಸ್ವಾಮಿಗಳು ಮಾತನಾಡಿ ಜಾತ್ರೆಗೆ ಸಹಕರಿಸಿದ ಎಲ್ಲ ಮಹನೀಯರನ್ನು ಅಭಿನಂದಿಸಿ ಗುರುವಿನ ಧ್ಯಾನದಲ್ಲಿ ಕುಳಿತರೆ ಸಮಸ್ಯೆಗೆ ಪರಿಹಾರ ಸಿಗುತ್ತದೆ ಈ ಜಾತ್ರೆ ಜಾತ್ಯತೀತ ಹಾಗೂ ಪಕ್ಷಾತೀತ ಜಾತ್ರೆಯಾಗಿದೆ ಎಂದರು. ಭಕ್ತಿ ಸಂಗೀತ ಸೇವೆಯನ್ನು ಕಲಬುರ್ಗಿಯ ಕರುಣೇಶ ಜೆ.ಬಿ. ಹಾಗೂ ವಿವೇಕ ವಸ್ತ್ರದ .ಧೂಳಪ್ಪಾ ಮಡಬಿ ಅವರಿಂದ ನಡೆಯಿತು. ನಾಟ್ಯ ಪ್ರಸ್ತುತಿ ಸಂಗೀತಾ ಪವಾಡ ಶೆಟ್ಟಿ ಹಾಗೂ ಸಂಗಡಿಗರು ನಡೆಸಿಕೊಟ್ಟರು. ವಿಧಾನ ಪರಿಷತ್ ಸದಸ್ಯರಾದ ಭೀಮರಾವ್ ಪಾಟೀಲ್. ಹಿರೆನಾಗಾಂವದ ಪೂಜ್ಯ ಶ್ರೀ ಜಯಶಾಂತಲಿಂಗ ಮಹಾಸ್ವಾಮಿಗಳು. ಮಂಠಾಳದ ಪೂಜ್ಯಶ್ರೀ ಅಭಿನವ ಚನ್ನಬಸವ ಸ್ವಾಮಿಗಳು. ದರೂರದ ಪೂಜ್ಯರಾದ ಶ್ರೀ ಮ.ನಿ.ಪ್ರ. ಕೊಟ್ಟೂರು ಮಹಾಸ್ವಾಮಿಗಳು. ಸಾಯಗಾಂವದ ಪೂಜ್ಯಶ್ರೀ ಶಿವಾನಂದ ದೇವರು. ಕೆಂಪಿನ ಸ್ವಾಮಿ ಮಠದ ಚಂದ್ರಶೇಖರ್ ದೇವರು.

ತೆಲಂಗಾಣದ ಪೂಜ್ಯಶ್ರೀ ಮ.ನಿ.ಪ್ರ. ಪಂಚಮಸಿದ್ಧಲಿಂಗ ಮಹಾ ಸ್ವಾಮಿಗಳು. ಹಳ್ಳಿಖೇಡದ ಶ್ರೀ ಷ.ಬ್ರ. ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು. ಬಿಲಗುಂದಿಯ ಪೂಜ್ಯಶ್ರೀ ಚಿದಾನಂದ ಮಹಾಸ್ವಾಮಿಗಳು ಪ್ರವಚನ ನೀಡಿದರು. ಏರ್ನಾಳದ ಪೂಜ್ಯರಾದ ಶ್ರೀ ಶಿವಪ್ರಸಾದ ದೇವರು ಸೇರಿದಂತೆ ಅನೇಕರು ಭಾಗವಹಿಸಿದ್ದರು. ಸಂಚಾಲನೆಯನ್ನು ಮಿಥುನ್ ವಾಲಿ. ಸನ್ಮಾನಿತರ ಪ್ರಶಸ್ತಿ ವಾಚನ ಚಿದಾನಂದ ಚಿಕ್ಕಮಠ ವಾಚಿಸಿದರು.



ಬಸವಕಲ್ಯಾಣ :- ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀಮಠಕ್ಕೆ ಶಿವಮೊಗ್ಗ ನಗರದ ಡಾ॥ ಪಂ. ಪುಟ್ಟರಾಜ ಕವಿ ಗವಾಯಿಗಳವರ ಕುರಡ ಮಕ್ಕಳ ಸಂಗೀತ ಮಹಾವಿದ್ಯಾಲಯ ಮತ್ತು ಶ್ರೀ ವೀರೇಶ್ವರ ಪುಣ್ಯಾಶ್ರಮದ ಅಂಧ ವಿದ್ಯಾರ್ಥಿಗಳು ಆಗಮಿಸಿ, ಶ್ರೀಮಠದಲ್ಲಿ ಸೋಮವಾರ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ಪಾವನ ಸಾನಿಧ್ಯದಲ್ಲಿ ಸಂಗೀತ ಸೇವೆ ಸಲ್ಲಿಸಿ, ಆಶೀರ್ವಾದ ಪಡೆದರು. ಪುರಾಣಿಕರಾದ ಶ್ರೀ ಬಂಡಯ್ಯ ಶಾಸ್ತ್ರೀಗಳು ಸುಂಟನೂರ, ಸಂಸ್ಕೃತ ಶಿಕ್ಷಕರಾದ ಶ್ರೀ ಶಿವಚಲ ಕುಮಾರ ಸಾಲಿಮಠ ಮೈನಂದರಗೀ, ಸಂಗೀತ ಶಾಲೆಯ ಶಿಕ್ಷಕರಾದ ಶ್ರೀ ಚನ್ನವಿರಯ್ಯ ಸ್ವಾಮೀ ಜಂಬಗಿ, ವಿದ್ಯಾರ್ಥಿಗಳ ಪೋಷಕರಾದ ಶಿವಕುಮಾರ ಕಲಬುರಗಿ. ಅಪ್ಪಣ್ಣ ಜನವಾಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಚಿತ್ರ ಮಲ್ಲಮ್ಮ ನುಡಿ ವಾರ್ತೆ)

## ಮಹಿಳೆಯರಲ್ಲಿ ಅದ್ಭುತವಾದ ಶಕ್ತಿ ಇದೆ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಏ 15 ಮಹಿಳೆಯರಲ್ಲಿ ಅದ್ಭುತವಾದ ಶಕ್ತಿ ಇದೆ ಅವರು ಹುಟ್ಟಿದ ಮನೆಗೆ ಕೊಟ್ಟ ಮನೆಗೆ ಕೀರ್ತಿ ತರಬೇಕಾಗುತ್ತದೆ ಎಂದು ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೂಜ್ಯಶ್ರೀ ಡಾ. ಶಿವಾನಂದ ಮಹಾಸ್ವಾಮಿಗಳು ತಿಳಿಸಿದರು. ಇಲ್ಲಿನ ಬಸವೇಶ್ವರ ದೇವಸ್ಥಾನದ ಮಾರ್ಗದಲ್ಲಿರುವ ಚೌಕಿಮಠದಲ್ಲಿ ಅಕ್ಕಮಹಾದೇವಿಯವರ ಜಯಂತಿ ಉತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಅಕ್ಕನ ವೈರಾಗ್ಯವನ್ನು ಮೆಚ್ಚುವಂಥದ್ದು ಎಂದರು

ತಮ್ಮ ಮಕ್ಕಳಿಗೆ ಶಿಕ್ಷಣದೊಂದಿಗೆ ಸಂಸ್ಕಾರ ನೀಡಿ ಎಂದರು. ಡಾ. ಮಹಾಂತ ಬಸವಲಿಂಗ ಸ್ವಾಮಿಗಳು. ಸಾಯಗಾಂವದ ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿಗಳು.

ಅಧ್ಯಕ್ಷತೆಯನ್ನು ಬಸಮ್ಮ ಕಾಳಗಿ ವಹಿಸಿದರು. ಅಕ್ಕನ ಬಳಗದ ಅಧ್ಯಕ್ಷರಾದ ಸುಲೋಚನಾ ಮಾಮಾ. ಕಾರ್ಯದರ್ಶಿ ರಾಜೇಶ್ವರಿ ಖೂಬಾ .ಡಾ. ಸುಶೀಲಾ ಬಾಯಿ ಹೊಳಕುಂದೆ ಅಲ್ಲದೆ ಗಣಪತಿ ಕಾಸ್ತೆ. ಜಯಪ್ರಕಾಶ್ ಸದಾನಂದೆ. ನಾಗಪ್ಪಾ ನಿಣ್ಣೆ. ಸೇರಿದಂತೆ ಅನೇಕರು ಭಾಗವಹಿಸಿದ್ದರು. ಪ್ರಸ್ತಾವಿಕ ಮಾತುಗಳು ನಿರ್ಮಲಾ ಶಟಗಾರ್ ನೆರವೇರಿಸಿದರು.

## ಸರ್ವ ಸಮಾಜದ ಸಧಾರಕ ಅಂಬೇಡ್ಕರ ಪ್ರಾಂಶುಪಾಲೆ ಡಾ.ಹೇಮಾವತಿ ಪಾಟೀಲ್



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಭಾರತದ ಶ್ರೇಷ್ಠ ದಾರ್ಶನಿಕರಲ್ಲಿ ಒಬ್ಬರಾದ ಬಾಬಾಸಾಹೇಬ ಅಂಬೇಡ್ಕರ್ ಅವರು ಸರ್ವ ಸಮಾಜದ ಸಧಾರಕರಾಗಿದ್ದರು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಹೇಮಾವತಿ ಪಾಟೀಲ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಅಂಬೇಡ್ಕರ್ ಅವರು ಹುಟ್ಟಿನಿಂದ ಹೋರಾಟಗಾರರು. ಅವರಲ್ಲಿ ಧೈರ್ಯ, ಬುದ್ಧಿವಂತಿಕೆ ಮತ್ತು ಪ್ರಾಮಾಣಿಕತೆಗಳು ದೈವದತ್ತವಾಗಿ ಬಂದಿವೆ. ಅವರ ಆದರ್ಶ ತತ್ವಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಡಾ.ಶ್ರೀದೇವಿ ಕಟ್ಟಿಮನಿ, ಪ್ರೊ.ರಮೇಶ ಶಿಂದೆ ಅವರು ಅಂಬೇಡ್ಕರ್ ಅವರ ಜೀವನ ಸಾಧನೆ ಮೇಲೆ ಬೆಳಕು ಚೆಲ್ಲಿದರು.

ಪ್ರೊ.ಅಶೋಕ ಚೆಲ್ವಾ, ಡಾ.ಪ್ರದೀಪ ರಾಜೋಳೆ, ಪ್ರೊ. ರಘುನಂದ, ಪ್ರೊ.ಸಮಂತಕುಮಾರಿ, ಪ್ರೊ.ಅಮರ ಗೀರಿ, ಡಾ.ಕೃಷ್ಣಮೂರ್ತಿ, ಡಾ.ಸಂಗೀತಾ, ಪ್ರೊ.ಧನರಾಜ ಟೋಕರೆ, ಪ್ರೊ.ನಾಗೇಂದ್ರ ಕಾಂಬಳೆ, ಡಾ.ಮನೋಜ ಲೊಹಿಯಾ, ಪ್ರೊ.ನೇತಾಜಿ, ಸಾವಿತ್ರಿಬಾಯಿ, ದೀಪಕ, ಮೀನಾಕ್ಷಿ ಸಜ್ಜನ, ಡಾ.ರಾಜು ಮೇತ್ರೆ ಸೇರಿದಂತೆ ಕಾಲೇಜಿನ ಸ್ಕೌಟ್ಸ್, ಗೈಡ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರೊ.ಮಿಲೀಂದಕುಮಾರ ಸ್ವಾಗತಿಸಿದರು. ಐಕ್ಯುಎಸಿ ಸಂಚಾಲಕ ಡಾ.ರವಿ ಮೇಟಿ ಪ್ರಾಸ್ತಾವಿಕ ಮಾತನಾಡಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥೆ ಸಹಾನಾ ನಿರೂಪಿಸಿದರು. ಸಿಬ್ಬಂದಿ ಕಾರ್ಯದರ್ಶಿ ಡಾ.ನಾಗಮ್ಮ ಭಂಗರಗಿ ವಂದಿಸಿದರು.

## ಗೋರ್ಟಾ(ಬಿ) ಗ್ರಾಮದಲ್ಲಿ ಅದ್ದೂರಿ ವಚನ ವಿಜಯೋತ್ಸವ

# ಗುರು ವಚನ ಗ್ರಂಥದ ಭವ್ಯ ಮೆರವಣಿಗೆ





ಮಲ್ಲಮ್ಮ ನುಡಿ ವಾರ್ತೆ

ಬೀದರ.ಏ.15:ಲಿಂಗಾಯತ ಮಹಾ ಮಠದ ವತಿಯಿಂದ ಬಸವಕಲ್ಯಾಣ ತಾಲ್ಲೂಕಿನ ಗೋರ್ಟಾ(ಬಿ) ಗ್ರಾಮದಲ್ಲಿ ವಚನ ವಿಜಯೋತ್ಸವ ಹಾಗೂ ಅಕ್ಕ ಮಹಾದೇವಿ ಜಯಂತಿ ನಿಮಿತ್ತ ಭಾನುವಾರ ಗುರು ವಚನಗ್ರಂಥದ ಭವ್ಯ ಮೆರವಣಿಗೆ ನಡೆಯಿತು.

ಅಲಂಕೃತ ವಾಹನದಲ್ಲಿ ಬಸವಣ್ಣ, ಅಕ್ಕ ಮಹಾದೇವಿ ಭಾವಚಿತ್ರ ಹಾಗೂ ಲಿಂಗಾಯತ ಧರ್ಮ ಗ್ರಂಥ ಇಡಲಾಗಿದ್ದರೆ, 770 ಅಮರಗಣಂಗಳ ಸಂಕೇತವಾಗಿ ಸಮವಸ್ತ್ರಧಾರಿ ಶರಣ–ಶರಣೆಯರು ತಲೆ ಮೇಲೆ ವಚನ ಗ್ರಂಥ ಹೊತ್ತು ಶಿಸ್ತಿನಿಂದ ಸಾಲಾಗಿ ಹೆಜ್ಜೆ ಹಾಕಿದರು.

ವಚನ ವಿಜಯೋತ್ಸವ ಗೀತೆ, ಶರಣರ ವಚನಗಳನ್ನು ಹಾಡುತ್ತಾ ಸಾಗಿದರು. ವಚನ ವಡಪುಗಳು ಎಲ್ಲರಲ್ಲಿ ಭಕ್ತಿ ಭಾವ ಉಕ್ಕಿಸಿದವು. ಅವುಗಳಿಗೆ ಮೈ ಮರೆತ ಜನ ಓಂ ಬಸವ ಘೋಷಣೆ ಕೂಗಿದರು.

ಪ್ರಭುದೇವ ಸ್ವಾಮೀಜಿ ಹಾಗೂ ಬಸವಪ್ರಭು ಸ್ವಾಮೀಜಿ ಮೆರವಣಿಗೆ ಮುಂಚೂಣಿಯಲ್ಲಿದ್ದರು. ಓಣಿ, ಓಣಿಗಳಲ್ಲಿ ಜನರು ನೀರು ಸುರಿದು ಅವರನ್ನು ಸ್ವಾಗತಿಸಿದರು. ಛತ್ರಿ, ಚಾಮರ, ಷಟ್‌ಸ್ಥಳ ಧ್ವಜಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು.

ಮುಖಂಡ ಅಣವೀರ ಕೊಡಂಬಲ್ ಷಟ್‌ಸ್ಥಲ ಧ್ವಜಾರೋಹಣಗೈದು ಮೆರವಣಿಗೆಗೆ ಚಾಲನೆ ನೀಡಿದರು.

ಒಂದೇ ತೆರನಾದ ಸೀರೆ ಧರಿಸಿದ್ದ ನೀಲಮ್ಮನ ಬಳಗದ 770 ಸಹೋದರಿಯರು ಏಕಕಾಲಕ್ಕೆ ಸಾಮೂಹಿಕವಾಗಿ ಅಕ್ಕನ ಯೋಗಾಂಗ ತ್ರಿವಿಧಿಯನ್ನು ಭಕ್ತಿ, ಶದ್ಧೆಯಿಂದ ಸುಶ್ರಾವ್ಯವಾಗಿ ಹಾಡಿ ಗಮನ ಸೆಳೆದರು.

ಅಕ್ಕನ ವಚನ ಓದಿ, ಅರ್ಥೈಸಿಕೊಳ್ಳಿ

ಅಕ್ಕ ಮಹಾದೇವಿ ಅವರ ವಚನಗಳನ್ನು ಎಲ್ಲರೂ ಓದಿ, ಅರ್ಥೈಸಿಕೊಳ್ಳಬೇಕು ಎಂದು ಹುಲಸೂರಿನ ಶಿವಾನಂದ ಸ್ವಾಮೀಜಿ ಹೇಳಿದರು.

ಗೋರ್ಟಾ(ಬಿ) ಗ್ರಾಮದಲ್ಲಿ ನಡೆದ ವಚನ ವಿಜಯೋತ್ಸವ ಹಾಗೂ ಅಕ್ಕ ಮಹಾದೇವಿ ಜಯಂತಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಅಕ್ಕ ಅವರ ಜೀವನಾದರ್ಶಗಳು ಮನುಕುಲಕ್ಕೆ ಮಾದರಿಯಾಗಿವೆ ಎಂದು ತಿಳಿಸಿದರು.

ಗುಣತೀರ್ಥವಾಡಿಯ ಬಸವಪ್ರಭು ಸ್ವಾಮೀಜಿ ಮಾತನಾಡಿ, ನಿರಾಕಾರ ದೇವನನ್ನೇ ತನ್ನ ಪತಿಯೆಂದು ಸ್ವೀಕರಿಸಿ, ಆಧ್ಯಾತ್ಮ ಶಿಖರವನ್ನೇರಿದ ಮಹಾ ಶರಣೆ ಅಕ್ಕ. ಜೀವನದಲ್ಲಿ ಸ್ತುತಿ ನಿಂದೆಗಳಿಗೆ ಹೆದರದೆ, ಸಮ ಚಿತ್ತದಿಂದ ಸಮಾಧಾನವಾಗಿ ಜೀವಿಸಬೇಕೆಂದು ಬೋಧಿಸಿದ್ದರು ಎಂದು ಹೇಳಿದರು.

ನೇತೃತ್ವ ವಹಿಸಿದ್ದ ಪ್ರಭುದೇವ ಸ್ವಾಮೀಜಿ ಮಾತನಾಡಿ, ಅಕ್ಕ ಮಹಾದೇವಿ ಜಯಂತಿ ಹಾಗೂ ವಚನ ವಿಜಯೋತ್ಸವ ಮಠದ ವಾರ್ಷಿಕ ಕಾರ್ಯಕ್ರಮವಾಗಿ ಆಚರಿಸಲಾಗುತ್ತಿದೆ. ಅಕ್ಕನ ವಚನಗಳಿಂದ ಮಹಿಳೆಯರ ಆತ್ಮವಿಶ್ವಾಸ ಹೆಚ್ಚುತ್ತದೆ. ಮಹಿಳಾ ಸಬಲೀಕರಣ ಸಾಧ್ಯವಾಗುತ್ತದೆ. ಅಕ್ಕನ ಯೋಗಾಂಗ ತ್ರಿವಿಧಿ ಪಠಣದಿಂದ ಆಧ್ಯಾತ್ಮಿಕತೆಯ ವಿಕಾಸವಾಗುತ್ತದೆ ಎಂದು ತಿಳಿಸಿದರು.

ಅಕ್ಕ ಮಹಾದೇವಿ ಜಯಂತಿಯನ್ನು ಸರ್ಕಾರದ ವತಿಯಿಂದಲೇ ಆಚರಿಸಬೇಕು ಎಂದು ಮುಖ್ಯಮಂತ್ರಿ ಅವರನ್ನು ಒಕ್ಕೊರಲಿನಿಂದ ಒತ್ತಾಯಿಸಲಾಯಿತು.

ಸಾಹಿತಿ ಪಂಚಾಕ್ಷರಿ ಪುಣ್ಯಶೆಟ್ಟಿ ರಚಿತ ಅಕ್ಕ ಅನ್ನಪೂರ್ಣ ತಾಯಿ ಜೀವನಚರಿತ್ರೆ ಗ್ರಂಥವನ್ನು ಕಲಬುರಗಿ ಮಹಾನಗರ ಪಾಲಿಕೆಯ ಆಸ್ತಿ ಅಧಿಕಾರಿ ಸಾವಿತ್ರಿ ಸಲಗರ್, ಗುರುವಚನ ಗ್ರಂಥವನ್ನು ಹುಲಸೂರಿನ ಶಿವಾನಂದ ಸ್ವಾಮೀಜಿ ಹಾಗೂ ಬಸವಪ್ರಭು ಸ್ವಾಮೀಜಿ ಬರೆದ ಅಕ್ಕ ಮಹಾದೇವಿ ಚರಿತ್ರೆ ಕೃತಿಯನ್ನು ಪ್ರಭುದೇವ ಸ್ವಾಮೀಜಿ ಬಿಡುಗಡೆ ಮಾಡಿದರು. ಸಾಹಿತಿ ಪಂಚಾಕ್ಷರಿ ಪುಣ್ಯಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ, ರಘುಶಂಖ ಭಾತಂಬ್ರಾ, ಸೀತಾ ಸಂಜೀವಕುಮಾರ ಮುಖ್ಯ ಅತಿಥಿಯಾಗಿದ್ದರು.

ಚನ್ನಬಸಪ್ಪ ಪತಂಗೆ ಅಧ್ಯಕ್ಷತೆ ವಹಿಸಿದ್ದರು. ಶ್ಯಾಮಲಾ ಎಲಿ, ಶ್ರೀದೇವಿ ಮಠಪತಿ, ಗೋದಾವರಿ ತಾಯಿ ಸಮ್ಮುಖ ವಹಿಸಿದ್ದರು.

ಸಾಹಿತಿ ರಮೇಶ ಮಠಪತಿ ಶ್ರೀಮಂತಪ್ಪ ರಾಜೇಶ್ವರೆ, ಶಿವಕುಮಾರ ಮಾಶೆಟ್ಟಿ, ಬಾಬುರಾವ್ ಪಟ್ನೆ, ಬಾಬುರಾವ್ ರಾಜೋಳೆ, ಗುರುನಾಥ ಹತ್ತೆ, ಸುಭಾಷ್ ಪತಂಗೆ, ಭರತರಾಜ ಪೊಲೀಸ್ ಪಾಟೀಲ, ಶಿವಪುತ್ರ ಕಣಜೆ, ಚಂದ್ರಕಾಂತ ಕಣಜೆ, ಜಗನ್ನಾಥ ಚಿಮ್ಮಾ, ಬಸವಣಪ್ಪ ಚಿಕುರ್ತೆ, ಭರತರಾಜ ಪತಂಗೆ, ಬಸವರಾಜ ರಾಜೋಳೆ, ದೇವೇಂದ್ರ ಪೊಲೀಸ್ ಪಾಟೀಲ, ಮಡಿವಾಳಪ್ಪ ಮಾಶೆಟ್ಟಿ, ಜಗದೇವಿ, ಇಂದುಮತಿ ಅಕ್ಕಣ್ಣ, ಮಹಾದೇವಿ ಕಾದೆಪುರೆ, ರೇಖಾ ಕಣಜೆ ಉಪಸ್ಥಿತರಿದ್ದರು.

ಪರುಷಕಟ್ಟೆಯ ಚನ್ನಬಸವಣ್ಣ ವಚನ ಗಾಯನ ಮಾಡಿದರು. ಗೋದಾವರಿ ರಾಜೋಳೆ ಸ್ವಾಗತಿಸಿದರು. ಸೋಮನಾಥಪ್ಪ ರಾಜೇಶ್ವರೆ ನಿರೂಪಿಸಿದರು. ಜಿಲ್ಲೆಯ ವಿವಿಧೆಡೆಯ ಬಸವ ಭಕ್ತರು ಪಾಲ್ಗೊಂಡಿದ್ದರು.

## ಗುರ್ಬಾನಿ ಕನೆಕ್ಟ್ ಆ್ಯಪ್ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಏ.15: ವೈಸಾಖಿಯ ಶುಭದಿನದಂದು ಬೀದರಿನ ಐತಿಹಾಸಿಕ ಗುರುದ್ವಾರಾ ಶ್ರೀ ನಾನಕ ಝಿರಾ ಸಾಹೇಬ್‌ನಲ್ಲಿ ಗುರುದ್ವಾರಾದ ಸದಸ್ಯರಾದ ಸರದಾರ ಪವಿತ್ ಸಿಂಗ್ ಗುರ್ಬಾನಿ ಕನೆಕ್ಟ್ ಆ್ಯಪ್ ಬಿಡುಗಡೆ ಮಾಡಿದರು. ಇದು ಆಸ್ಥಾ–ಸೇವಾ ಸಂಗತ್ ಉದ್ದೇಶದೊಂದಿಗೆ ಪ್ರಾರಂಭ ಮಾಡಲಾಗಿದೆ, ಶ್ರೀ ನಾನಕ ಝಿರಾ ಸಾಹೇಬ್ ಫೌಂಡೇಷನ್‌ನ ಅಧ್ಯಕ್ಷ ಡಾ|| ಎಸ್. ಬಲಬೀರ್ ಸಿಂಗ್ ಮತ್ತು ಡಾ|| ರೇಷ್ಮಾ ಕೌರ್ ಅವರ ನೇತೃತ್ವದಲ್ಲಿ ಬೆಂಗಳೂರಿನ ಕುಬೇರಾ ಇಂಜಿನೀಯರ್ ಟೆಕ್ ಪ್ರಾವೆಟ್ ಲಿಮಿಟೇಡ್ ಅವರ ಸಹಯೋಗದೊಂದಿಗೆ ಈ ಆಪ್ಸ್ ಡೆವೆಲಪ್‌ಮೆಂಟ್ ಮಾಡಲಾಗಿದೆ. ಈ ಆ್ಯಪ್ ಮೂಲಕ ನಮ್ಮ ಸುತ್ತಮುತ್ತಲಿರುವ ಗುರುದ್ವಾರಾದ ಇತಿಹಾಸ, ಸಂಪೂರ್ಣ ಮಾಹಿತಿ ಕುಂಭನಾಮ, ಗುರುಗಳ ವಾಣಿ, ಗ್ರಂಥ ಸಾಹೇಬ್ ವಾಣಿ ಹಾಗೂ ಸೇವೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯಬಹುದಾಗಿದೆ ಎಂದು ತಿಳಿಸಿದರು. ಈ ಗುರುವಾಣಿ ಆ್ಯಪ್ ಸಿಖ್ ದರ್ಮಿಯರಿಗೆ ಕರ್ನಾಟದಲ್ಲಿರುವ ಎಲ್ಲಾ ಗುರುದ್ವಾರಾಗಳ ಬಗ್ಗೆ ಮಾಹಿತಿ ಮತ್ತು ಸೌಲಭ್ಯಗಳು ದೊರಕಲಿವೆ. ಒಂದೇ ಒಂದು ಪ್ಲಾಟ್ ಫಾರ್ಮ ಮೂಲಕ ಸಿಖ್ ಧರ್ಮಿಯರು ಸುಲಭವಾಗಿ ಗುರುದ್ವಾರಾಗಳ ಮಾಹಿತಿ ಪಡೆಯಬಹುದಾಗಿದೆ ಇದೊಂದು ಡಿಜಿಟಲ್ ಸುರಕ್ಷಿತ ಆ್ಯಪ್ ಆಗಿದೆ. ಸುಲಭ ರೀತಿಯಲ್ಲಿ ಬಳಸಬಹುದಾಗಿದೆ ಮತ್ತು ಕುಳಿತಲ್ಲಿಯೇ ಎಲ್ಲಾ ಗುರುದ್ವಾರಾದ ಕೀರ್ತನೆ ಗುರುವಾಣಿ ವೀಕ್ಷಿಸಬಹುದಾಗಿದೆ. ಪ್ರತಿ ದಿವಸ ಗುರುವಾಣಿ ಕೇಳುವ ಮೂಲಕ ದಿನದ ಪ್ರಾರಂಭ ಮಾಡಬಹುದಾಗಿದೆ, ದಿನ ನಿತ್ಯ ಪವಿತ್ರ ಗುರುಗ್ರಂಥ ಪಠಣ ನೇರ ಪ್ರಸಾರ ಮೂಲಕ ವೀಕ್ಷಿಸಬಹುದು, ಈ ಆ್ಯಪ್ ಜನರಿಗೆ ನೇರವಾಗಿ ಗುರುದ್ವಾರಾಗಳಿಗೆ ಕನೆಕ್ಟ್ ಮಾಡುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕುಬೇರಾ ಟೆಕ್ ಲಿ. ನ ಗುರುಜಿತ ಸಿಂಗ್, ಬಲವಂತ ಸಿಂಗ್, ಎಸ್. ಜಗಜೀತಸಿಂಗ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಅಮೃತ ಚಿಮಕೊಡೆಯವರನ್ನು ಎಮ್.ಎಲ್.ಸಿ ಮಾಡಿ: ಚಿಮಕೊಡೆ



ಮಲ್ಲಮ್ಮ ನುಡಿ ವಾರ್ತೆ

ಬೀದರ.15: ಪಂಚ ಗ್ಯಾರಂಟಿ ಯೋಜನೆಯ ಜಿಲ್ಲಾ ಘಟಕದ ಅಧ್ಯಕ್ಷರು ಹಾಗೂ ಮಾಜಿ ಜಿಲ್ಲಾ ಪಂಚಾಯತ ಸದಸ್ಯರಾದ ಅಮೃತರಾವ ಚಿಮಕೊಡೆ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡುವಂತೆ ಅಹಿಂದ ಕರ್ನಾಟಕ ಅಲ್ಪಸಂಖ್ಯಾತರ, ಹಿಂದುಳಿದವರ, ದಲಿತರ ಒಕ್ಕೂಟ(ರಿ)ದ ಜಿಲ್ಲಾ ಘಟಕದ ಅಧ್ಯಕ್ಷರಾದ ತುಕಾರಾಮ ಚಿಮಕೊಡೆ ಒತ್ತಾಯಿಸಿದ್ದಾರೆ. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಅಮೃತರಾವ ಚಿಮಕೋಡೆ ಅವರು ಅರಣ್ಯ ಪ್ರದೇಶಗಳಲ್ಲಿ ದನಕರುಗಳನ್ನು, ಎತ್ತು–ಎಮ್ಮೆ ಕುರಿ–ಆಡುಗಳನ್ನು ಮೇಯಿಸಿಕೊಳ್ಳಲು ಅರಣ್ಯ ಇಲಾಖೆಯ ಅಧಿಕಾರಿಗಳು ನಿರಾಕರಿಸುತ್ತಿರುವಾಗ ಇವರು 1982ರಲ್ಲಿ ಬೀದರನಿಂದ ಬೆಂಗಳೂರಿಗೆ ಸುಮಾರು 32 ಜನರೊಂದಿಗೆ ಸೈಕಲ್ ಜಾಥಾ ಮೂಲಕ ಅಂದಿನ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಂಡು, ಅರಣ್ಯ ಪ್ರದೇಶಗಳಲ್ಲಿ ಜಾನುವಾರುಗಳನ್ನು ಮೇಯಿಸಿಕೊಳ್ಳಲು ಸಹಾಯ ಮಾಡಿರುತ್ತಾರೆ ಎಂದರು.


1980–81 ರಲ್ಲಿ ಜಿಲ್ಲಾ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಗೊಂಡ (ಕುರುಬರ) ತರುಣ ಸಂಘವನ್ನು ನೊಂದಾಯಿಸಿ, ಆ ಸಂಘಟನೆಯ ಮೂಲಕ ಡಿ. ದೇವರಾಜ ಅರಸು ರವರ ಕಾಲದಿಂದ ಕೊಡುತ್ತಾ ಬಂದಿರುವ ಎಸ್.ಟಿ. ಪ್ರಮಾಣ ಪತ್ರಗಳನ್ನು ಕೊಡದಂತೆ ನಿಲ್ಲಿಸಿದ್ದ ಅಧಿಕಾರಿಗಳ ವಿರುದ್ಧ ಬೀದರ ಜಿಲ್ಲಾದ್ಯಂತ ಹೋರಾಟ ಮಾಡಿ ಎಸ್.ಟಿ. ಪ್ರಮಾಣ ಪತ್ರಗಳನ್ನು ವಿತರಿಸುವಂತೆ ಮಾಡಿರುತ್ತಾರೆ ಇದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಅನುಕೂಲವಾಗುತ್ತಿದೆ ಎಂದವರು ಹೇಳಿದರು. ದಲಿತ ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಪ್ರದೀಪ ಜಂಜಿರೆ ಮಾತನಾಡಿ, 2000ನೇ ಸಾಲಿನಲ್ಲಿ ಅಂದಿನ ಕೇಂದ್ರ ಸರ್ಕಾರ ಸಂವಿಧಾನ ಪರಾಮರ್ಶೆ ಮಾಡುವ ನಿಟ್ಟಿನಲ್ಲಿ ದೇಶದ ದಲಿತರನ್ನು, ಶೋಷಿತರನ್ನು ತುಳಿಯಲು ಹೊರಟಾಗ ಬೀದರ ಜಿಲ್ಲೆಯಲ್ಲಿ ಸಂವಿಧಾನ ಪರಾಮರ್ಶೆ ಒಕ್ಕೂಟ ರಚಿಸಿ, ಜಿಲ್ಲಾದ್ಯಂತ ಪ್ರಚಾರ ಮಾಡಿ, ಬೃಹತ್ ಪ್ರತಿಭಟನಾ ಬಹಿರಂಗ ಸಭೆ ಏರ್ಪಡಿಸಿದ್ದು, ಆ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಸ್ವಾಮಿ ಅಗ್ನಿವೇಶ, ಮುಸ್ತಾಕ್ ಮಲಿಕ್ ಭಾಗವಹಿಸಿ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿ, ಪಕ್ಷಕ್ಕೆ ಇನ್ನಷ್ಟು ಬಲ ತುಂಬುವ ಕೆಲಸ ಮಾಡಿರುತ್ತಾರೆ ಎಂದು ಬಣ್ಣಿಸಿದರು.

ಬಂಜಾರಾ ಸಮಾಜದ ಗೋವರ್ಧನ ರಾಠೋಡ ಮಾತನಾಡಿ, ಚಿಮಕೊಡೆ ಅವರು, ಕೆ.ಪಿ.ಸಿ.ಸಿ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದಾರೆ. ರಾಹುಲ ಗಾಂಧಿಜಿಯವರ ನೇತೃತ್ವದಲ್ಲಿ ಭಾರತ ಜೋಡೊ ಯಾತ್ರೆಯಲ್ಲಿ ಭಾಗಿಯಾಗಿರುತ್ತಾರೆ ಹಾಗೂ ಬೀದರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ವಿಧಾನಸಭೆ ಹಾಗೂ ವಿಧಾನ ಪರಿಷತ್ತು ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಯ ಗೆಲುವಿಗಾಗಿ ಅತ್ಯಂತ ಪ್ರಾಮಾಣೀಕವಾಗಿ ದುಡಿದವರಾಗಿದ್ದಾರೆ. ಒಟ್ಟಾರೆ ಸುಮಾರು 4 ದಶಕಕ್ಕೂ ಹೆಚ್ಚು ಕಾಲ ಪಕ್ಷ ಬಲವರ್ಧನೆಗಾಗಿ ದುಡಿದಿರುವ ಚಿಮಕೊಡೆಯವರನ್ನು ಎಮ್.ಎಸ್.ಸಿ ಮಾಡಿ ಅವರ ಪ್ರಾಮಾಣಿಕ ಸೇವೆಗೆ ಬೆಲೆ ನೀಡುವಂತೆ ಕೋರಿದರು.

ಹರಳಯ್ಯ ಸಮಾಜದ ಪ್ರಧಾನ ಕಾರ್ಯದರ್ಶಿ ರಾಜಕುಮಾರ ಟೆಳ್ಳಿಕರ್, ಟೋಕ್ರಿ ಕೋಳಿ ಸಮಾಜದ ಜಿಲ್ಲಾ ಉಪಾಧ್ಯಕ್ಷ ಸುನಿಲ ಖಾಶೆಂಪುರ, ಬಸವ ಕೇಂದ್ರದ ತಾಲೂಕಾಧ್ಯಕ್ಷ ಸೋಮನಾಥ ಕಂದಗುಳೆ ಮಾತನಾಡಿದರು.

ವಿವಿಧ ಸಮಾಜದ ಮುಖಂಡರಾದ ತಾನಾಜಿ ಸಗರ್, ಪ್ರಮೋದ ಚಿದ್ರಿ, ಶಾಮರಾವ ಮೋರ್ಗಿಕರ್, ರಮೇಶ ಪೋಳ್, ಬಾಬುರಾವ ಕುಂಬಾರ, ಸುಭಾಷ ಹಮಿಲಾಪುರೆ, ವೈಜಿನಾಥ ಪೋಳ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಮದುವೆ ಪತ್ರಿಕೆ ಹಂಚಲು ಬಂದಾತನ ನೋಡಿ ಮಕ್ಕಳ ಕಿಡ್ನ್ಯಾಪ್ ವದಂತಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 16 :ಇಲ್ಲಿನ ವಿದ್ಯಾನಗರ ಬಡಾವಣೆಯಲ್ಲಿ ಯುವಕನಿಂದ ಮಕ್ಕಳ ಕಿಡ್ನ್ಯಾಪ್ ವಿಫಲ ಯತ್ನ ಘಟನೆ ನಡೆದಿದೆ ಎಂಬ ಆರೋಪ ಕೇಳಿ ಬಂದಿದೆ. ಆದರೆ, ಯುವಕ ಮದುವೆ ಆಮಂತ್ರಣ ಪತ್ರಿಕೆ ಹಂಚಲು ಸಂಬಂಧಿಕರ ಮನೆ ವಿಳಾಸ ಕೇಳಲು ಬಂದಿದ್ದಾಗಿ ಜಿಲ್ಲಾ ಎಸ್‌ಪಿ ಸ್ಪಷ್ಟಪಡಿಸಿದ್ದಾರೆ. ಹುಬ್ಬಳ್ಳಿ ಬಾಲಕಿಯ ಅಪಹರಣ ಕೃತ್ಯ ಮಾಸುವ ಮುನ್ನವೇ ರವಿವಾರ (ಏ.13) ರಾತ್ರಿ ನಗರದಲ್ಲೂ ಅಪಹರಣಕ್ಕೆ ಯತ್ನಿಸಿದ ಘಟನೆ ನಡೆದಿದೆ ಎಂಬ ವಿಷಯ ಹಬ್ಬಿದ್ದು, ಇದು ಪಾಲಕರು ಆತಂಕ ಪಡುವಂತೆ ಮಾಡಿದೆ. ವಿದ್ಯಾನಗರ ಕಾಲೋನಿಯಲ್ಲಿ ಮನೆ ಹೊರಗೆ ಮೂವರು ಮಕ್ಕಳು ಆಟ ಆಡುತ್ತಿದ್ದಾಗ, ಬೈಕ್ ಮೇಲೆ ಬಂದ ಅಪರಿಚಿತ ಯುವಕ ಮಕ್ಕಳಿಗೆ ಮಾತನಾಡಿಸಿದ್ದಾನೆ. ಆತನ ವರ್ತನೆಯಿಂದ ಭಯಬಿದ್ದ ಮಗುವೊಂದು ಕಿರಿಚಾಡುತ್ತ ಮನೆ ಒಳಗೆ ಹೋಗಿ ಪೋಷಕರಿಗೆ ತಿಳಿಸಿದ್ದು, ಗಾಬರಿಗೊಂಡ ಪೋಷಕರು ಹೊರಗೆ ಬರುತ್ತಿದ್ದಂತೆ ಆ ಯುವಕ ಓಡಿ ಹೋಗಿದ್ದಾನೆ.

ಈ ಘಟನೆಯ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಕ್ಕಳ ಕಿಡ್ನ್ಯಾಪ್‌ಗೆ ಯತ್ನ ನಡೆದಿದೆ ಎಂಬ ಸುದ್ದಿ ಮಾಧ್ಯಮ, ಸಾಮಾಜಿಕ ಜಾಲತಾಣಗಳ ಮೂಲಕ ಹರಡುತ್ತಿದ್ದಂತೆ ಜಿಲ್ಲೆಯಲ್ಲಿ ಮಕ್ಕಳ ಬಗ್ಗೆ ಪೋಷಕರಲ್ಲಿ ಭಯ ಹುಟ್ಟಿಸಿದೆ. ಮಕ್ಕಳ ತಂದೆಯ ದೂರಿನ ಮೇರೆಗೆ ತನಿಖೆ ಆರಂಭಿಸಿದ ಗಾಂಧಿ ಗಂಜ್ ಠಾಣೆಯ ಪೊಲೀಸರು, ಸಿಸಿ ಕ್ಯಾಮೆರಾದ ಫೂಟೇಜ್ ಮೇಲೆ ಯುವಕನನ್ನು ತಾಲೂಕಿನ ಸಿರ್ಸಿ ಔರಾದ ಗ್ರಾಮದ ಮಲ್ಲಿಕಾರ್ಜುನ ಎಂದು ಗುರುತಿಸಿದ್ದಾರೆ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಚಿಕ್ಕಪ್ಪನ ಮಗಳ ಮದುವೆ ಆಮಂತ್ರಣ ಚೀಟಿಯನ್ನು ಕೊಡಲು ಮಕ್ಕಳಿಗೆ ಸಂಬಂಧಿಕರ ಮನೆಯ ವಿಳಾಸ ಕೇಳಿದ್ದೆ. ಗಾಬರಿಯಿಂದ ಅವರ ಪೋಷಕರು ಹೊರಗೆ ಬಂದಿದ್ದರಿಂದ ಭಯಗೊಂಡು ಓಡಿ ಹೋಗಿದ್ದೇನೆ. ಯಾವುದೇ ಮಕ್ಕಳ ಅಪಹರಣ ಮಾಡಲು ಅಲ್ಲ ಎಂದು ವಿಚಾರಣೆ ವೇಳೆ ತಿಳಿಸಿದ್ದಾಗಿ ಜಿಲ್ಲಾ ಎಸ್‌ಪಿ ಪ್ರದೀಪ್ ಗುಂಟಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ. ತನಿಖೆ ವೇಳೆ ಮಲ್ಲಿಕಾರ್ಜುನ ತಂಗಿಯ ಮದುವೆ ಇರುವುದು ಖಚಿತವಾಗಿದೆ. ಯುವಕನ ಯಾವುದೇ ಅಪರಾಧಿಕ ಹಿನ್ನಲೆಯೂ ಇಲ್ಲದಿರುವುದು ಗೊತ್ತಾಗಿದೆ. ತನಿಖೆ ಇನ್ನೂ ಮುಂದುವರೆದಿದ್ದು, ಇದಕ್ಕೆ ಸಹಕರಿಸುವಂತೆ ಯುವಕನಿಗೆ ಸೂಚಿಸಲಾಗಿದೆ ಎಂದು ಎಸ್‌ಪಿ ಗುಂಟಿ ಹೇಳಿದ್ದಾರೆ. ಕಿಡ್ನ್ಯಾಪ್ ವಿಫಲ ಯತ್ನ ಕುರಿತು ಯಾವುದೇ ಪ್ರಕರಣ ದಾಖಲಾಗಿಲ್ಲ.

# ವೀರಭದ್ರೇಶ್ವರ ದೇವಸ್ಥಾನ ಜಾತ್ರೆ 18 ರಿಂದ





ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 16 : ತಾಲ್ಲೂಕಿನ ಗುನ್ನಳ್ಳಿ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದ 12ನೇ ಜಾತ್ರಾ ಮಹೋತ್ಸವ ಏಪ್ರಿಲ್ 18 ರಿಂದ 20 ರ ವರೆಗೆ ನಡೆಯಲಿದೆ. ಏಪ್ರಿಲ್ 18 ರಂದು ಸಂಜೆ 6ಕ್ಕೆ ಗ್ರಾಮದಲ್ಲಿ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ಶೋಭಾಯಾತ್ರೆ, ದೇವಸ್ಥಾನದಲ್ಲಿ ಸಂಜೆ 7ಕ್ಕೆ ನಂದಿ ಮೂರ್ತಿ ಸ್ಥಾಪನೆ, ನೂತನ ರಥಕ್ಕೆ ಪೂಜೆ ಹಾಗೂ ರಾತ್ರಿ 8ಕ್ಕೆ ಧರ್ಮ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಬೀದರ ಗಾಂಧಿ ಗಂಜ್ ಸಹಕಾರ ಬ್ಯಾಂಕ ಉಪಾಧ್ಯಕ್ಷರೂ ಆದ ವೀರಭದ್ರೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷ ಸುನೀಲಕುಮಾರ ಬಿರಾದಾರ ತಿಳಿಸಿದ್ದಾರೆ.

ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಧರ್ಮಸಭೆಯ ಸಾನಿಧ್ಯ ವಹಿಸುವರು. ತಡೋಳಾದ ರಾಜೇಶ್ವರ ಶಿವಾಚಾರ್ಯರು ನೇತೃತ್ವ ವಹಿಸುವರು. ಲಾಡಗೇರಿಯ ಗಂಗಾಧರ ಶಿವಾಚಾರ್ಯರು, ಖಟಕ ಚಿಂಚೋಳಿಯ ಗುರುಪಾದಯ್ಯ ಸ್ವಾಮೀಜಿ ಸಮ್ಮುಖ ವಹಿಸುವರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸುವರು. ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅಧ್ಯಕ್ಷತೆ ವಹಿಸುವರು. ಸಂಸದ ಸಾಗರ್ ಖಂಡ್ರೆ, ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ, ಮಾಜಿ ಶಾಸಕ ಅಶೋಕ್ ಖೇಣಿ, ಮುಖಂಡ ಚಂದ್ರಾಸಿಂಗ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸರಸ್ವತಿ ಘಾಳೆಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಹೇಳಿದ್ದಾರೆ. 19 ರಂದು ಸಂಜೆ 5ಕ್ಕೆ ವೀರಭದ್ರೇಶ್ವರ ಮೂರ್ತಿಗೆ ರುದ್ರಾಭಿಷೇಕ, ಸಂಜೆ 6ಕ್ಕೆ ಅಕ್ಕ ಮಹಾದೇವಿ ಮಹಿಳಾ ಮಂಡಳ ವತಿಯಿಂದ ಕೋಲಾಟ ನಡೆಯಲಿದೆ. 20 ರಂದು ನಸುಕಿನ ಜಾವ 5ಕ್ಕೆ ರುದ್ರಾಭಿಷೇಕ, ಬೆಳಿಗ್ಗೆ 6ಕ್ಕೆ ಪಲ್ಲಕ್ಕಿ ಮೆರವಣಿಗೆ, ಬೆಳಿಗ್ಗೆ 7ಕ್ಕೆ ಅಗ್ನಿ ಕುಂಡದ ಪೂಜೆ, ಮಧ್ಯಾಹ್ನ 12ಕ್ಕೆ ಮಹಾ ಪ್ರಸಾದ ವಿತರಣೆ, ಸಂಜೆ 6ಕ್ಕೆ ರಥೋತ್ಸವ, ರಾತ್ರಿ 8ಕ್ಕೆ ಕೋಲಾಟ ಮತ್ತು ರಾತ್ರಿ 9ಕ್ಕೆ ಭಜನೆ ಜರುಗಲಿದೆ ಎಂದು ತಿಳಿಸಿದ್ದಾರೆ.

ಜಾತ್ರಾ ಮಹೋತ್ಸವದಲ್ಲಿ ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.

## ಬಿ.ಎಡ್. ಪರೀಕ್ಷೆಯಲ್ಲಿ ಸಾಧನೆ: ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 15 : ಬಿ.ಎಡ್. ಹಾಗೂ ಇತರ ಪರೀಕ್ಷೆಗಳಲ್ಲಿ ಸಾಧನೆಗೈದ ದತ್ತಗಿರಿ ಬಿ.ಎಡ್. ಕಾಲೇಜು ವಿದ್ಯಾರ್ಥಿ ಮಲ್ಲಿಕಾರ್ಜುನ ಚಂದ್ರಕಾಂತ ಹಂಡೆ ಅವರನ್ನು ನಗರದ ದತ್ತಗಿರಿ ಬಿ.ಎಡ್. ಕಾಲೇಜಿನಲ್ಲಿ ಈಚೆಗೆ ಸನ್ಮಾನಿಸಲಾಯಿತು. ಪ್ರಾಚಾರ್ಯ ಡಾ. ರಾಮದಾನಿ ಅವರು ಶಾಲು ಹೊದಿಸಿ ಸನ್ಮಾನಿಸಿದರು. ಮಲ್ಲಿಕಾರ್ಜುನ ಅವರು ಬಿ.ಎಡ್. ಪರೀಕ್ಷೆಯಲ್ಲಿ ಶೇ 90 ರಷ್ಟು ಅಂಕ ಗಳಿಸಿದ್ದಾರೆ. ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ, ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯಲ್ಲಿ ಮೊದಲ ಯತ್ನದಲ್ಲೇ ತೇರ್ಗಡೆಯಾಗಿದ್ದಾರೆ. ಯುಜಿಸಿ ನೆಟ್‌ನಲ್ಲೂ ಉತ್ತೀರ್ಣರಾಗಿದ್ದಾರೆ. ಮೂಲತಃ ಔರಾದ್ ತಾಲ್ಲೂಕಿನ ನಾಗನಪಲ್ಲಿ ಗ್ರಾಮದವರಾಗಿದ್ದಾರೆ.

ಕಾಲೇಜು ಸಿಬ್ಬಂದಿ ಹಾಜರಿದ್ದರು.

# ನೀರಿನ ಸಮಸ್ಯೆ ಪಿಡಿಓ ಅವರನ್ನು ತರಾಟೆಗೆ ತೆಗೆದುಕೊಂಡ ಗ್ರಾಮಸ್ಥರು



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ತಾಲ್ಲೂಕಿನ ಹತ್ತಿಕುಣಿ ಗ್ರಾಮದಲ್ಲಿ ಕಳೇದ 2–3 ದಿನಗಳಿಂದ ಜನರಿಗೆ ಕುಡಿಯುವ ನೀರು ಪೂರೈಸುವ 3 ಮೋಟರ್(ಯಂತ್ರಗಳು) ಸುಟ್ಟಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿ ಉದ್ಭವಿಸಿದೆ, ಪರಿಣಾಮ ರೊಚ್ಚಿಗೆದ್ದ ಗ್ರಾಮಸ್ಥರು ಮಂಗಳವಾರ ಬೆಳಿಗ್ಗೆ ಗ್ರಾಮ ಪಂಚಾಯತಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಗ್ರಾಮದ ಮುಖಂಡ ಚಂದ್ರಶೇಖರ ಪಾಟೀಲ್ ನೇತೃತ್ವದಲ್ಲಿ ಸಹಸ್ರಾರು ಜನರು ಪಂಚಾಯತಗೆ ಆಗಮಿಸಿ ಗ್ರಾಮದಲ್ಲಿ ಜನರು ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಎಳೆಎಳೆಯಾಗಿ ಬಿಡಿಸಿ, ತಮ್ಮ ಅಸಮಧಾನವನ್ನು ಪಂಚಾಯತ ಆಡಳಿತ ಮಂಡಳಿ ವಿರುದ್ಧ ಸ್ಥಳಕ್ಕೆ ಅಭಿವೃದ್ಧಿ ಅಧಿಕಾರಿ ಬರಬೇಕು, ಸಮಸ್ಯೆ ಬಗೆಹರಿಸಬೇಕು ಎಂದು ಪಟ್ಟುಹಿಡಿದು 2–3 ಗಂಟೆಗಳ ಕಾಲ ಅಲ್ಲಿಯೇ ಟಿಕಾಣಿ ಹೂಡಿದರು.

ಕೊನೆಗೆ ಗ್ರಾಮಸ್ಥರ ಆಕ್ರೋಶ ಅರಿತ ಪಿಡಿಓ ನಿಂಗಣ್ಣ ಪಂಚಾಯತಗೆ ಆಗಮಿಸಿ ಯಂತ್ರಗಳು ಸುಟ್ಟಿರುವ ವಿಷಯ ಪ್ರಸ್ತಾಪಿಸುತ್ತಿದ್ದಂತೆ ಗ್ರಾಮಸ್ಥರು ಸಿಟ್ಟಿಗೆದ್ದು ಸರ್ಕಾರ ನಿನಗೆ ನಮ್ಮ ತೆರಿಗೆ ಹಣದಲ್ಲಿ ಸಂಬಳ ಕೊಡುತ್ತದೆ, 3 ದಿನಗಳಿಂದ ವಿದ್ಯುತ್ ಸರಿಯಾಗಿ ಪೂರೈಕೆಯಾಗುತ್ತಿಲ್ಲ, ಯಂತ್ರಗಳು ದುರಸ್ಥಿ ಮಾಡಿಲ್ಲ, 2 ದಿನಗಳಲ್ಲಿ ಗ್ರಾಮದಲ್ಲಿ ಹಜರತ್ ಬಂದಗಿ ಸಾಹೇಬ್ ಭಾವೈಕ್ಯತೆ ಜಾತ್ರೆ ಇದೆ, ಗ್ರಾಮದಲ್ಲಿ 10 ಸಾವಿರಕ್ಕೂ ಹೆಚ್ಚು ಜನರು ವಾಸಿಸುತ್ತಿದ್ದಾರೆ, ಗ್ರಾಮಕ್ಕೆ ಬೇರೆ ನಗರಗಳಿಂದ ಸಾವಿರಾರು ಜನರು ಮರಳಿದ್ದಾರೆ, ಹಳ್ಳದಲ್ಲಿ ಸಂಗ್ರಹವಿರುವ ಮಲೀನ ನೀರು ಅನಿವಾರ್ಯವಾಗಿ ತೆಗೆದುಕೊಂಡು ಬಂದು, ಉಪಯೋಗಿಸುತ್ತಿದ್ದಾರೆ, ಸಾಂಕ್ರಾಮಿಕ ರೋಗಗಳು ಉದ್ಭವಿಸಿದರೇ ಅದಕ್ಕೆ ಯಾರೂ ಕಾರಣರೂ ಎಂದು ಪ್ರಶ್ನಿಸಿದರು.

ಕುಡಿಯುವ ನೀರಿನ ಸಮಸ್ಯೆಗೆ ಯಾವುದೇ ತೊಂದರೆ ಕಂಡು ಬಂದರೇ ಅನುದಾನದ ಕೊರತೆಯಿಲ್ಲ ಎಂದು ಶಾಸಕರು, ಜಿಲ್ಲಾಧಿಕಾರಿಗಳು ಹೇಳಿದ್ದಾರೆ, ಆದರೆ ಇಲ್ಲಿ ನಿಮ್ಮ ನಿರ್ಲಕ್ಷದಿಂದ ಸಾವಿರಾರು ಜನರು ನರಕಯಾತನೆ ಅನುಭವಿಸುತ್ತಿದ್ದಾರೆ ಎಂದು ಛೀಮಾರಿ ಹಾಕಿದರು.

ನಂತರ ಅಧಿಕಾರಿ, ಸಿಬ್ಬಂದಿಗಳನ್ನು ಹಾಗೂ ಆಡಳಿತ ಮಂಡಳಿಯವರನ್ನು ಗ್ರಾಮದ ಪ್ರಮುಖ ಬೀದಿಗಳಿಗೆ ಕರೆದುಕೊಂಡು ಹೋಗಿ ಹದಗೆಟ್ಟಿರುವ ರಸ್ತೆಗಳು, ಚರಂಡಿಗಳು ಹಾಗೂ ಪೈಪಲೈನ್ ದುರಸ್ಥಿಗಳ ಸ್ಥಳಗಳನ್ನು ತೋರಿಸಿ, ಈ ಹಿಂದೆ ಕೈಗೊಂಡಿರುವ ಜಲ ಜೀವನ್ ಮಿಷನ್(ಜೆಜೆಎಂ) ಕಾಮಗಾರಿ ಪೂರ್ಣಗೊಂಡಿಲ್ಲ, ಅದಕ್ಕೆ ಕಾರಣವೇನು, ಎಂದು ಮನೆ–ಮನೆಗೆ ಎಲ್ಲಿ ನೀರು ಬರುತ್ತವೆ ತೋರಿಸಿ ಎಂದು ಅಸಮಧಾನ ವ್ಯಕ್ತಪಡಿಸಿ, ನಿಮ್ಮ ಕಾರ್ಯವೈಖರಿಯಲ್ಲಿ ಬದಲಾವಣೆ ಮಾಡಿಕೊಳ್ಳದಿದ್ದರೆ ನಾವೇ ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ಕೈಗೊಳ್ಳುತ್ತೇವೆ, ಅಲ್ಲದೇ ನ್ಯಾಯಾಲಯಕ್ಕೆ ತಮ್ಮ ವೈಫಲ್ಯಗಳ ಪಟ್ಟಿಗಳೊಂದಿಗೆ ಕೇಸ್ ದಾಖಲಿಸಲಾಗುವುದು ಎಂದು ಎಚ್ಚರಿಸಿದರು.

ಕೊನೆಗೆ ಸುಸ್ತಾದ ಪಂಚಾಯತ ಅಭಿವೃದ್ಧಿ ಅಧಿಕಾರಿ ಹಾಗೂ ಆಡಳಿತ ಮಂಡಳಿಯವರು ಇಂದು ಸಂಜೆಯೊಳಗೆ ಎಲ್ಲಾ ಯಂತ್ರಗಳನ್ನು ದುರಸ್ಥಿಗೊಳಿಸಿ ನಾಳೆ ಬೆಳಿಗ್ಗೆ ಜನರಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸಲಾಗುವುದು ಎಂದು ಭರವಸೆ ನೀಡಿದ ನಂತರ ಸಾರ್ವಜನಿಕರು ಸಮಾಧಾನಗೊಂಡರು.

# ಮದ್ದರಕಿ ಬಳಿ ದುರ್ಘಟನೆಗೀಡಾದವರಿಗೆ ಪರಿಹಾರ ನೀಡಿ



ಯಾದಗಿರಿ: ಶಹಾಪೂರ ತಾಲೂಕಿನ ಮದ್ದರು ಗ್ರಾಮದ ಹತ್ತಿರ ಭೀಕರ ರಸ್ತೆ ಅಪಘಾತದಲ್ಲಿ ದುರ್ಮರಣ ಹೊಂದಿದ ಯಾದಗಿರಿ ತಾಲೂಕಿನ ವರ್ಕನಳ್ಳಿ ಗ್ರಾಮದ 6 ಜನರಿಗೆ ತಲಾ ಒಬ್ಬರಿಗೆ ರೂ. 10.00 ಲಕ್ಷ ಪರಿಹಾರ ನೀಡಬೇಕು ಎಂದು ಯಾದಗಿರಿ ಜಿಲ್ಲಾ ವಾಲ್ಮೀಕಿ ನಾಯಕ ಸಂಘದವತಿಯಿಂದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಇದೇ ಮಾತನಾಡಿದ ಜಿಲ್ಲಾಧ್ಯಕ್ಷ ಗೌಡಪ್ಪಗೌಡ ಆಲ್ದಾಳ ಯಾದಗಿರಿ ತಾಲೂಕಿನ ವರ್ಕನಳ್ಳಿ ಗ್ರಾಮದ ರಸ್ತೆ ಅಪಘಾತದ ದುರಂತದಲ್ಲಿ ಸಾವಿಗೀಡಾದ ವಾಲ್ಮೀಕಿ ಜನಾಂಗದ ಚಾಲಕ ಶರಣಪ್ಪ ತಂ ಹಣಮಂತ, ಸೋಮವ್ವ ಗಂ/ಹಣಮಂತ, ತಂಗಮ್ಮ ಗಂ/ ಹುಲಿಯಪ್ಪ, ಸುನೀತಾ ತಂ/ ಮಲ್ಲೇಶಪ್ಪ, ಹಣಮಂತಿ ಗಂ/ ಮಲ್ಲಯ, ಬಾಲಮ್ಮ ಗಂ/ಹಣಮಂತ ಮೃತ ಕುಟುಂಬದವರಿಗೆ ತಲಾ ರೂ. 10.00 ಲಕ್ಷ ಪರಿಹಾರ ಹಾಗೂ 10 ಕ್ಕಿಂತ ಹೆಚ್ಚು ಜನರು ಕೈ–ಕಾಲು ಮುರಿದುಕೊಂಡು ಅಂಗವಿಕಲರಾಗಿರುವವರಿಗೆ ವೈದ್ಯಕೀಯ ವೆಚ್ಚಕ್ಕಾಗಿ ರೂ. 3.00 ಲಕ್ಷ ಪರಿಹಾರ ಕೂಡಲೇ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು. ಶಹಾಪೂರ ತಾಲೂಕಿನ ಮದ್ರಿಕಿ ಗ್ರಾಮದ ಹತ್ತಿರ ಬಸ್ ಮತ್ತು ಮಹೀಂದ್ರಾ ಪಿಕಪ್ ವಾಹನ ಪರಸ್ಪರ ಡಿಕ್ಕಿ ಹೊಡೆದು. 6 ಜನ ದುರ್ಮರಣ ಹೊಂದಿದ್ದು ಯಾದಗಿರಿ ತಾಲೂಕಿನ ವರ್ಕನಳ್ಳಿ ಗ್ರಾಮದ ಪರಿಶಿಷ್ಟ ಪಂಗಡದ (ಬೇಡ ಜನಾಂಗದ) ತೀರಾ ಬಡತನದ ಕುಟುಂಬದಲ್ಲಿ ದುಡಿಯುವ ವ್ಯಕ್ತಿಗಳಾಗಿದ್ದು, ಹಾಗೂ 10 ಜನರಿಗಿಂತ ಹೆಚ್ಚು ಜನರು ಕೈ–ಕಾಲುಗಳು ಮುರಿದು ಹೋಗಿದ್ದು, ಶರಣಬಸಪ್ಪಗೌಡ ದರ್ಶನಾಪೂರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಯಾದಗಿರಿ ಮತಕ್ಷೇತ್ರದ ಶಾಸಕರಾದ ಚೆನ್ನಾರೆಡ್ಡಿ ಪಾಟೀಲ್ ತುನ್ನೂರುರವರು ಹಾಗೂ ಸಾರಿಗೆ ಸಚಿವರು ಕೂಡಾ ಮಾನ್ಯ ಮುಖ್ಯಮಂತ್ರಿಯವರಿಗೆ ಸಂಪರ್ಕಿಸಿ ಕೂಡಲೇ ಪರಿಹಾರ ಘೋಷಣೆ ಮಾಡಬಹುದಾಗಿತ್ತು. ಸರ್ಕಾರ ದಿವ್ಯ ನಿರ್ಲಕ್ಷ್ಯತನ ಮಾಡಲಾಗಿದೆ ಎಂದು ಆಕ್ರೋಶವ್ಯಕ್ತಪಡಿಸಿದರು.

ಪರಿಶಿಷ್ಟ ಪಂಗಡದ ಮೀಸಲಾತಿಯಲ್ಲಿ ಗೆದ್ದಿರುವ ಹಾಲಿ ಮತ್ತು ಮಾಜಿ ಶಾಸಕರು ಹಾಗೂ ಹಾಲಿ ಮತ್ತು ಮಾಜಿ ಸಂಸದರು ಈ ದುರದಂತದ ಬಗ್ಗೆ ತುಟಿ ಬಿಚ್ಚದೇ ನಿರ್ಲಕ್ಷ್ಯತನ ವಹಿಸಿರುವುದು ದುರದೃಷ್ಟಕರ ನಡೆ, ನಾಚಿಕೆಗೇಡಿತನ ಸಂಗತಿಯಾಗಿದೆ. ಕನಿಷ್ಠ ಸೌಜನ್ಯಕ್ಕಾದರೂ ಮೃತ ಕುಟುಂಬಸ್ಥರಿಗೆ ಧೈರ್ಯ ತುಂಬುವ, ಸಾಂತ್ವನದ ಕೆಲಸ ಮಾಡಲಿಲ್ಲ. ಮತ್ತು ಜಿಲ್ಲಾಡಳಿತವೂ ಕೂಡಾ ಮೌನಕ್ಕೆ ಶರಣಾಗಿರುವುದು ಆಶ್ಚರ್ಯವಾಗಿದೆ. ಮೃತರ ಕುಟುಂಬಗಳಿಗೆ ಪರಿಹಾರ ಘೋಷಣೆ ಮಾಡದೇ ಇರುವ ರಾಜ್ಯ ಸರ್ಕಾರದ ನಡೆಯನ್ನು ತೀವ್ರವಾಗಿ ಖಂಡಿಸುತ್ತೇವೆ. ಬೇರೆ–ಬೇರೆ ಕಡೆ ಇಂತಹ ದುರ್ಘಟನೆ ಸಂಭವಿಸಿದಾಗ ಸರ್ಕಾರಗಳು ಕೂಡಲೇ ಸ್ಪಂದಿಸಿ, ಪರಿಹಾರ ಘೋಷಣೆ ಮಾಡಿರುತ್ತದೆ. ವಾಲ್ಮೀಕಿ ಸಮಾಜದ ಮುಗ್ಧ ಜನರನ್ನು ಮತ ಬ್ಯಾಂಕಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಬಡವರ ಬಗ್ಗೆ ಕಷ್ಟದ ಪರಿಸ್ಥಿತಿಯಲ್ಲಿ ಸಹಾಯಕ್ಕೆ ಬರದಿದ್ದರೆ ನೀವುಗಳು ಜನಪ್ರತಿನಿಧಿಯಾಗಿ ಆಯ್ಕೆಯಾಗಿರುವುದು ಯಾವ ಕಾರಣಕ್ಕೆ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿಗಳು ಜಿಲ್ಲಾ ಉಸ್ತುವಾರಿ ಸಚಿವರಿಂದ, ಜಿಲ್ಲಾಡಳಿತದಿಂದ ಮಾಹಿತಿ ಪಡೆದು ಸರ್ಕಾರ ಪರಿಹಾರ ಘೋಷಣೆ ಮಾಡಬಹುದಾಗಿತ್ತು. ಇಂತಹ ತಾರತಮ್ಯ ನೀತಿಯನ್ನು ವಾಲ್ಮೀಕಿ ಸಮಾಜ ತೀವ್ರವಾಗಿ ಖಂಡಿಸುತ್ತದೆ ಎಂದರು. ಸರ್ಕಾರದ ನಿರ್ಲಕ್ಷ್ಯತನವನ್ನು ಖಂಡಿಸಿ ಮುಂದಿನ ಹೋರಾಟಕ್ಕೆ ಅಣಿಯಾಗಬೇಕಾಗುತ್ತದೆ ಎಂದು ತಿಳಿಸುತ್ತಾ ಕೂಡಲೇ ಪರಿಹಾರ ಘೋಷಣೆ ಮಾಡಲು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಾಲ್ಮೀಕಿ ಸಮಾಜ ಉ.ಕ. ರಾಜ್ಯಾಧ್ಯಕ್ಷರಾದ ಮಾರೆಪ್ಪ ನಾಯಕ ಮೊಗ್ರಂಪೂರ, ಯಾದಗಿರಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಲಿಂಗಪ್ಪ ನಾಯಕ, ತಾಲೂಕು ಅಧ್ಯಕ್ಷರಾದ ಸಾಹೇಬಗೌಡ ನಾಯಕ ಗೌಡಗೇರಾ, ಮರೆಪ್ಪ ಪ್ಯಾಟಿ ಶಹಾಪೂರ, ಭೀಮಣ್ಣಗೌಡ ಸುರಪೂರ, ಚಂದ್ರಕಾಂತ ಹತ್ತಿಕುಣಿ, ಮಲ್ಲಿಕಾರ್ಜುನ, ಹಣಮಂತ ಖಾನಳ್ಳಿ, ಶರಣಪ್ಪ ಜಾಕನಳ್ಳಿ, ಶ್ರೀನಿವಾಸ ದೊರೆ, ನಾಗರಾಜ ನಾಯಕ ಪ್ಯಾಪ್ಲಿ, ಭೀಮು ನಾಯಕ ಮಲ್ಲಿಬಾವಿ, ಸಂಜೀವ ನಾಯಕ, ವಿಜಯಕುಮಾರ ನಾಯಕ ಚಿಟ್ಟಿ, ಶೇಖರ ದೊರೆ ಕಕ್ಕಸಗೇರಾ, ತಿರುಪತಿ ಯಖ್ಲಿಂತಿ, ಮಂಜು ನಾಯಕ ಬೈರಿಮಡ್ಡಿ, ಬಸವರಾಜ ಗೊಂದೆನೋರು, ಭೀಮರಾಯ ರಾಮಸಮುದ್ರ, ಈಶಪ್ಪ ಹೆಡಗಿಮದ್ರಾ, ಸಿದ್ದಪ್ಪ ಕ್ಯಾಸಪನಹಳ್ಳಿ, ವಿಶ್ವನಾಥ ಠಾಣಗುಂದಿ, ಸಾಬು ನೀಲಹಳ್ಳಿ, ಕಾಶಪ್ಪ ಅಬ್ಬೆತುಮಕೂರು, ಮೋನಪ್ಪ ಯಾದಗಿರಿ, ಹಣಮಂತ ಬಾಲಚೇಡ, ಭೀಮರಾಯ ಮಲ್ಹಾರ, ಆಂಜನೇಯ ಮಲ್ಹಾರ, ಆಂಜನೇಯ ವರ್ಕನಳ್ಳಿ, ಅಂಬು ನಾಯಕ ಹತ್ತಿಕುಣಿ, ದೇವರಾಜ ವರ್ಕನಳ್ಳಿ, ಮಲ್ಲಿಕಾರ್ಜುನ ಬುದೂರು, ಭೀಮಣ್ಣ ವರ್ಕನಳ್ಳಿ, ರಾಮಣ್ಣಗೌಡಗೇರಾ, ಅಂಬಣ್ಣ ಗೌಡಗೇರಾ, ಮಲ್ಲಿಕಾರ್ಜುನ ನೀಲಹಳ್ಳಿ, ಮಂಜುನಾಥ ಬಳಿಚಕ್ರ ಸೇರಿದಂತೆ ಇತರರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು

# ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು:ಭೀಮುನಾಯಕ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಇಂದು ನಗರದ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರ 134ನೇ ಜಯಂತೋತ್ಸವ ನಿಮಿಇತ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚಾಣೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿ ಮಾತನಾಡಿದರು. ಪ್ರತಿಯೊಬ್ಬ ಭಾರತೀಯನಿಗೂ ಏಪ್ರಿಲ್ 14 ದಿನ ಮಹತ್ವದ ದಿನವಾಗಿದೆ. ಮಹಿಳೆಯರ ಪ್ರಗತಿ. ಸಮಾಜದ ಏಳಿಗೆಯ ಕನಸು ಕಂಡಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅಸಮಾನತೆಯ ಅಸ್ಪೃಶ್ಯತೆಯ ವಿರುದ್ಧ ಧನಿ ಎತ್ತಿ ಸಮಾಜವನ್ನು ಸಮಾನತೆಗಾಗಿ ಭವ್ಯ ಭಾರತದ ನಿರ್ಮಾಣದತ್ತಗಮನಹರಿಸಿದ್ದವರು. ಅವರ ಜೀವನದ ಕೊನೆಯ ತನಕ ಸಮಾಜದ ಉನ್ನತಿಗಾಗಿ ಕೆಲಸ ಮಾಡಿದ್ದವರು ಎಂದು ಹೇಳಿದರು.

ಸಂವಿಧಾನವು ಭಾರತದ ಪವಿತ್ರ ಗ್ರಂಥ ಇದು ನಮ್ಮ ಬದುಕಿಗೆ ದಾರಿ. ಈ ಪವಿತ್ರ ಗ್ರಂಥದ ಮೂಲಕ ಪ್ರಜಾಪ್ರಭುತ್ವಕ್ಕೊಂದು ಅರ್ಥ ಕಲ್ಪಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಈ ಪವಿತ್ರ ಗ್ರಂಥವನ್ನು ನಮಗೆ ನೀಡಿದವರು ಎಲ್ಲರ ಪಾಲನ ಸ್ಫೂರ್ತಿಯ ಚಿಲುಮೆ ಡಾ.ಬಾಬಾ ಸಾಹೇಬ್. ಅವರ ಬಾಲ್ಯದ ದಿನಗಳು ಬಲು ಕಷ್ಟದಿಂದಲೇ ಕೂಡಿತ್ತು. ಅಸ್ಪೃಶ್ಯತೆ, ಅಸಮಾನತೆಯ ನೋವಿನ ನಡುವೆ ಬೆಳೆದಿದ್ದ ಬಾಬಾ ಸಾಹೇಬ ಅವರು ಬಳಿಕ ವಿಶ್ವವೇ ಗೌರವಿಸುವಂತಹ ನಾಯಕರಾಗಿ ರೂಪಗೊಂಡವರು ಅದೆಷ್ಟೋ ಜನರಿಗೆ ಸ್ಫೂರ್ತಿಯಾಗಿದ್ದಾರೆ. ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಪ್ರೇರಣೆಯಾಗಿದ್ದಾರೆ ಎಂದು ತಿಳಿಸಿದರು.

ಸಮಾಜದಲ್ಲಿ ಹಿಂದುಳಿದ ವರ್ಗಗಳ ಹಕ್ಕಿಗಾಗಿ ತಮ್ಮ ಜೀವನವನ್ನು ಮುಡಿಪಿಟ್ಟ ಶ್ರೇಷ್ಠ ವ್ಯಕ್ತಿತ್ವ ಅವರದಾಗಿದ್ದು, ಸ್ವಾತಂತ್ರ್ಯ, ಸಮಾನತೆ ಮತ್ತು ಬ್ರಾತ್ರುತ್ವದ ಮೂಲಕ ಜಾತ್ಯಾತೀತ ಮತ್ತು ಸಮಾಜವಾದಿ ಪ್ರಜಾಪ್ರಭುತ್ವದ ದೇಶ ಕಟ್ಟಲು ಮಹಾನ್ ನಾಯಕ ಡಾ.ಬಿ.ಆರ್. ಅಂಬೇಡ್ಕರ್ ಎಳೆದು ತಂದು ನಿಲ್ಲಿಸಿದ ರಥವನ್ನು ಮುಂದಕ್ಕೆ ಒಯ್ಯಲು ನಾವೆಲ್ಲ ಕೈಜೋಡಿಸಬೇಕೆಂದು ನುಡಿದರು,

ಈ ವೇಳೆ ಕರವೇ ಮುಖಂಡರಾದ ಸಂತೋಷಕುಮಾರ ನಿರ್ಮಲಕರ್, ಸಿದ್ದುನಾಯಕ ಹತ್ತಿಕುಣಿ, ಯಮನಯ್ಯ ಗುತ್ತೇದಾರ, ವಿಶ್ವ–ರಾಜ ಪಾಟೀಲ್, ಭೀಮರಾಯ ರಾಮಸಮುದ್ರ, ವಿಜಯಕುಮಾರ ರಾಠೋಡ, ಅನೀಲ ದಾಸನಕೇರಿ, ಮಲ್ಲಿಕಾರ್ಜುನ ಕನ್ನಡಿ, ಮಹೇಶ ಠಾಣಗುಂದಿ, ಜರ್ನಾಧನ ಬಡಿಗೇರಾ ಚಾಮನಳ್ಳಿ, ಬಸವಾರಜ ಚಾಮಾ, ಯಲ್ಲಾಲಿಂಗ ಚಾಮನಳ್ಳಿ, ಆನಂದ, ಹಣಮಂತ ದೊರೆ, ಮಂಜು ನಾಯ್ಕೋಡಿ, ಧವನ್ ಕಪ್ಪನೋರ್, ಅಂಜುನಾಯಕ ಪ್ಯಾಪ್ಲಿ, ನಾಗರಾಜ ಪಿಲ್ಲಿ, ಶರಣು ಹಬಳ್ಳಿ, ರಮೇಶ.ಡಿ.ನಾಯಕ ಸೇರಿದಂತೆ ಇತರರಿದ್ದರು.

ಸ್ತ್ರೀ ಚೇತನ ಅಭಿಯಾನ, ಕೂಲಿ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಶಿಬಿರಕ್ಕೆ ಚಾಲನೇ

# ನರೇಗಾ ಕೂಲಿ 370 ಕ್ಕೆ ಹೆಚ್ಚಳ, ಪ್ರತಿಯೊಬ್ಬರು ಲಾಭ ಪಡೆದುಕೊಳ್ಳಿ: ಎ.ಡಿ.ಮಹ್ಮದ್ ಸಲೀಂ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: ಜೀವನಕ್ಕೆ ಉದ್ಯೋಗ ಎಷ್ಟು ಮುಖ್ಯವೋ, ಆರೋಗ್ಯ ವಂತ ಜೀವನವು ಅಷ್ಟೆ ಮುಖ್ಯವಾಗಿದೆ ಎಂದು ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರಾದ (ನರೇಗಾ) ಮಹ್ಮದ್ ಸಲೀಂ ಅವರು ಹೇಳಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಆರೋಗ್ಯ ಇಲಾಖೆ ಮತ್ತು ಐ.ಇ.ಸಿ. ಸಂಯುಕ್ತಾಶ್ರಯದಲ್ಲಿ ಮಂಗಳವಾರ ಮಂಠಾಳ ಗ್ರಾಮದಲ್ಲಿ ದುಡಿಯೋಣ ಬಾ, ಸ್ತ್ರೀ ಚೇತನ ಅಭಿಯಾನ ಹಾಗೂ ನರೇಗಾ ಕೂಲಿ ಕಾರ್ಮಿಕರಿಗೆ ಹಮ್ಮಿಕೊಂಡ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯು ಬಡವರ ಅನೂಕುಲಕ್ಕಾಗಿ ಜಾರಿ ಮಾಡಿರುವದ ಕಾಯ್ದೆಯಾಗಿದ್ದು. ಪ್ರತಿಯೊಬ್ಬರು ಇದರ ಲಾಭ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಾಗೂ ಪ್ರಸಕ್ತ ವರ್ಷ ದಿಂದ 349 ದಿಂದ 370 ಕ್ಕೆ ಕೂಲಿಯನ್ನು ಹೆಚ್ಚಳ ಮಾಡಲಾಗಿದೆ. ಆದ್ದ–ರಿಂದ ಮಹಿಳೆಯರು, ವೃದ್ಧರು ಮತ್ತು ವಿಶೇಷ ಚೇತನರು ಇದರ ಸದುಪಯೋಗ ಪಡೆದುಕೊಳ್ಳುವ ಮೂಲಕ ಸ್ವಾಲಂಬಿ ಜೀವನ ಸಾಗಿಸಬೇಕು ಎಂದರು.

ಕಲುಷಿತ ವಾತವರಣ ದಿಂದ ನಮ್ಮ ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮಗಳು ಬೀಳುವ ಸಾಧ್ಯತೆಗಳಿವೆ. ಆದ್ದರಿಂದ ಆರೋಗ್ಯದ ಕಡೆ ಗಮನ ಹರಿಸುವುದು ತುಂಬಾ ಮುಖ್ಯವಾಗಿದೆ. ಅದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯರ ಸಲಹೆದಂತೆ ಚಿಕಿತ್ಸೆ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಹಾಂತೇಶ ಸಲಗರ ಅವರು ಮಾತನಾಡಿ, ಮಹಿಳಾ ಕೂಲಿ ಕಾರ್ಮಿಕ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ನರೇಗಾ ಕಾಮಗಾರಿಯಲ್ಲಿ ಭಾಗವಹಿಸಬೇಕು ಮತ್ತು ಆರೋಗ್ಯ ಶಿಬಿರವು ನಾವು ಹಂತ–ಹಂತವಾಗಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಹಮ್ಮಿಕೊಳ್ಳುವ ಮೂಲಕ ತಪಾಸಣೆ ನಡೆಸಲಾಗುವುದು ಎಂದರು.

ಆರ್.ಡಿ.ಪಿ.ಆರ್.ಫೆಲ್ಲೋ ಶ್ರುತಿ ಅವರು ಮಾತನಾಡಿ, ನರೇಗಾ ಯೋಜನೆಯಡಿ ಕೆಲಸ ಮಾಡುವ ಕಾರ್ಮಿಕರ ಮಕ್ಕಳ (6 ತಿಂಗಳಿಂದ 3 ವರ್ಷ) ಲಾಲನೆ–ಪಾಲನೆ ಮಾಡಲು ಆಯಾ ಗ್ರಾಮ ಪಂಚಾಯತ್ ಗಳಲ್ಲಿ ಕೂಸಿನ ಮನೆ ಪ್ರಾರಂಭಿಸಲಾಗಿದೆ ಎಲ್ಲಾ ತಾಯಿಂದಿಯರು ಅದರ ಸದುಪಯೋಗ ಪಡೆದುಕೊಳ್ಳಬೇಕು ಮತ್ತು ಪ್ರತಿಯೊಂದು ಗ್ರಾಮ ಪಂಚಾಯತ್ ಯಲ್ಲಿ ಅರಿವು ಕೇಂದ್ರಗಳಿವೆ ಮಕ್ಕಳಿಗೆ ಬೇಸಿಗೆ ರಜೆ ಇರುವುದರಿಂದ ಮಕ್ಕಳನ್ನು ಗ್ರಂಥಾಲಯಕ್ಕೆ ಕಳಿಸಬೇಕು ಇದರಿಂದ ಮಕ್ಕಳಲ್ಲಿ ಓದುವ ಹವ್ಯಾಸ ಹೆಚ್ಚಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂ.ಸದಸ್ಯ ಬಸವರಾಜ ಶೆಟಗಾರ್, ಗ್ರಾ.ಪಂ.ಲೆಕ್ಕಸಹಾಯಕರು ಕುಮಾರ ಜಿ.ಪೂಜಾರಿ, ಐಇಸಿ ಸಂಯೋಜಕರಾದ ವೀರಾ–ರೆಡ್ಡಿ, ಡಿಇಓ ವಿರೇಶ, ಪ್ರಫುಲ್ ಕುಮಾರಸ್ವಾಮಿ, ಬಿಸಿ ಪ್ರಭು ಮುಖೆ ಹಾಗೂ ಗ್ರಾಮಸ್ಥರು ಇದ್ದರು.

# ಜೆಸ್ಕಾಂ ನಿರ್ಲಕ್ಷಕ್ಕೆ ಯುವಕ ಬಲಿ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ತುಂಡರಿಸಿ ಬಿದ್ದ ವಿದ್ಯುತ್ ಹೈಟೆನ್ಷನ್ ವಯರ್ ತಗುಲಿ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಯಾದಗಿರಿಯ ಮಾತಾಮಣಿಕೇಶ್ವರ ನಗರದಲ್ಲಿ ನಡೆದಿದೆ. ಮೃತರನ್ನು ವಡಗೇರಾ ತಾಲೂಕಿನ ಬಬಲಾದ ಗ್ರಾಮದ ನಿವಾಸಿ ಕಾಜಾ ಪಟೇಲ್ (23)



ಎಂದು ಗುರುತಿಸಲಾಗಿದೆ.

ಮೃತನು ಯಾದಗಿರಿಯ ಮಣಿಕೇಶ್ವರಿ ನಗರದಲ್ಲಿರುವ ಸಹೋದರಿ ಮನೆಗೆ ಬಂದು ವಾಪಸು ಹೋಗುತ್ತಿರುವ ವೇಳೆ ತುಂಡರಿಸಿ ಬಿದ್ದಿದ್ದ ವಯರ್ ತಗುಲಿ ಮೃತಪಟ್ಟಿದ್ದು ಜೆಸ್ಕಾಂ ಇಲಾಖೆ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ದಾಖಲಾಗಿದೆ.

# ಜಲಾಶಯ ನಿರ್ವಹಣೆ ಅನುದಾನ, ಸಿಬ್ಬಂದಿಗಳ ಕೊರತೆ ರೈತರ ಆಕ್ರೋಶ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ತಾಲ್ಲೂಕಿನ ಹತ್ತಿಕುಣಿ ವಲಯದ ರೈತರ ಜೀವನಾಡಿಯಾಗಿರುವ ಹತ್ತಿಕುಣಿ ಜಲಾಶಯ ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಬರುತ್ತದೆ, ಆದರೆ ಸಿಬ್ಬಂದಿಗಳ, ಅನುದಾನ ಕೊರತೆ ಹಾಗೂ ಸೂಕ್ತ ಕಾಲುವೆಗಳ ನಿರ್ಮಾಣವಿಲ್ಲದೇ ಆ ಭಾಗದ ರೈತರು ಕಳೆದ 8–10 ವರ್ಷಗಳಿಂದ ತೊಂದರೆ ಅನುಭವಿಸಿ, ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ದಟ್ಟ ಹಸಿರು ಬೆಟ್ಟಗಳ ಮಧ್ಯೆ ಹತ್ತಿಕುಣಿ ಜಲಾಶಯ 1975 ರಲ್ಲಿ ನಿರ್ಮಾಣ ಮಾಡಿ ಹತ್ತಿಕುಣಿ, ಕಟಗಿ ಶಹಾಪೂರ, ಹೊನಗೇರಾ, ಬಂದಳ್ಳಿ, ದಸರಾಬಾದ್, ಯಡ್ಡಳ್ಳಿ ಗ್ರಾಮಗಳ ರೈತರ ಸುಮಾರು 5300 ಎಕರೆ ಜಮೀನು ನೀರಾವರಿ ಕ್ಷೇತ್ರಕ್ಕೆ ಒಳಪಟ್ಟು ಮುಂಗಾರು ಬೆಳೆಯಾಗಿ ಭತ್ತ, ಹಿಂಗಾರು ಬೆಳೆಗಳಾಗಿ ಜೋಳ, ಶೇಂಗಾ, ಸಜ್ಜೆ ಇನ್ನಿತರ ಬೆಳೆಗಳನ್ನು ಬೆಳೆಯುತ್ತಾ, ಕೃಷಿಯನ್ನೆ ಅವಲಂಭಿಸಿ ಜೀವನ ಸಾಗಿಸುತ್ತಾ ಬಂದಿದ್ದಾರೆ,

ಆದರೆ ಈ ಜಲಾಶಯ ಹಾಗೂ ಸೌಧಾಗರ ಜಲಾಶಯ ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಸೇರಿಸಿರುವುದರಿಂದ ಸೌಧಾಗರ ಜಲಾಶಯ ವ್ಯಾಪ್ತಿಯ ಹತ್ತಿಕುಣಿ, ಯಡ್ಡಳ್ಳಿ, ಹೋರುಂಚಾ, ಚಾಮನಳ್ಳಿ, ಅಲ್ಲಿಪೂರ ಗ್ರಾಮಗಳ ರೈತರ ಸುಮಾರು 3500 ಎಕರೆ ಜಮೀನು ನೀರಾವರಿ ಕ್ಷೇತ್ರಕ್ಕೆ ಒಳಪಡುತ್ತದೆ, ಕಳೆದ 10 ವರ್ಷಗಳಿಂದ ಹತ್ತಿಕುಣಿ ಜಲಾಶಯ ಹಾಗೂ ಸೌಧಾಗರ ಜಲಾಶಯ ವ್ಯಾಪ್ತಿಯ ಎಲ್ಲಾ ಪ್ರಮುಖ ಕಾಲುವೆಗಳು ಹದಗೆಟ್ಟಿವೆ, ಪರಿಣಾಮ ಮಳೆಗಾಲದಲ್ಲಿ 2 ಕೆರೆಗಳು ತುಂಬಿದರು, ರೈತರ ಮುಂಗಾರು ಬೆಳೆಗಳಾದ ಶೇಂಗಾ, ಭತ್ತ, ಜೋಳ, ಸಜ್ಜೆ ಬೆಳೆಗಳಿಗೆ ಸರಿಯಾಗಿ ನೀರು ತಲುಪುತ್ತಿಲ್ಲ, ಅಪಾರ ಪ್ರಮಾಣದಲ್ಲಿ ಪೋಲಾಗುತ್ತಿದೆ, ಇದರಿಂದ ರೈತರು ಪ್ರತಿವರ್ಷ ಬೆಳೆಗಳು ನಾಶವಾಗಿ ಆರ್ಥಿಕ ನಷ್ಟ ಅನುಭವಿಸುತ್ತಿದ್ದಾರೆ ಎಂದು ತಮ್ಮ



ನೋವು ತೋಡಿಕೊಳ್ಳುತ್ತಿದ್ದಾರೆ,

ಅಲ್ಲದೇ ಜಲಾಶಯಗಳಲ್ಲಿ ಅಪಾರ ಪ್ರಮಾಣದಲ್ಲಿ ಹೂಳು ತುಂಬಿರುವುದರಿಂದ ನೀರಿನ ಸಂಗ್ರಹ ಮಟ್ಟ ಕಡಿಮೆಯಾಗುತ್ತಿದೆ, ಬೇಸಿಗೆ ಸಮಯದಲ್ಲಿ ಜಾನುವಾರುಗಳಿಗೆ ನೀರಿನ ಸಮಸ್ಯೆ ಉದ್ಭವಿಸುತ್ತಿದೆ, ಹೀಗಾದರೇ ನಾವೂ, ಧನ–ಕರುಗಳು ಹೇಗೆ ಜೀವನ ಸಾಗಿಸಬೇಕು, ಅನಿವಾರ್ಯವಾಗಿ ನಾವೂ ಕೃಷಿ ಚಟುವಟಿಕೆ ಬಿಟ್ಟು ಹೊಟ್ಟೆ ಪಾಡಿಗಾಗಿ ಹೆಂಡತಿ ಮಕ್ಕಳೊಂದಿಗೆ ಉದ್ಯೋಗ ಅರಸಿ ಕಷ್ಟಗಳ ಮಧ್ಯೆ ಬೆಂಗಳೂರ, ಮುಂಬೈ, ಪೂನಾ ನಗರಗಳಲ್ಲಿ ದುಡಿದು ಬದುಕುತ್ತಿದ್ದೇವೆ ಎಂದು ರೈತರು ತಮ್ಮ ಬದುಕಿನ ವ್ಯಥೆ ವಿವರಿಸಿದ್ದಾರೆ.

ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಕಾಲುವೆಗಳ ದುರಸ್ಥಿಗೆ ಅನುದಾನ ನೀಡಲು ಮುಂದಾಗಿಲ್ಲ, ಕಾರಣ ಹತ್ತಿಕುಣಿ ಜಲಾಶಯವನ್ನು ಕೆಬಿಜೆಎನ್ಎಲ್ ಖಾನಾಪೂರ ವಿಭಾಗಕ್ಕೆ ಸರ್ಕಾರ ಸೇರಿಸಬೇಕು, ಇದರಿಂದ ಸರ್ಕಾರದಿಂದ ಹೆಚ್ಚಿನ ಅನುದಾನ ಜಲಾಶಯಗಳ ನಿರ್ವಹಣೆಗೆ ಬರುತ್ತದೆ, ಸನ್ನತ್ತಿ ಏತ ನೀರಾವರಿ ಯೋಜನೆಯಲ್ಲಿ ಪ್ರತಿವರ್ಷ 8 ಟಿಎಂಸಿ ನೀರು ಸಂಗ್ರಹವಿರುತ್ತದೆ, ಅದರಲ್ಲಿ 0.25 ಟಿಎಂಸಿ ನೀರನ್ನು ಹತ್ತಿಕುಣಿ ಜಲಾಶಯಕ್ಕೆ ಕಾಲುವೆಗಳ ಮೂಲಕ ಭರ್ತಿ ಮಾಡುವ ಯೋಜನೆ ಜಾರಿಯಾಗಬೇಕು, ಜೊತೆಗೆ ಕಾಲುವೆಗಳ ನವೀಕರಣವಾಗಬೇಕು, ಅಂದಾಗ ಮಾತ್ರ ರೈತರು ಬೃಹತ್ ನಗರಗಳಿಗೆ ಗುಳೆ ಹೋಗುವುದನ್ನು ತಪ್ಪಿಸಿ, ಕೃಷಿಕ್ಷೇತ್ರದಲ್ಲಿ ವರ್ಷವಿಡಿ ಚಟುವಟಿಕೆಗಳಿಂದ ಇರಲು ಸಾಧ್ಯ ಎಂದು ಗ್ರಾಮದ ಯುವ ರೈತ ರವಿ ಮಾಲಿ ಪಾಟೀಲ್ ಆಗ್ರಹಿಸಿದ್ದಾರೆ.

ಇನ್ನೊಂದು ಕಡೆ ಸೌಧಾಗರ ಜಲಾಶಯದ ಮೇಲ್ಭಾಗದಲ್ಲಿರುವ ಯರಗೋಳ ಕೆರೆಗೆ ಕೆಬಿಜೆಎನ್ಎಲ್ ನೀರಿನಿಂದ ಸದಾಭರ್ತಿಯಾಗಿರುತ್ತದೆ, ಅಲ್ಲಿಂದ ಜಲಾಶಯಕ್ಕೆ ಕಾಲುವೆ ಮೂಲಕ ನೀರು ಹರಿಸಿದ್ದಲ್ಲಿ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ, ಕೊನೆಯ ಭಾಗದ ರೈತರಿಗೆ ಕೂಡ ಸುಗಮವಾಗಿ ನೀರು ತಲುಪಿಸಲು ಸಹಕಾರಿಯಾಗುತ್ತದೆ, ಈ ಕುರಿತು ಗುರುಮಿಠಕಲ್ ಮತಕ್ಷೇತ್ರದ ಶಾಸಕರಾದ ಶರ–ಣಗೌಡ ಕಂದಕೂರ ಅವರು ಅಧಿಕಾರಿಗಳಿಂದ ಯೋಜನೆ ತಯಾರಿಸಿ, ಜಲಸಂಪನ್ಮೂಲ ಸಚಿವ ಡಿ.ಕೆ ಶಿವಕುಮಾರ ಅವರಿಗೆ ಸಲ್ಲಿಸಲಾಗಿದೆ, ಅದು ಒಂದು ವೇಳೆ ಜಾರಿಯಾದರೇ 2 ಜಲಾಶಯಗಳ ನಿರ್ವಹಣೆಗೆ ಹಾಗೂ ಕಾಲುವೆಗಳ ನವಿಕರಣಕ್ಕೆ ಸಕಾಲಕ್ಕೆ ಹೆಚ್ಚಿನ ಅನುದಾನ ಸಿಗುತ್ತದೆ,

ರೈತರ ಸಮಸ್ಯೆಗಳಿಗೆ ಸ್ಪಂದಿಸಲು ಸಹಕಾರಿಯಾಗುತ್ತದೆ ಎಂದು ಜಲಾಶಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರ ಚೇತನ ಕಳಾಸ್ಕರ ತಿಳಿಸಿದ್ದಾರೆ,

ಈಗಲಾದರೂ ರಾಜ್ಯ ಸರ್ಕಾರ 2 ಜಲಾಶಯಗಳನ್ನು ಕೆಬಿಜೆಎನ್ಎಲ್ ವ್ಯಾಪ್ತಿಗೆ ಸೇರಿಸುವ ಮೂಲಕ ಹೊಸ ಕಾಯಕಲ್ಪ ನೀಡುವರೇ ಎಂಬ ಪ್ರಶ್ನೆ ರೈತರನ್ನು ಕಾಡುತ್ತಿದೆ.

## ಬರುವ ಮೂರು ವರ್ಷಗಳಲ್ಲಿ ಪೂರ್ಣಗೊಳ್ಳಲಿವೆ: ಬಸವರಾಜ ರಾಯರಡ್ಡಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ನಮ್ಮ ಕಲ್ಯಾಣ ಕರ್ನಾಟಕ ಭಾಗದ ಗದಗ-ವಾಡಿ ಮತ್ತು ಮುನಿರಾಬಾದ್-ಮಹೆಬೂಬನಗರ ರೈಲ್ವೆ ಲೈನ್‌ಗಳು ಮುಂಬರುವ ಮೂರು ವರ್ಷಗಳಲ್ಲಿ ಪೂರ್ಣಗೊಳ್ಳಲಿವೆ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರಡ್ಡಿ ಹೇಳಿದರು.

ಅವರು ಮಂಗಳವಾರ ಕೊಪ್ಪಳ ನಗರದ ಪ್ರವಾಸಿ ಮಂದಿರದಲ್ಲಿ ಹುಬ್ಬಳ್ಳಿ-ಕುಷ್ಟಗಿ ರೈಲು ಆರಂಭವಾಗಲಿರುವ ಹಿನ್ನೆಲೆಯಲ್ಲಿ ಪತ್ರಕರ್ತರಿಗೆ ಮಾಹಿತಿ ನೀಡಲು ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಗದಗ-ವಾಡಿ ರೈಲ್ವೆ ಲೈನ್, ಉತ್ತರ ಕರ್ನಾಟಕ ಭಾಗದ ಮಹತ್ವದ ರೈಲ್ವೆ ಮಾರ್ಗಗಳಲ್ಲಿ ಒಂದಾಗಿದ್ದು, ಇದು ಮುಂಬೈ ಕರ್ನಾಟಕದಿಂದ ನಮ್ಮ ಕಲ್ಯಾಣ ಕರ್ನಾಟಕ ಭಾಗಕ್ಕೆ ನೇರವಾಗಿ ರೈಲು ಸಂಪರ್ಕ ಕಲ್ಪಿಸುವ ಯೋಜನೆಯಾಗಿದೆ. ಇದಲ್ಲದೆ ಹುಬ್ಬಳ್ಳಿ, ಗದಗ, ಯಲಬುರ್ಗಾ, ಕುಕನೂರು, ಕುಷ್ಟಗಿ, ಮುದಗಲ್, ಲಿಂಗಸೂರು, ಹಟ್ಟಿ ಚಿನ್ನದ ಗಣಿ, ಸುರಪುರ, ಶಹಪುರದಿಂದ ವಾಡಿ ವರೆಗಿನ ಈ ಮಾರ್ಗವು ಮುಂದಿನ ದಿನಮಾನಗಳಲ್ಲಿ ಉತ್ತಮವಾದ ವಾಣಿಜ್ಯ ರೈಲ್ವೆ ಮಾರ್ಗಗಳಿಗೆ ಸಂಪರ್ಕ ಕೊಂಡಿಯಾಗಲಿದೆ. ಭವಿಷ್ಯದಲ್ಲಿ ರೈಲುಗಳು ಗೋವಾದಿಂದ ಹೈದ್ರಾಬಾದ್, ಗೋವಾದಿಂದ ದೆಹಲಿಗೆ ವಾಯಾ ಇದೇ ಮಾರ್ಗವಾಗಿ ರೈಲುಗಳು ಸಂಚರಿಸಲು ಅನುಕೂಲವಾಗಲಿದೆ. ಹುಬ್ಬಳ್ಳಿಯಿಂದ ಸೋಲಾಪುರ, ಹುಬ್ಬಳ್ಳಿಯಿಂದ ಬೀದರ್ ರೈಲ್ವೆ ಮಾರ್ಗಕ್ಕೆ ಇದು ಪರ್ಯಾವ ಲೈನ್ ಆಗಲಿದ್ದು, ಇದರಿಂದ ನಮ್ಮ ಜನಕ್ಕೆ ಬಹಳಷ್ಟು ಅನುಕೂಲವಾಗಲಿದೆ. ಈ ಹಿಂದೆ ನಾನು ಲೋಕಸಭಾ ಸದಸ್ಯನಾಗಿದ್ದ ಸಂದರ್ಭದಲ್ಲಿ ಮುನಿರಾಬಾದ್-ಮಹೆಬೂಬ್ ನಗರ ಮತ್ತು ಗದಗ-ವಾಡಿ ಎರಡು ರೈಲ್ವೆ ಲೈನ್‌ಗಳಿಗೆ ಶಿಫಾರಸ್ಸು ಮಾಡಿದ್ದೆ. ಮಲ್ಲಿಕಾರ್ಜುನ ಖರ್ಗೆ ರವರು ಅಂದು ರೈಲ್ವೆ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಈ ಎರಡು ಮಾರ್ಗಗಳನ್ನು ಸೇರಿಸುವಲ್ಲಿ ಅವರ ಪ್ರಯತ್ನವು ಇದ್ದು, ಈ ಸಂದರ್ಭದಲ್ಲಿ ನಾವು ಅವರನ್ನು ನೆನಪಿಸಿಕೊಳ್ಳಬೇಕಿದೆ ಎಂದರು.



ಮುನಿರಾಬಾದ್ ನಿಂದ ಗಂಗಾವತಿಗೆ ಹೋಗುವ ಮಾರ್ಗದಲ್ಲಿ ಗುಡ್ಡಗಳಿರುವುದರಿಂದ ಅಲ್ಲಿ ಸುರಂಗ ಮಾರ್ಗಕ್ಕೆ ತೆ-ಊಂದರೆಯಾದ ಕಾರಣದಿಂದ ಮುನಿರಾಬಾದ್-ಮಹೆಬೂಬ್ ನಗರ ರೈಲ್ವೆ ಲೈನ್ ಅನ್ನು ಮುನಿರಾಬಾದ್ ಬದಲಿಗೆ ಗಿಣಿಗೇರಾವನ್ನು ಸೇರಿಸಲಾಯಿತು. ಗಿಣಿಗೇರಾ ಮಹೆಬೂಬ್ ನಗರ ರೈಲ್ವೆ ಮಾರ್ಗಕ್ಕೆ ಸಂಬಂಧಿಸಿದಂತೆ ಆಂದ್ರಪ್ರದೇಶದಲ್ಲಿ ಕಾಮಗಾರಿಯು ಪೂರ್ಣಗೊಂಡಿದೆ. ನಮ್ಮ ರಾಜ್ಯದಲ್ಲಿ ಭೂಸ್ವಾಧಿನ ಪ್ರಕ್ರಿಯೆ ನಿಧಾನವಾಗಿ ನಡೆಯುತ್ತಿರುವುದರಿಂದ ವಿಳಂಭವಾಗಿದೆ. ಇದು ಶೀಘ್ರದಲ್ಲಿಯೇ ಇತ್ಯರ್ಥವಾಗಲಿದೆ. ಈ ರೈಲ್ವೆ ಲೈನ್ ವಾಯಾ ಗಂಗಾವತಿ, ಸಿಂಧನೂರು, ಮಾನ್ವಿ, ರಾಯಚೂರು ಮಾರ್ಗವಾಗಿ ಹೋಗಲಿದ್ದು, ಇದರಿಂದ ಜನರ ಪ್ರಯಾಣದ ಜೊತೆಗೆ ಈ ಭಾಗದ ವಾಣಿಜ್ಯ ವ್ಯವಹಾರಗಳಿಗೆ ಅನುಕೂಲವಾಗಲಿದೆ. ಗದಗ-ವಾಡಿ ಹಾಗೂ ಗಿಣಿಗೇರಾ-ಮಹೆಬೂಬನಗರ ರೈಲ್ವೆ ಮಾರ್ಗವು ನಮ್ಮ ಭಾಗದ ದೊಡ್ಡ ರೈಲ್ವೆ ಲೈನ್ ಆಗಲಿವೆ. ಈ ರೈಲ್ವೆ ಲೈನ್‌ಗಳು ಪೂರ್ಣಗೊಳ್ಳುತ್ತಿರುವುದು ಸಂತೋಷದ ವಿಚಾರವಾಗಿದೆ. ಎಂದು ಹೇಳಿದರು.

ಗದಗ-ವಾಡಿ ರೈಲ್ವೆ ಮಾರ್ಗದ ತಳಕಲ್ ನಿಂದ ಕುಕನೂರು, ಯಲಬುರ್ಗಾ, ಕುಷ್ಟಗಿ ವರೆಗೆ ಸುಮಾರು 58 ಕಿ.ಮೀ ವರೆಗೆ ಕಾಮಗಾರಿಯು ಪೂರ್ಣಗೊಂಡಿದೆ. ವಾಡಿಯಿಂದ ಶಹಪುರ ವರೆಗೆ 48 ರೈಲ್ವೆ ಲೈನ್ 3 ರಿಂದ 6 ತಿಂಗಳಲ್ಲಿ ಮುಕ್ತಾಯವಾಗಲಿದ್ದು, ಇದರಿಂದ ಒಟ್ಟು 106 ಕಿ.ಮೀ ವರೆಗೆ ಕಾಮಗಾರಿ ಪೂರ್ಣಗೊಳ್ಳಲಿದೆ. ಇದರ ಮಧ್ಯದಲ್ಲಿರುವ 165 ಕಿ.ಮೀ ಕಾಮಗಾರಿಗೆ ರಾಜ್ಯ ಸರ್ಕಾರವು ಪತ್ರ ಬರೆದಿದ್ದು, ಕೇಂದ್ರ ಸರ್ಕಾರವು ಸಿಂಗಲ್ ಟೆಂಡರ್ ಕರೆದಿದೆ. ಇದಕ್ಕೆ ರಾಜ್ಯ ಸರ್ಕಾರವು ಹಣ ನೀಡಲಿದೆ. ಗದಗ-ವಾಡಿ ರೈಲ್ವೆ ಮಾರ್ಗದ ಪೂರ್ಣಗೊಂಡಿರುವ 58 ಕಿ.ಮೀ ರೈಲ್ವೆ ಲೈನ್‌ನಲ್ಲಿ ಹುಬ್ಬಳ್ಳಿಯಿಂದ ರೈಲ್ವೆ ಆರಂಭಿಸಬೇಕೆಂದು ರಾಜ್ಯ ಸರ್ಕಾರದಿಂದ ಕೇಂದ್ರ ರೈಲ್ವೆ ಮಂತ್ರಿಗಳಿಗೆ ಪತ್ರ ಬರೆಯಲಾಗಿದೆ. ಇದರ ಜೊತೆಗೆ ರೈಲ್ವೆ ಸಹಾಯಕ ಸಚಿವರಾದ ವಿ.ಸೋಮಣ್ಣನವರೊಂದಿಗೆ ಚರ್ಚಿಸಿದ್ದು, ಬರುವ ಮೇ ತಿಂಗಳಿನ 15ರೊಳಗಾಗಿ ಹುಬ್ಬಳ್ಳಿ-ಕುಷ್ಟಗಿ ರೈಲು ಉದ್ಘಾಟನಾ ಕಾರ್ಯಕ್ರಮವನ್ನು ಆದಷ್ಟು ಶೀಘ್ರದಲ್ಲಿಯೇ ಹಮ್ಮಿಕೊಳ್ಳಲಾಗುವುದು ಎಂದರು.

ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸಬವರಾಜ ಹಿಟ್ನಾಳ ಅವರು ಮಾತನಾಡಿ, ಗದಗ-ವಾಡಿ ರೈಲ್ವೆ ಲೈನ್ ಮಹತ್ವಕಾಂಕ್ಷಿಯೋಜನೆಯಾಗಿದೆ. ಇದರಿಂದ ಎಲ್ಲಾ ಭಾಗಗಳ ತ್ವರಿತ ಅಭಿವೃದ್ಧಿಯಾಗಲಿದೆ. ಈ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇ.50 ರಷ್ಟು ಅನುದಾನವನ್ನು ನೀಡಿದೆ. ಈಗಾಗಲೇ ಗದಗ-ವಾಡಿ ರೈಲ್ವೆ ಲೈನ್ ಕಾಮಗಾರಿ ತಳಕಲ್‌ನಿಂದ ಕುಷ್ಟಗಿ ವರೆಗೆ ಮುಗಿದಿದ್ದು, ರೈಲು ಪ್ರಾಯೋಗಿಕವಾಗಿ ಸಂಚರಿಸಿದೆ. ಆದಷ್ಟು ಬೇಗನೆ ಇದರ ಉದ್ಘಾಟನೆಯನ್ನು ನೆರವೇರಿಸಲಾಗುವುದು. ಗದಗ-ವಾಡಿ ರೈಲು ಲೈನ್ ನಿಂದ ನಮ್ಮ ಭಾಗದ ಅಭಿವೃದ್ಧಿಗೆ ತುಂಬಾ ಅನುಕೂಲವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಕೊಪ್ಪಳ ನಗರಸಭೆ ಸದಸ್ಯರಾದ ಮಹೇಂದ್ರ ಛೋಪ್ರಾ ಹಾಗೂ ಮುತ್ತುರಾಜ ಕುಷ್ಟಗಿ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರಾದ ಹೇಮಂತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರಾದ ಡಾ. ಸುರೇಶ್ ಜಿ. ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಅರ್ಥಪೂರ್ಣ-ಅದ್ದೂರಿಯಾಗಿ ಸಾಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿ ಆಚರಣೆ: ಎಡಿಸಿ ಮಹಮ್ಮದ್ ಝುಬೇರ್





ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.15-ಸಮಾಜಕ್ಕೆ ತಮ್ಮ ಆಚಾರ-ವಿಚಾರ ಸಂದೇಶಗಳನ್ನು ತಲುಪಿಸಿದ ಬಸವಣ್ಣನವರ ಕೊಡುಗೆ ಅಪಾರ. ಅಂತಹ ಭಕ್ತಿ ಭಂಡಾರಿ ಬಸವಣ್ಣನವರ ಜಯಂತಿಯನ್ನು ಏ. 30 ರಂದು ಜಿಲ್ಲಾ ಕೇಂದ್ರದಲ್ಲಿ ಅರ್ಥಪೂರ್ಣವಾಗಿ ಅದ್ದೂ-ರಿಯಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ಹೇಳಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಬಸವಣ್ಣನವರ ಜಯಂತಿ ಆಚರಣೆ ಸಂಬಂಧ ಮಂಗಳವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಾನುಭಾವರ ಜೀವನ ಮೌಲ್ಯಗಳನ್ನು ಸಮಾಜಕ್ಕೆ ನೀಡುವ ಸಲುವಾಗಿ ಜಯಂತಿಗಳನ್ನು ಆಚರಿಸಲಾಗುತ್ತಿದೆ. ಜಯಂತಿಗಳ ಆಚರಣೆಯ ಉದ್ದೇಶ ಮಹನೀಯರ ಆದರ್ಶಗಳನ್ನು ಪಾಲನೆ ಮಾಡುವುದು ಆಗಿದೆ. ಬಸವಣ್ಣನವರನ್ನು ರಾಜ್ಯ ಸರ್ಕಾರವು ಸಾಂಸ್ಕೃತಿಕ ನಾಯಕ ಎಂದು ಘೋಷಿಸಲಾಗಿದೆ ಎಂದು ತಿಳಿಸಿದರು. ಏ.30 ರಂದು ಬೆಳಿಗ್ಗೆ 09 ಗಂಟೆಗೆ ನಗರದ ಹೆಚ್. ಆರ್.ಗವಿಯಪ್ಪ ವೃತ್ತದ ಬಳಿಯ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಮಾಡಲಾಗುವುದು. ನಂತರ ಸಂಜೆ 07.30 ಗಂಟೆಗೆ ಬಸವಣ್ಣನವರ ಜಯಂತಿಯನ್ನು ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಚರಣೆ ಮಾಡಲಾಗುವುದು ಎಂದು ತಿಳಿಸಿದರು. ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಜಯಂತಿ ಅಂಗವಾಗಿ ಅಂದು ಸಂಜೆ 05 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಿಂದ ಭವ್ಯ ಮೆರವಣಿಗೆ ನಡೆಯಲಿದೆ. ಮೆರವಣಿಗೆಯು ಗಡಿಗಿ ಚೆನ್ನಪ್ಪ ವೃತ್ತ-ಬೆಂಗಳೂರು ರಸ್ತೆ-ಬ್ರೂಸ್‌ಪೇಟೆ ಪೊಲೀಸ್ ಠಾಣೆ-ಜೈನ್ ಮಾರ್ಕೆಟ್ ರಸ್ತೆ-ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದ ವರೆಗೆ ನಡೆಯಲಿದೆ ಎಂದರು. ಹೆಚ್. ಆರ್.ಗವಿಯಪ್ಪ ವೃತ್ತದಲ್ಲಿನ ಬಸವೇಶ್ವರರ ಪ್ರತಿಮೆಯ ಸ್ಥಳದ ಆವರಣದಲ್ಲಿ ಸ್ವಚ್ಚತೆ ಹಾಗೂ ಜಯಂತಿ ನಡೆಯುವ ಸ್ಥಳದಲ್ಲಿ ಆಸನದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಹಾನಗರ ಪಾಲಿಕೆಯ ವತಿಯಿಂದ ಮಾಡಬೇಕು ಎಂದು ಸೂಚನೆ ನೀಡಿದರು. ಜಯಂತಿ ಆಚರಣೆಗೆ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಜನಪ್ರತಿನಿಧಿಗಳಿಗೆ ಮುಖಂಡರಿಗೆ ಆಹ್ವಾನ ನೀಡಲಾಗುವುದು. ರಂಗಮಂದಿರದಲ್ಲಿ ವಚನ ಗಾಯನ ಏರ್ಪಡಿಸಲಾಗುವುದು. ಜಯಂತಿ ಮೆರವಣಿಗೆಗಳಲ್ಲಿ ಜಾನಪದ ಕಲಾತಂಡಗಳನ್ನು ನಿಯೋಜಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಜಯಂತಿಯಲ್ಲಿ ವಿಶೇಷ ಉಪನ್ಯಾಸ ನೀಡಲು ಸಂಪನ್ಮೂಲ ವ್ಯಕ್ತಿಯೊಬ್ಬರನ್ನು ನಿಯೋಜಿಸಲಾಗುವುದು. ಸಮುದಾಯದಲ್ಲಿ ವಿಶೇಷ ಸಾಧನೆಗೈದವರನ್ನು ಸನ್ಮಾನಿಸಲು ಸಾಧಕರ ಹೆಸರು ನೀಡಲಾಗುವುದು ಎಂದು ಸಮುದಾಯದ ಮುಖಂಡರು ಸಭೆಗೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಸಮುದಾಯದ ಮುಖಂಡರುಗಳು ತಮ್ಮ ಸಲಹೆ-ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರದಾಸಪ್ಪನವರ, ಮಹಾನಗರ ಪಾಲಿಕೆಯ ರೆಹಮಾನ್ ಸೇರಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಮುದಾಯದ ಮುಖಂಡರು ಹಾಗೂ ಮತ್ತೀತರರು ಉಪಸ್ಥಿತರಿದ್ದರು.

## ಸಾಹಿತ್ಯದ ಬಗ್ಗೆ ವಿದ್ಯಾರ್ಥಿಗಳು ಹೆಚ್ಚೆಚ್ಚು ತಿಳಿದುಕೊಳ್ಳಬೇಕು




ಮಲ್ಲಮ್ಮ ನುಡಿ ವಾರ್ತೆ

ಔರಾದ್ : ವಾಸ್ತವಿಕ ಬದುಕಿನ ಜೊತೆಗೆ ವಿಶ್ವಮಾನವ ಸಂದೇಶ ವಿಸ್ತಾರದ ಮೇಲೆ ಹೆಚ್ಚಿನ ಪ್ರೀತಿ ಹೊಂದಿರುವ ಕುವೆಂಪು ಅವರ ಸಾಹಿತ್ಯದ ಬಗ್ಗೆ ವಿದ್ಯಾರ್ಥಿಗಳು ಹೆಚ್ಚೆಚ್ಚು ತಿಳಿದುಕೊಳ್ಳಬೇಕು ಎಂದು ಪತ್ರಕರ್ತ ಬಾಲಾಜಿ ಕುಂಬಾರ ಅಭಿಪ್ರಾಯಪಟ್ಟರು.

ಔರಾದ್ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ ಸಹಯೋಗದಲ್ಲಿ ಆಯೋಜಿಸಿದ ವಿಶೇಷ ಉಪನ್ಯಾಸ ಸಮಾರಂಭದಲ್ಲಿ ಮಾತನಾಡಿದರು.

ಕುವೆಂಪು ಅವರು 1974ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಘಟಿಕೋತ್ಸವ ಸಮಾರಂಭದಲ್ಲಿ ಮಾಡಿರುವ 'ವಿಚಾರ ಕ್ರಾಂತಿಗೆ ಆಹ್ವಾನ' ಭಾಷಣ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕಿಚ್ಚು ಹೊತ್ತಿಸುವಂತಿತ್ತು. ಐವತ್ತು ವರ್ಷಗಳ ಹಿಂದೆ ಮಾಡಿದ ಭಾಷಣ ಪ್ರಸ್ತುತ ಸಮಾಜದ ಸಮಸ್ಯೆಗಳಿಗೆ ಹಿಡಿದ ಕೈಗನ್ನಡಿಯಂತಿದೆ ಎಂದರು.

ಕುವೆಂಪು ಅವರ ವಿಶ್ವಮಾನವ ಸಂದೇಶ ಇಂದಿನ ವಿದ್ಯಾರ್ಥಿಗಳು ಮೈಗೂಡಿಸಿಕೊಂಡರೆ ವೈಚಾರಿಕ ಮನೋಭಾವ ಬೆಳೆಯಲು ಸಾಧ್ಯವಾಗುತ್ತದೆ ಎಂದರು.

ಔರಾದ್ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಓಂಪ್ರಕಾಶ ದಡ್ಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಸಾಹಿತ್ಯದ ಕುರಿತು ಅಭಿರುಚಿ ಹೊಂದಬೇಕು. ಕಥೆ, ಕವನ, ನಾಟಕ, ಗೀತೆಗಳ ರಚನೆ ಕುರಿತು ತಿಳಿದುಕೊಂಡು ಸ್ವತಃ ಸಾಹಿತ್ಯ ರಚನೆಯತ್ತ ಮುನ್ನಡೆಯಬೇಕು ಎಂದರು. ಕಸಾಪ ಅಧ್ಯಕ್ಷ ಬಿ.ಎಂ ಅಮರವಾಡಿ ಮಾತನಾಡಿ, ಕುವೆಂಪು ಪ್ರತಿಪಾದಿಸಿದ ಪಂಚಮಂತ್ರಗಳಾದ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಯನ್ನು ಯುವ ಸಮೂಹ ಮೈಗೂಡಿಸಿಕೊಳ್ಳಬೇಕು. ಸಮಾಜದಲ್ಲಿ ಶಾಂತಿ, ಪ್ರೀತಿ ನೆಲಸಬೇಕಾದರೆ ಕುವೆಂಪು ಅವರ ಪಂಚಮಂತ್ರ ಅತಿ ಅವಶ್ಯಕವಾಗಿವೆ ಎಂದರು.

ಹಿರಿಯ ಸಾಹಿತ್ಯಿಕ ಸಾಂಸ್ಕೃತಿಕ ಚಿಂತಕ ಜಗನ್ನಾಥ ಮೂಲಗೆ, ಕಾಲೇಜು ಪ್ರಾಚಾರ್ಯೆ ಅಂಬಿಕಾದೇವಿ ಕೋತಮಿರ್, ಚಕೋರ ಸಾಹಿತ್ಯ ವೇದಿಕೆ ಸಂಚಾಲಕಿ ಡಾ. ಮಕ್ತುಂಬಿ ಎಂ ಮಾತನಾಡಿದರು.

ಈ ಸಂದರ್ಭದಲ್ಲಿ ವೇದಿಕೆ ಸಂಚಾಲಕ ಅಜಿತ್ ನೇಳಗಿ ಕಾಲೇಜಿನ ಉಪನ್ಯಾಸಕರಾದ ವಿನಾಯಕ ಕೋತಮಿರ್, ಸಂಜುಕುಮಾರ್ ತಾಂದಳೆ, ದಯಾನಂದ ಬಾವಗೆ, ಸುನೀಲ ಮಾಳಗೆ, ಸುಬ್ಬಣ್ಣ ಮೂಲಗೆ, ನರಸಪ್ಪ ಸೇರಿದಂತೆ ಇನ್ನಿತರರಿದ್ದರು.

## ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಿಂದ ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಸ್ವಯಂ ಉದ್ಯೋಗ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

10 ದಿನಗಳು ಜೂಟ್ ಬ್ಯಾಗ್ ತಯಾರಿಕೆ, 30 ದಿನಗಳ ಮೊಬೈಲ್ ರಿಪೇರ ಮತ್ತು ಸರ್ವಿಸ್ ತರಬೇತಿ, 30 ದಿನಗಳ ಮೋಟಾರ್ ರಿವೈಂಡಿಂಗ್ ಮತ್ತು ಪಂಪ ಸೆಟ್ ರಿಪೇರಿ ತರಬೇತಿಗಾಗಿ ಏಪ್ರಿಲ್ 21 ರಂದು ಸಂದರ್ಶನ ನಡೆಯಲಿದ್ದು, ಏ.22 ರಿಂದ ತರಬೇತಿ ಪ್ರಾರಂಭವಾಗಲಿವೆ.

ಅರ್ಜಿ ಸಲ್ಲಿಸಲು ಅರ್ಜಿದಾರರು 18 ರಿಂದ 45 ವರ್ಷ ಒಳಗಿನವರಾಗಿರಬೇಕು. ಕನಿಷ್ಠ ಎಂಟನೇ ತರಗತಿ ಪಾಸ್ ಆಗಿರಬೇಕು. ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದವರಾಗಿರಬೇಕು. ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಹೊಂದಿರಬೇಕು. ಅರ್ಜಿ ಸಲ್ಲಿಸಲಿಚ್ಛಿಸುವ ಆಸಕ್ತರು ತಮ್ಮ ಆಧಾರ ಕಾರ್ಡ ಜೆರಾಕ್ಸ್ ಪ್ರತಿ, ರೇಶನ್ ಕಾರ್ಡ ಜೆರಾಕ್ಸ್ ಪ್ರತಿ, ಪಾಸ್‌ಪೋರ್ಟ್ ಸೈಜ್ ಮೂರು ಫೋಟೋ, ಮಾರ್ಕ್ಸ ಕಾರ್ಡ ಜೆರಾಕ್ಸ್ ಪ್ರತಿಯೊಂದಿಗೆ ಅರ್ಜಿಯನ್ನು ನಿರ್ದೇಶಕರು, ಸ್ಟೇಟ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಜಿಲ್ಲಾ ಕೈಗಾರಿಕಾ ಕೇಂದ್ರ ಆವರಣ, ಅಶೋಕ ಸರ್ಕಲ್ ಹತ್ತಿರ, ಕೊಪ್ಪಳ ಮೊ.ಸಂ: 08539231038, 9483618178, 7259073827, 9538096796 9481085217 ಗೆ ಸಂಪರ್ಕಿಸಬಹುದಾಗಿದೆ.

ಸ್ವಯಂ ಉದ್ಯೋಗ ತರಬೇತಿಗಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿಯನ್ನು ಉಚಿತವಾಗಿ ನೀಡಲಾಗುವುದು ಎಂದು ಕೊಪ್ಪಳ ಎಸ್‌ಬಿಐ ಆರ್‌ಸೆಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಾ: ಬಿ.ಆರ್.ಅಂಬೇಡ್ಕರ್ ಸಾಧನೆ ಜಗತ್ತಿಗೆ ಆದರ್ಶ: ಮಂಜಣ್ಣ ಗಟ್ಟೆಪ್ಪನವರ್



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಕುದರಿಮೋತಿ ಗ್ರಾಮದಲ್ಲಿ ಭಾರತರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತೋತ್ಸವದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷದ ಯುವ ಮುಖಂಡ ಮಂಜುನಾಥ ಗಟ್ಟೆಪ್ಪನವರ್ ಅವರು ಭಾಗವಹಿಸಿ ಡಾ.ಬಿ.ಆರ್.ಅಂಬೇಡ್ಕರ್ ರವರ ಮೂರ್ತಿಗೆ ಮಾಲಾರ್ಪಣೆ ಮಾಡಿ ನಂತರ ಮಾತನಾಡಿದ ಅವರು ಭಾರತೀಯ ಸಂವಿಧಾನವನ್ನು ರಚಿಸುವಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ನಿರ್ವಹಣೆಯು ಭಾರತೀಯ ಸಂವಿಧಾನದ ಪಿತಾಮಹ ಎಂಬ ಅವರ ಸ್ಥಾನಮಾನವನ್ನು ಗಟ್ಟಿಗೊಳಿಸುತ್ತದೆ. ಕರಡು ಸಮಿತಿಯ ಅಧ್ಯಕ್ಷರಾಗಿ, ಅವರು ಸಂಕೀರ್ಣವಾದ ಮಾತುಕತೆಗಳು ಮತ್ತು ಚರ್ಚೆಗಳ ಮೂಲಕ ಸಂವಿಧಾನ ಸಭೆಯನ್ನು ಪ್ರೇರೇಪಿಸುತ್ತಾರೆ, ದಾಖಲೆಯು ಪ್ರಜಾಪ್ರಭುತ್ವದ ಮಾನದಂಡಗಳಿಗೆ ಬದ್ಧವಾಗಿದೆ ಎಂದು ಖಚಿತ ಪಡಿಸುತ್ತಾರೆ. ಅಂಬೇಡ್ಕರ್ ಅವರ ಬಗ್ಗೆ ಮತ್ತು ಅವರ ಸಾಧನೆಗಳ ಬಗ್ಗೆ ಗುಣಗಾನ ಮಾಡಿದರು.

ಈ ಸಂದರ್ಭದಲ್ಲಿ ದಳಪತಿ ಹನುಮಗೌಡ ಪೊ ಪಾಟೀಲ್, ಮುಖಂಡರಾದ ಸುಭಾಷ್ ಈಡಿಗೇರ, ವಿಜಯಕುಮಾರ್ ದಾಸರ್, ಅಮರೇಶ ತಲ್ಲೂರು, ಪಂಪಾಪತಿ ವಣಗೇರಿ, ಶರಣಯ್ಯ ಜಂಗಮೂರು, ದ್ಯಾಮಣ್ಣ ಉಚ್ಚಲಕುಂಟಿ, ದ್ಯಾಮಣ್ಣ ಚೌಡ್ಕಿ, ಈರಣ್ಣ ಈಡಿಗೇರ, ಫಕೀರಪ್ಪ ಗೊಬ್ಬಿ, ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಗುತ್ತಿಗೆ/ಬಿಡ್‌ದಾರರು ಗುತ್ತಿಗೆ/ಬಿಡ್ ಮೊತ್ತ ಪಾವತಿಸಲು ಏಪ್ರಿಲ್ 30 ಕೊನೆಯ ದಿನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.15-2025-26 ನೇ ಸಾಲಿನ ಕಲಬುರಗಿ ಜಿಲ್ಲೆಯ ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕು ಗುತ್ತಿಗೆ/ಬಿಡ್‌ದಾರರು ಗುತ್ತಿಗೆ/ಬಿಡ್ ಮೊತ್ತ ಪಾವತಿಸಲು ಏಪ್ರಿಲ್ 30 ರಂದು ಕೊನೆಯ ದಿನವಾಗಿದೆ. ಗುತ್ತಿಗೆ/ಬಿಡ್ ಮೊತ್ತವನ್ನು ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಚೇರಿಯಲ್ಲಿ ಪಾವತಿಸಕ್ಕದ್ದು, ತಪ್ಪಿದಲ್ಲಿ ಕೆರೆಯ ಮೀನು ಪಾಶುವಾರು ಹಕ್ಕು ರದ್ಧತಿಗೆ ಕ್ರಮವಹಿಸಲಾಗುತ್ತದೆ ಎಂದು ಕಲಬುರಗಿ ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಿ.ವಿ. ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಲಘು ಉದ್ಯೋಗ ಭಾರತಿ ಬೀದರ ಹಾಗೂ ಜಿಎಸ್‌ಟಿ ಪರಿಜ್ಞಾನ ಮತ್ತು ಸಂಪನ್ಮೂಲ ವ್ಯಕ್ತಿಗಳ ಚರ್ಚೆ ಕುರಿತು ಒಂದು ದಿನದ ಕಾರ್ಯಗಾರ




ಮಲ್ಲಮ್ಮ ನುಡಿ ವಾರ್ತೆ

ಬೀದರ, ದಿ: 15ನೇ ಏ 2025ರಂದು ನಗರದ ಹೈ.ಕ.ಶಿ. ಸಂಸ್ಥೆಯ ಬಿ.ವಿ. ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಲಘು ಉದ್ಯೋಗ ಭಾರತಿ ಬೀದರ ಹಾಗೂ ಜಿಎಸ್‌ಟಿ ಪರಿಜ್ಞಾನ ಮತ್ತು ಸಂಪನ್ಮೂಲ ವ್ಯಕ್ತಿಗಳ ಚರ್ಚೆ ಕುರಿತು ಒಂದು ದಿನದ ಕಾರ್ಯಗಾರವನ್ನು ಡಾ. ಪಿ. ವಿಠ್ಠಲ ರಡ್ಡಿ ಹಾಗೂ ಶ್ರೀ ಡಿ.ವಿ. ಸಿಂಧೋಲ ಹಾಗೂ ಶ್ರೀ ಶಿವರಾಜ ಹಲಶೆಟ್ಟಿ ಅವರ ಅಮೃತ ಹಸ್ತದಿಂದ ಸಸಿಗೆ ನೀರೆರೆಯುವುದರ ಮುಖಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಹಾವಿದ್ಯಾಲಯದ ಪ್ರಾಂಶುಪಾಲರು ಮಾತನಾಡುತ್ತಾ ಇಂದು ಭಾರತದ ಘನ ಸರ್ಕಾರ ತೆರಿಗೆಯ ಮುಖಾಂತರ ನಡೆಯುತ್ತಿದೆ. ಪ್ರತಿಯೊಬ್ಬ ಭಾರತದ ಪ್ರಜೆ ತೆರಿಗೆ ತಪ್ಪಿಸಿಕೊಳ್ಳದೇ ಕಡ್ಡಾಯವಾಗಿ ಹಾಗೂ ಚಾಚು ತಪ್ಪದೇ ತಮ್ಮ ಕರವನ್ನು ಪಾವತಿಸಿದಾಗ ಸರ್ಕಾರ ಜನರಿಗೆ ಹೊಸ ಹೊಸ ಯೋಜನೆ ಹಾಕಲು ಸಹಾಯವಾಗುತ್ತದೆ ಎಂದು ಕರೆ ಕೊಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀ ಡಿ.ವಿ. ಸಿಂಧೋಲ ಅವರು ಮಾತನಾಡುತ್ತಾ ಇಂದಿನ ವಿದ್ಯಾರ್ಥಿಗಳು ತಮ್ಮ ಪದವಿ ಮುಗಿಸಿಕೊಂಡು ತಮ್ಮ ಸ್ವಂತ ಉದ್ಯೋಗವನ್ನು ಸ್ಥಾಪಿಸಲು ನಾವು ನಮ್ಮ ಕೈಗಾರಿಕಾ ಸಂಘದಿಂದ ನೆರವು ನೀಡುತ್ತೇವೆ ಹೊಸ ಉಧ್ಯಮಿಗಳಿಗೆ ಮಾರ್ಮಿಕವಾಗಿ ನುಡಿದರು.

ಕಾರ್ಯಕ್ರಮದ ಇನ್ನೋರ್ವ ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀ ಶಿವರಾಜ ಹಲಶೆಟ್ಟಿಯವರು ಮಾತನಾಡುತ್ತಾ ಪದವಿ ಮುಗಿಸಿದ ವಿದ್ಯಾರ್ಥಿಗಳ ತಮ್ಮ ಕಾಲ ಮೇಲೆ ತಾವು ನಿಲ್ಲಲು ಹಾಗೂ ಪಾಲಕರನ್ನು ಪೋಷಿಸಲು ಸ್ವಂತ ಉದ್ಯೋಗಕ್ಕಾಗಿ ಶ್ರಮಪಟ್ಟು ದುಡಿದು ಹತ್ತು ಹಲವಾರು ಜನರಿಗೆ ತಾವು ಸಹ ಕೆಲಸಕೊಡುತ್ತೇವೆಂದು ಆತ್ಮಸ್ಥೈರ್ಯದಿಂದ ಮುನ್ನೇಡಯಬೇಕೆಂದು ನುಡಿದರು. ಕಾರ್ಯಕ್ರಮದ ಇನ್ನೋರ್ವ ಅತಿಥಿಯಾದ ಡಾ. ಶಶೀಧರ ಪಾಟೀಲ ಹಾಗೂ ಡಾ. ಹುರುನ್ನೀಸಾ ಇವರು ಶ್ರೀ ಅಮೇಯ ಸಿಂಧೋಲ (ಸಿ.ಎ.) ಇವರೆಲ್ಲರು ಜಿ.ಎಸ್.ಟಿ. ಪರಿಜ್ಞಾನ ಚರ್ಚೆಯಲ್ಲಿ ಭಾಗವಹಿಸಿ ಹಾಗೂ ಶ್ರೀ ಅಂಬರೀಶ್ ಅಂಬೇಸಿಂಗೆ ಇವರು ಸಹ ಚರ್ಚೆಯಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಪ್ರಶ್ನೋತ್ತರ ಕಲಾಪ ನಡೆಸಿ ಜಿ.ಎಸ್.ಟಿ. ಬಗ್ಗೆ ಚರ್ಚೆ ನಡೆಸಿ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಪರಿಜ್ಞಾನ ಮೂಡಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಅನೀಲಕುಮಾರ ಅಣದೂರೆಯವರು ಮಾತನಾಡುತ್ತಾ ತೆರಿಗೆ ಕಟ್ಟದ ಮನುಷ್ಯ ಭೂಮಿಗೆ ಹೋರೆ ಒಂದು ಸರ್ಕಾರಕ್ಕೆ ನಿಯಮಿತವಾಗಿ ತೆರಿಗೆ ವಂಚನೆ ಮಾಡದೇ ಪಾವತಿ ಮಾಡಿದಾಗ ಮಾತ್ರ ಸರ್ಕಾರ ಜನಪರ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತದೆ ಆಗ ದೇಶ ಅಭಿವೃದ್ಧಿ ಹೊಂದುತ್ತದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದ ಮೊದಲಿಗೆ ಪ್ರಾರ್ಥನೆ ಗೀತೆಯನ್ನು ಕು: ವಿಜಯಲಕ್ಷ್ಮೀ ಬಿ.ಎ. 6ನೇ ಸೆಮಿಸ್ಟರ ಹಾಡಿದರೆ, ಕು.ನಾಗರಾಣಿ ಪಾಲಂ ನಿರೂಪಿಸಿದರೆ, ಶ್ರೀ ಚೇತನ ದಾಬಕೆ ಲಘು ಉದ್ಯೋಗ ಭಾರತದ ಕಾರ್ಯದರ್ಶಿಗಳು ಸ್ವಾಗತಿಸಿದರೆ, ಶ್ರೀ ಮಾರುತಿ ಭೀಮಣ್ಣಾ ಸಹಾಯಕ ಪ್ರಾಧ್ಯಾಪಕ ಹಿಂದಿ ವಿಭಾಗ ವಂದಿಸಿದರು.

ಕಾರ್ಯಕ್ರಮದ ವೇದಿಕೆಯ ಮೇಲೆ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ. ಲಕ್ಷ್ಮೀ ವಿಶ್ವನಾಥ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

### ವೈದ್ಯಕೀಯ ಕಾಲೇಜಿನಲ್ಲಿ ಪದವಿ ಪ್ರದಾನ

# ವೈದ್ಯರು ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು- ಡಾ.ಭಗವಾನ್



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,15–ವೈದ್ಯಕೀಯ ಜ್ಞಾನದ ಜೊತೆಗೆ ಮಾನವೀಯ ಸೇವಾ ಮನೋಭಾವ ಬೆಳೆಸಿಕೊಳ್ಳುವಂತೆ ವೈದ್ಯಕೀಯ ವಿದ್ಯಾರ್ಥಿಗಳಿಗೆ ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಭಗವಾನ ಬಿ.ಸಿ ಕರೆಯಿತ್ತರು.

ನಗರದ ಮೆಡಿಕಲ್ ಕಾಲೇಜಿನ ಶತಾಬ್ಧಿ ಸಭಾಭವನದಲ್ಲಿ ನಡೆದ ಬಿ.ವ್ಹಿ.ವ್ಹಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ 16ನೇ ಪದವಿ ಪ್ರದಾನ ಸಮಾರಂಭದಲ್ಲಿ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ಪದವಿ ಪಡೆದ ವಿದ್ಯಾರ್ಥಿಗಳಿಗೆ ಮುಂದೆ ಭವಿಷ್ಯದ ವೃತ್ತಿಪರ ಬದುಕಿನಲ್ಲಿ ನೈತಿಕ ಸವಾಲುಗಳನ್ನು ಎದುರಿಸಲು ಪ್ರಮಾಣಿಕತೆ ಬಹಳ ಮುಖ್ಯವಾಗಿರುತ್ತದೆ ಎಂದರು.

ನಿರಂತರ ಕಲಿಕಾ ಕೌಶಲ್ಯ, ಸಂಶೋಧನಾ ಕೌಶಲ್ಯ ಹಾಗೂ ವಿವಿಧ ವೃತ್ತಿಪರ ಕೌಶಲ್ಯಗಳನ್ನು ಬೆಳಸಿಕೊಳ್ಳಬೇಕು. ವೈದ್ಯಕೀಯ ಜ್ಞಾನಕ್ಕಿಂತ ಮಿಗಿಲಾದ ಸಹಾನುಭೂತಿ ಹಾಗೂ ಮಾನವೀಯ ಮೌಲ್ಯಗಳ ಬಗ್ಗೆ ಅರಿವು ಕೂಡ ಮುಖ್ಯವಾಗಿದೆ. ಉತ್ತಮ ಸೇವೆ ಸಲ್ಲಿಸುವರಿಗೆ ಸಮಾಜ ಗೌರವಿಸುತ್ತದೆ ಎಂದು ಡಾ.ಭಗವಾನ್ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಮಾತನಾಡಿ, 400 ಹಾಸಿಗೆಯ ಸುಸಜ್ಜಿತ ಸೂಪರ ಸ್ಪೇಶಾಲಿಟಿ ಆಸ್ಪತ್ರೆಯನ್ನು ಶೀರ್ಘದಲ್ಲೇ ಪ್ರಾರಂಭಿಸಲಾಗುವುದು ಎಂದು ಹೇಳಿದರು. ಅಲೋಪತಿಕ್ ಮೆಡಿಕಲ್ ಬಿಟ್ಟು ಹೋಮಿಯೋಪಥಿ ಹಾಗೂ ಆಯುರ್ವೇದ ಮಹಾವಿದ್ಯಾಲಯಕ್ಕೆ ಸೇರಬಯಸುವ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆ ತೆಗೆಯುವ ಬಗ್ಗೆ ಸರ್ಕಾರಕ್ಕೆ ಗಮನ ಸೆಳೆಯುವಂತೆ ಇದೇ ಸಂದರ್ಭದಲ್ಲಿ ಅವರು ಉಪಕುಲಪತಿಗಳಿಗೆ ವಿನಂತಿಸಿದರು.

ಇದೇ ಸಂದರ್ಭದಲ್ಲಿ ವೈದ್ಯಕೀಯ ಮಹಾವಿದ್ಯಾಲಯದ ಪರವಾಗಿ ಡಾ.ಭಗವಾನ ಬಿ.ಸಿ. ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ ಮತ್ತು ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಎಸ್.ಎನ್.ಮೆಡಿಕಲ್ ಕಾಲೇಜಿನ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಡಾ.ಮಂಜುಳಾ ಪಾಟೀಲ ಪರಿಚಯಿಸಿದರು. ಡಾ.ಸಂಜೀವ ಕೊಳಗಿ ವೈದ್ಯಕೀಯ ಪದವೀಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು ಮತ್ತು ಡಾ.ಮಹಾಂತೇಶ ಭೂತಾಳ ವಂದಿಸಿದರು. ಡಾ.ಶಿಫಾ ಮತ್ತು ಡಾ.ಕೃಪಾಕರ ಅನುಭವ ಹಂಚಿಕೊಂಡರು. ಡಾ.ಜಯರಾಜ, ಡಾ.ಶಾಂಭವಿ ಹಾಗೂ ಡಾ.ವಿದ್ಯಾಶ್ರೀ ಕಾರ್ಯಕ್ರಮ ನಿರೂಪಿಸಿದರು.

131 ಸ್ನಾತಕ ಮತ್ತು 32 ಸ್ನಾತಕೋತ್ತರ ಪದವಿಧರರಿಗೆ ಪದವಿ ಪ್ರದಾನ ಮಾಡಲಾಯಿತು. ರ‍್ಯಾಂಕ ಪಡೆದ ವೈದ್ಯ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

# ಮೇ 2ರಿಂದ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ

ವಾರ್ತೆ ಮಲ್ಲಮ್ಮ ನುಡಿ

ಬಾಗಲಕೋಟೆ,ಎ.15–ನಗರದ ಬಸವೇಶ್ವರ ಸಹಕಾರಿ ಬ್ಯಾಂಕ್, ಸಿರಿ ಸಾಂಸ್ಕೃತಿಕ ಸಂಸ್ಥೆ, ಜಿಲ್ಲಾ ವನಿತಾ ಲೋಕ ಹಾಗೂ ವನಸಿರಿ ಸರ್ವಾಭಿವೃದ್ಧಿ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ವಿಶೇಷವಾಗಿ ಪಿಯುಸಿ ಮುಗಿಸಿದ ವಿದ್ಯಾರ್ಥಿನಿಯರು ಹಾಗೂ ಶಾಲಾ ಶಿಕ್ಷಕಿಯರಿಗೆ ಮೇ 2 ರಿಂದ ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ. ಸಾರೀ ಪ್ರಿ ಪ್ಲೇಟಿಂಗ್ ಮತ್ತು ಬಾಕ್ಸ್ ಫೋಲ್ಡಿಂಗ್ ಮೂರು ದಿನಗಳ ತರಬೇತಿ, ವೈರೈಟಿ ಹೇರ್ ಸ್ಟೈಲ್ ಹಾಗೂ ವೆರೈಟಿ ಆಫ್ ಸಾರಿ ಡ್ರೆಪಿಂಗ್ ಮತ್ತು ಸೆಲ್ಫ್ ಮೇಕಪ್‌ನಲ್ಲಿ ಒಂದು ವಾರದ ತರಬೇತಿ, ಒಂದು ವಾರದ ಡಿಸೈನರ್ ಮೆಹಂದಿ ತರಬೇತಿ, 5 ದಿನಗಳ ಆಕರ್ಷಕ ಹಾಗೂ ವಿನೂತನ ಬ್ಯಾಗ್ ಮತ್ತು ಪರ್ಸ ತಯಾರಿಕೆ ತರಬೇತಿ ಹಮ್ಮಿಕೊಳ್ಳಲಾಗಿದೆ.

ತರಬೇತಿಗೆ ಸಂಬಂಧಿಸಿದ ಎಲ್ಲ ಸಾಮಗ್ರಿಗಳನ್ನು ಸಂಸ್ಥೆಯವರೇ ಪೂರೈಸಲಿದ್ದು, ತರಬೇತಿ ನವನಗರದ ಬಸವೇಶ್ವರ ಬ್ಯಾಂಕ್ ಆವರಣದಲ್ಲಿರುವ ಬಸವ ಕಲಾವೇದಿಕೆಯಲ್ಲಿ ನಡೆಯಲಿದೆ. ಆಸಕ್ತ ಮಹಿಳೆಯರು ಶಿಲ್ಪಾ ಯರಾಶಿ(7892951279) ಹಾಗೂ ಜಯಮ್ಮ ಅಬ್ಬುಲಪೂರ(9980649522) ಇವರನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ.

# ಸಚಿವ ತಿಮ್ಮಾಪೂರ ವಿರುದ್ಧದ ಆರೋಪ ನಿರಾಧಾರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.15–ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಜಿ ಶಾಸಕ ಪಿ.ರಾಜೀವ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಕೆಪಿಸಿಸಿ ವಕ್ತಾರ ಮಹಾಂತೇಶ ಹಟ್ಟಿ ಹೇಳಿದ್ದಾರೆ.

ಮಂಗಳವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜೀವ ಮಾಡಿರುವ ಆರೋಪ ನಿರಾಧಾರವಾಗಿದ್ದು, ಗಾಳಿಯಲ್ಲಿ ಗುಂಡು ಹಾರಿಸಿ ಹೋಗಿದ್ದಾರೆ. ಅವರು ಮಾಡಿರುವ ಆರೋಪದ ಸತ್ಯಾಸತ್ಯತೆ ತಿಳಿಯಲು ಮುಖ್ಯಮಂತ್ರಿಗಳು ತನಿಖೆಗೆ ಮುಂದಾಗಬೇಕು ಎಂದು ಆಗ್ರಹಿಸಿದರು.

ಅವರ ವಿರುದ್ದ ಅಬಕಾರಿ ಇಲಾಖೆಯಲ್ಲಿ ಹಗರಣ ನಡೆಯುತ್ತಿದೆ ಎಂದು ಆರೋಪ ಮಾಡಿದ ಹಿನ್ನೆಲೆಯಲ್ಲಿ ಅಬಕಾರಿ ಹಗರಣದ ಸತ್ಯಾಸತ್ಯತೆಯನ್ನು ತಿಳಿಯಲು ಸರ್ಕಾರ ತನಿಖೆಗೆ ಮುಂದಾಗಬೇಕು ಎಂದು ಕೆಪಿಸಿಸಿ ವಕ್ತಾರ ಮಹಾಂತೇಶ ಹಟ್ಟಿ ಮುಖ್ಯಮಂತ್ರಿಗಳಿಗೆ ಆಗ್ರಹಿಸಿದ್ದಾರೆ.

ವಿರೋಧಿಸುವುದ ಎಂದಾಕ್ಷಣ ಎಲ್ಲವನ್ನೂ ವಿರೋಧಿಸುವುದಲ್ಲ. ಯಾವುದೇ ಆರೋಪ ಮಾಡುವಾಗ ಅದಕ್ಕೆ ಸ್ಪಷ್ಟತೆ ಇರಬೇಕು ಎನ್ನುವುದು ರಾಜೀವಗೆ ತಿಳಿದಿರಲಿ ಎಂದು ಹೇಳಿದ ಹಟ್ಟಿ, ಅವರು ಶಾಸಕರಾಗಿ ಎಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ ಎನ್ನುವುದಕ್ಕೆ ಜನ ಅವರನ್ನ ತಿರಸ್ಕರಿಸಿರುವುದೇ ಸಾಕ್ಷಿ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಪೀರಪ್ಪ ಮ್ಯಾಗೇರಿ, ದ್ಯಾಮಣ್ಣ ಗಾಳಿ, ರಾಜು ಲಮಾಣಿ, ಶಿವಾನಂದ ಮಾದರ, ರಮೇಶ ನಾಯಕ ಇದ್ದರು.

# ಗ್ರಾಹಕ ಹಕ್ಕುಗಳ ಬಗ್ಗೆ ಪ್ರತಿಯೊಬ್ಬರಿಗೂ ಅರಿವಿರಲಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.15–ಹಲವು ಕ್ಷೇತ್ರಗಳಲ್ಲಿ ಗ್ರಾಹಕ ಇಂದು ಒಂದಲ್ಲ ಒಂದು ರೀತಿಯಲ್ಲಿ ಮೋಸ ಹಾಗೂ ವಂಚನೆಗೆ ಒಳಗಾಗುತ್ತಿದ್ದಾನೆ. ಆದ್ದ-ರಿಂದ ಇವುಗಳ ಬಗ್ಗೆ ಗ್ರಾಹಕ ಎಚ್ಚರಿಕೆಯಿಂದ ಇರಬೇಕು. ಗ್ರಾಹಕ ಹಕ್ಕುಗಳ ಬಗ್ಗೆ ತಿಳಿದುಕೊಂಡಿರಬೇಕು ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತದ(ಎಬಿಜಿಪಿ) ಜಿಲ್ಲಾ ಘಟಕದ ಕಾರ್ಯದರ್ಶಿ ಡಾ.ಎಂ.ಜಿ.ದೀಕ್ಷಿತ ಹೇಳಿದರು.

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಐಕ್ಯೂಎಸಿ, ಎಬಿಜಿಪಿ ಜಿಲ್ಲಾ ಘಟಕ ಮತ್ತು ಎನ್.ಎಸ್.ಎಸ್. ಘಟಕಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಗ್ರಾಹಕ ಹಕ್ಕು ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗ್ರಾಹಕರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳುವಳಿಕೆ ಇದ್ದಲ್ಲಿ ತಮಗಾಗುವ ಮೋಸವನ್ನು ತಡೆಯಬಹುದು. ಗ್ರಾಹಕರಿಗೆ ಈ ದಿಶೆಯಲ್ಲಿ ಅರಿವು ಮೂಡಿಸಿ ಅವರ ಹಿತರಕ್ಷಣೆಯನ್ನು ಮಾಡುವ ಉದ್ದೇಶ ಎಬಿಜಿಪಿ ಹೊಂದಿದ್ದು, ಗ್ರಾಹಕರು ಇದರ ಉಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಎಬಿಜಿಪಿ ಕಾನೂನು ಸಲಹೆಗಾರ ಜಯತೀರ್ಥ ಕುಲಕರ್ಣಿ ಮಾತನಾಡಿ, ಗ್ರಾಹಕ ಮಾರುಕಟ್ಟೆ ರಾಜನಾಗಿದ್ದರೂ ಬಹಳಷ್ಟು ಜನರಿಗೆ ಮೋಸ ಹಾಗೂ ಅನುಚಿತ ವ್ಯವಹಾರಗಳ ಬಗ್ಗೆ ಕಲ್ಪನೆಯಿಲ್ಲ. ಇವರ ಹಿತಾಸಕ್ತಿಯನ್ನು ಕಾಪಾಡಲು ಇರುವ ಕಾನೂನಿನ ಬಗ್ಗೆ ಜನತೆ ತಿಳಿದುಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಶ್ರೀನಿವಾಸ ನರಗುಂದ, ಗ್ರಾಹಕರು ತಮಗಾದ ಶೋಷಣೆಯ ವಿರುದ್ಧ ಧ್ವನಿ ಎತ್ತಬೇಕಾದರೆ ಅವರಿಗೆ ತಮಗಿರುವ ಹಕ್ಕುಗಳ ಬಗ್ಗೆ ಅರಿವು ಇರಬೇಕು. ವಿದ್ಯಾರ್ಥಿಗಳು ತಮ್ಮ-ತಮ್ಮ ಪರಿಸರದಲ್ಲಿ ಈ ವಿಷಯವಾಗಿ ಜನರಲ್ಲಿ ಜಾಗೃತಿಯನ್ನುಂಟು ಮಾಡುವುದರ ಮೂಲಕ ಗ್ರಾಹಕರನ್ನು ಸಂಘಟಿಸುವ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಎಬಿಜಿಪಿ ಸದಸ್ಯರಾದ ಚಂದ್ರಕಲಾ ಪಾಟೀಲ ಮತ್ತು ಲತಾ ಶೀಲವಂತರ ಗ್ರಾಹಕ ಗೀತೆ ಸಾದರಪಡಿಸಿದರು. ಸಂಯೋಜಕ ಪ್ರೊ.ಎಸ್.ಎಸ್. ಹಂಗರಗಿ ಸ್ವಾಗತಿಸಿದರು. ಉಪನ್ಯಾಸಕಿ ಎಸ್.ಪಿ.ದೇಶಪಾಂಡೆ ನಿರೂಪಿಸಿದರು. ವಿದ್ಯಾರ್ಥಿ ಪ್ರಧಾನ ಕಾರ್ಯದರ್ಶಿ ಶ್ರವಣಾ ಸಿದ್ನಾಳ ವಂದಿಸಿದರು.

ಎನ್.ಎಸ್.ಎಸ್. ಅಧಿಕಾರಿಗಳಾದ ಎಸ್.ವಾಯ್.ಬೊಮ್ಮಣ್ಣವರ, ಎಸ್.ಎಂ.ಹಡಪದ, ಜಂಟೀ ಕಾರ್ಯದರ್ಶಿ ಡಾ.ಎಸ್.ಬಿ.ಪರ್ವತೀಕರ, ಎಬಿಜಿಪಿ ಸದಸ್ಯೆ ಅರ್ಚನಾ ಬಳೂಲಮಠ ಇದ್ದರು.

# ಬಸವಜಯ ಮೃತ್ಯುಂಜಯ ಶ್ರೀಗಳಿಂದ ಪೀಠದ ದುರ್ಬಳಕೆ–ಆರೋಪ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.15–ಕೂಡಲಸಂಗಮದ ಪಂಚಮಸಾಲಿ ಮಠದ ಪೀಠವನ್ನು ಬಸವಜಯ ಮೃತ್ಯುಂಜಯ ಸ್ವಾಮೀಜಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ಮುಖಂಡರು ಹಾಗೂ ಟ್ರಸ್ಟ್ ಸದಸ್ಯರು ಆರೋಪಿಸಿದ್ದಾರೆ.

ಮಂಗಳವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡ ಅಮರೇಶ ನಾಗೂರ, ಪಂಚಮಸಾಲಿ ಪೀಠವನ್ನು ಕೂಡಲಸಂಗಮದಲ್ಲಿ ಸ್ಥಾಪನೆ ಮಾಡಿ ಬಸವಜಯ ಮೃತ್ಯುಂಜಯ ಸ್ವಾಮೀಜಿಯನ್ನು ಪೀಠಾಧ್ಯಕ್ಷರನ್ನಾಗಿ ಮಾಡಿದ್ದೇವೆ. ಆದರೆ ಕಳೆದ ಕೆಲವು ವರ್ಷಗಳಿಂದ ಪೀಠವನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದರು.

ಇತ್ತೀಚೆಗೆ ನಡೆದ 2ಎ ಮೀಸಲಾತಿ ಹೋರಾಟಕ್ಕೆ ಸಂಬಂಧಿಸಿದಂತೆ ಒಂದು ಪಕ್ಷದ ಬ್ಯಾನರ ಅಡಿಯಲ್ಲಿ ಹೋರಾಟವನ್ನು ಮಾಡುತ್ತಿದ್ದಾರೆ. ಇದು ಖಂಡನೀಯ. ಮೀಸಲಾತಿ ಹೋರಾಟದಲ್ಲಿ ಮೊದಲು ಪಕ್ಷಾತೀತ, ಜಾತ್ಯಾತೀತವಾಗಿ ಮಾಡುತ್ತಿದ್ದೇವು ಆದರೆ ಈಗ ಸಮಾಜವನ್ನು ದಿಕ್ಕು ತಪ್ಪಿಸುತ್ತಾ ಒಂದು ಪಕ್ಷದ ಕಡೆಗೆ ವಾಲಿದ್ದಾರೆಂದು ಅವರು ಹೇಳಿದರು.

ಪಂಚಮಸಾಲಿ ಸಮಾಜದ ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗುವುದು ಶ್ರೀಗಳ ಕೆಲಸವಾಗಿದೆ. ಆದರೆ ಶ್ರೀಗಳು ಒಗ್ಗಟ್ಟನ್ನು ಮುರಿದು ನಮ್ಮೊಳಗೆ ಗೊಂದಲ ಉಂಟು ಮಾಡುತ್ತಿದ್ದಾರೆ. ಇತ್ತೀಚೆಗೆ ಬಿಜೆಪಿ ಪಕ್ಷದಿಂದ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಉಚ್ಚಾಟನೆ ಮಾಡಿದ್ದನ್ನು ಖಂಡಿಸಲಿ, ಆದರೆ ಅವರ ಏಜೆ-ಂಟರಂತೆ ವರ್ತಿಸುತ್ತಿದ್ದಾರೆ. ಅವರ ಪರ ನಿಲ್ಲುವುದು ಎಷ್ಟು ಸೂಕ್ತ ಎಂದು ಪ್ರಶ್ನಿಸಿದರು.

ಟ್ರಸ್ಟ್ ಸಮಾಜದ ಎಲ್ಲ ಬಾಂಧವರನ್ನು ವಿಶ್ವಾಸಕ್ಕೆ ತೆಗೆದು-ಕೊಂಡು ಸ್ಥಾಪನೆ ಮಾಡಿದ್ದೇವೆ. ಯಾವುದೇ ಒಂದು ಕುಟುಂಬಕ್ಕೆ ಸೀಮಿತವಾಗಿಲ್ಲ. ಇದರೊಂದಿಗೆ 48 ಜನರು ಟ್ರಸ್ಟಿಗಳನ್ನಾಗಿ ಮಾಡಲಾಗಿದೆ. ಅಲ್ಲಿ ಎಲ್ಲ ಪಕ್ಷದವರು ಇದ್ದಾರೆ. ಮೀಸಲಾತಿ ಹೋರಾಟ ಸಮಯದಲ್ಲಿ ಶ್ರೀಗಳು ಏಕಪಕ್ಷೀಯವಾಗಿ ಕೆಲವೊಂದು ಬಾರಿ ನಿರ್ಧಾರ ಮಾಡುತ್ತಾ ಹೊರಟಾಗ ಸಮಾಜದವರು ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳಬಾರದು ಎಂದು ಹೇಳಿದರೂ ಶ್ರೀಗಳು ಅದನ್ನು ಮುಂದು ವರೆಸಿದ್ದಾರೆ. ಈ ಎಲ್ಲ ಗೊಂದಲಗಳು ಶ್ರೀಗಳಿಂದ ನಡೆ-ಯುತ್ತಿದೆ ಎಂದು ಆರೋಪಿಸಿದರು.

ಏ.19 ರಂದು ಕೂಡಲಸಂಗಮದ ಪೀಠದಲ್ಲಿ ರಾಜ್ಯಮಟ್ಟದ ಪಂಚಮಸಾಲಿ ಸಮಾಜದ ಸಭೆಯನ್ನು ಬೆಳಿಗ್ಗೆ 11.30 ಗಂಟೆಗೆ ಕರೆಯಲಾಗಿದೆ. ಸಭೆಯಲ್ಲಿ ಸಚಿವರು, ಶಾಸಕರು, ಮಾಜಿ ಶಾಸಕರು, ಟ್ರಸ್ಟಿನ ಎಲ್ಲ ಸದಸ್ಯರು, ಹಿರಿಯರು, ಯುವ ಮುಖಂಡರು, ಜಿಲ್ಲೆಯ, ತಾಲೂಕಿನ ಎಲ್ಲ ಘಟಕಗಳ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಸಭೆಯಲ್ಲಿ 2ಎ ಮೀಸಲಾತಿ ಹೋರಾಟ ಹಾಗೂ ಶ್ರೀಗಳ ಗೊಂದಲ ಹೇಳಿಕೆಗಳ ಬಗ್ಗೆ ಚರ್ಚೆ ನಡೆಯಲಿದ್ದು, ಸಮಾಜವು ಒಂದು ದಿಟ್ಟ ನಿರ್ಧಾರ ಕೈಗೊಳ್ಳಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಂಗಣ್ಣ ಗಂಜೀಹಾಳ, ಗಂಗಣ್ಣ ಬಾಗೇವಾಡಿ, ಶಿವಾನಂದ ಘಂಟಿ, ಸಿದ್ದಪ್ಪ ಹೊಸೂರ, ಮಂಜುನಾಥ ಪುರತಗೇರಿ, ಚನ್ನವೀರ ಅಂಗಡಿ ಇದ್ದರು.

### ಡಾ.ಭಾರತಿ ಸಾಲಿಮಠಗೆ 'ಮಹಾದೇವಿ ಅಕ್ಕ ಪ್ರಶಸ್ತಿ'

# ಬಿ.ವಿ.ವಿ.ಸಂಘದ ಅಕ್ಕನ ಬಳಗ ದೇಶಕ್ಕೆ ಮಾದರಿ: ಡಿಸಿ ಜಾನಕಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.15–ಸ್ತ್ರೀ ಸ್ವಾತಂತ್ರ್ಯ– ಸಮಾನತೆ, ಸ್ತ್ರೀ ಜಾಗೃತಿ ಸಬಲೀಕರಣ ಮುಂತಾದ ಸ್ತ್ರೀಪರ ಸಂಘಟನೆ ಉದ್ದೇಶದಿಂದ 1938 ರಲ್ಲಿ ಸ್ಥಾಪನೆಗೊಂಡ ಬಿ.ವಿ.ವಿ.ಸಂಘದ ಅಕ್ಕನ ಬಳಗ ದೇಶಕ್ಕೆ ಮಾದರಿಯಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಮ್ ಹೇಳಿದರು. ನಗರದ ಬಿ.ವಿ.ವಿ.ಸಂಘದ ಅಕ್ಕನ ಬಳಗದ 87 ನೇ ವಾರ್ಷಿಕೋತ್ಸವ ಹಾಗೂ ಅಕ್ಕಮಹಾದೇವಿ ಜಯಂತಿ ಮತ್ತು ಮಹಾದೇವಿ ಅಕ್ಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಅಕ್ಕನ ಬಳಗ ಬಾಗಲಕೋಟೆಯಲ್ಲಿ ಸ್ಥಾಪಿತವಾದ ಪ್ರಥಮ ಮಹಿಳಾ ಸಂಘಟನೆಯಾಗಿದ್ದು ಇಂದು 67 ನೇ ವಾರ್ಷಿಕೋತ್ಸವ ಆಚರಿಸುಕೋಳ್ಳುತ್ತಿರುವ ಹೆಮ್ಮೆಯ ವಿಷಯ ಎಂದರು.

ಇಲ್ಲಿನ ಸಂಘಟಿತ ಕಾರ್ಯ, ಸಾವಿರಾರು ಮಹಿಳೆಯರಿಗೆ ಸಾವಲಂಬಿ ಬದುಕು ಕಟ್ಟಿಕೊಳ್ಳಲು ಬೆನ್ನೆಲುಬಾಗಿ ನಿಂತಿದೆ, ಅಲ್ಲದೆ ಮಹಿಳೆಯರಿಗೆ ಸ್ವಯಂ ಉದ್ಯೋಗಕ್ಕಾಗಿ ಇಲ್ಲಿ ಟ್ರೈಲರಿಂಗ್ ತರಬೇತಿಗಳು ನಡೆಯುತ್ತಿವೆ, ಅಲ್ಲದೆ ಜಿಲ್ಲೆಯಲ್ಲೆ ಮೊದಲ ಬಾರಿಗೆ ಶಿಶು ವಿಹಾರವನ್ನು ಸ್ಥಾಪಿಸಿ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡಿದೆ, ಈಗ ಆಧುನಿಕತೆಯ ತಕ್ಕಂತೆ ಅಕ್ಕ ಶೈನಿಂಗ್ ಸ್ಟಾರ್ ಆಗಿ ಪರಿವರ್ತನೆಗೊಂಡು ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ. ಮಹಿಳೆಯರ ಸಮಾನತೆಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿದ್ದು ದೇಶದಲ್ಲಿ ಇದೊಂದು ಮಾದರಿ ಮಹಿಳಾ ಸಂಘಟನೆಯಾಗಿದೆ ಎಂದು ಜಾನಕಿ ಹೇಳಿದರು.

ಮೈಸೂರು ಮಾನಸ ಗಂಗೋತ್ರಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕಿ ಡಾ. ಭಾರತಿ ಸಾಲಿಮಠ ಮಹಾದೇವಿ ಅಕ್ಕ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಅಕ್ಕನ ಬಳಗ ಕಾರ್ಯ ಚಟುವಟಿಕೆ ಶ್ಲಾಘನೀಯವಾಗಿದ್ದು, ಅದರಲ್ಲೂ ಇಲ್ಲಿ ಮಹಿಳೆಯರು ರುದ್ರ ಹೇಳುವುದು ಮತ್ತಷ್ಟು ವಿಶೇಷವಾಗಿದೆ. ನಾನು ಕೂಡಾ ರುದ್ರ ಕಲಿಯುತ್ತೇನೆ ಎಂದ ಅವರು ಈ ಭಾಗದ ಶೈಕ್ಷಣಿಕೆ ಕ್ಷೇತ್ರ ರಾಜ್ಯದ ತುಂಬೆಲ್ಲಾ ಹೆಸರುವಾಸಿಯಾಗಿದ್ದು ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಅವರ ದೂರ ದೃಷ್ಟಿ ನಿಜವಾಗಲು ಸಮರ್ಥನಿಯ ಎಂದರು. ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ಡಾ. ವೀರಣ್ಣ ಚರಂತಿಮಠ ಕಾರ್ಯಕ್ರಮದ ನೇತೃತ್ವವಹಿಸಿ ಮಾತನಾಡಿ, ಅಕ್ಕನ ಬಳಗ ಮಹಿಳೆಯರಲ್ಲಿ ಶೈಕ್ಷಣಿಕ ಅರಿವು, ಸಮಾನತೆ, ಸಾವಲಂಬಿಯಾಗಿ ಬದುಕಲು ಅನೇಕ ತರಬೇತಿಗಳನ್ನು ನೀಡಿ ಸಾವಿರಾರು ಮಹಿಳೆಯರಿಗೆ ಬದುಕು ಕಟ್ಟಿಕೊಟ್ಟಿದೆ. ಬಿ.ವಿ.ವಿ.ಸಂಘದ ಅವಿಭಾಜ್ಯ ಅಂಗವಾಗಿರುವ ಅಕ್ಕನ ಬಳಗ ಸಂಘದ ಸಾಂಸ್ಕೃತಿಕ ಮಹಿಳಾ ಸಂಘಟನೆಯಾಗಿದೆ ಎಂದರು.

ದಿವ್ಯ ಸಾನಿಧ್ಯ ವಹಿಸಿದ್ದ ಇಲಕಲ್ಲಿನ ಚಿತ್ತರಗಿ ಸಂಸ್ಥಾನ ಮಠದ ಪೂಜ್ಯಶ್ರೀ ಗುರುಮಹಾಂತ ಸ್ವಾಮಿಗಳು, ಅಕ್ಕಮಹಾದೇವಿ ಇಂದಿನ ಮಹಿಳೆಯರಿಗೆ ಆದರ್ಶವಾಗಿದ್ದು, ಆಕೆಯ ತತ್ವಗಳಿಗೆ ಅನುಗುಣವಾಗಿ ಅಕ್ಕನ ಬಳಗ ಬೆಳೆದು ಬಂದಿರುವುದು ಶ್ಲಾಘನೀಯ, ಮಹಿಳೆಯರಿಗೆ ಮಹಿಳೆಯರಿಂದಲೇ ಶಕ್ತಿ ತುಂಬುವ ಇಂಥ ಕಾರ್ಯಕ್ರಮಗಳು ಇನ್ನು ಹೆಚ್ಚಾಗಿ ಜರುಗಲಿ ಎಂದು ಶುಭ ಕೋರಿದರು.

ಅಧ್ಯಕ್ಷತೆಯನ್ನು ಅಕ್ಕನ ಬಳಗದ ಅಧ್ಯಕ್ಷೆ ನಿರ್ಮಲಾ ಹಲಕುರ್ಕಿ ವಹಿಸಿದ್ದರು. ಮಹಾದೇವಿ ಅಕ್ಕ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷೆ ರಾಜೇಶ್ವರಿ ಚರಂತಿಮಠ, ಅಕ್ಕನ ಬಳಗದ ಗೌರವಾಧ್ಯಕ್ಷೆ ಡಾ.ಅನಸೂಯಾ ಕೆರೂಡಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ರೇಖಾ ಕಲಬುರಗಿ, ವಿಜಯಲಕ್ಷ್ಮೀ ಭದ್ರಶೆಟ್ಟಿ ಇದ್ದರು.

ಬೆಳಿಗ್ಗೆ ಅಕ್ಕಮಹಾದೇವಿ ಮಂದಿರದಲ್ಲಿ ವಿಶೇಷ ಪೂಜೆ, ಅಭಿಷೇಕ ಹಾಗೂ ಅಕ್ಕಮಹಾದೇವಿ ಉತ್ಸವ ಮೂರ್ತಿಯ ಪಲ್ಲಕ್ಕಿ ಮೆರವಣಿಗೆ ವಿವಿಧ ವಾದ್ಯ ವೈಭವದೊಂದಿಗೆ ಜರುಗಿ-ತು. ನಂತರ ಉಡಿ ತುಂಬುವ ಕಾರ್ಯಕ್ರಮ ಜರುಗಿತು.

# ಉದ್ಯೋಗ ಖಾತ್ರಿ ಹಾಗೂ ರೋಜಗಾರ ದಿವಸ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸಗೂರು: ಲಿಂಗಸಗೂರು ತಾಲೂಕಿನ ಕಾಳಾಪುರ ಗ್ರಾಮ ಪಂಚಾಯತಿಯ ಕಾಳಾಪೂರ ಗ್ರಾಮದಲ್ಲಿ ಈಗಾಗಲೇ ಏಪ್ರೀಲ್ 01 ರಿಂದ ನರೇಗಾ ಕೂಲಿ ಮೊತ್ತ 349 ರಿಂದ ರೂ.370 ಕ್ಕೆ ಹೆಚ್ಚಿಸಲಾಗಿದ್ದು, ಕೂಲಿಕಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಕಾಳಾ ಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಾಳಾ ಪುರ ಗ್ರಾಮ ದಲ್ಲಿ ನಾಲ ಉಳೆತ್ತುವ ಕಾಮಗಾರಿ

ಗುಳೆ ಹೋಗದೇ ಇದ್ದೂರಲ್ಲೇ ಸತತ ಮೂರು ತಿಂಗಳುಗಳ ಕಾಲ ನಿರಂತರವಾಗಿ ನರೇಗಾ ಯೋಜನೆಯಡಿ ಕೆಲಸ ಮಾಡುವಂತೆ ಕೂಲಿಕಾರರಿಗೆ ಬಾಲಪ್ಪ ತಾಲೂಕ ಐಇಸಿ ಸಂಯೋಜಕರು ಹೇಳಿದರು.

ವಲಸೆ ಯಾಕ್ರಿ ನಿಮ್ಮೂರಲ್ಲೇ ಉದ್ಯೋಗ ಖಾತ್ರಿ ಹಾಗೂ ರೋಜಗಾರ ದಿವಸ ಆಚರಣೆ

ಕಾಳಾ ಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಾಳಾ ಪುರ ಗ್ರಾಮ ದಲ್ಲಿ ನಾಲ ಉಳೆತ್ತುವ ಕಾಮಗಾರಿ

ಅಲ್ಲದೇ, ನಮ್ಮ ಸಿಬ್ಬಂದಿಗಳು ತಮಗೆ ನೀಡಿದ ಅಳತೆಗನುಸಾರವಾಗಿ ಕೆಲಸ ನಿರ್ವಹಿಸಿ ಪೂರ್ಣ ಪ್ರಮಾಣದ ಕೂಲಿಯನ್ನು ಪಡೆಯಬೇಕು. ಸ್ಥಳದಲ್ಲಿ ಹಾಜರಿರುವವರಿಗೆ ಮಾತ್ರ ಹಾಜರಿ ಹಾಕಬೇಕು ಎಂದು ಕಟ್ಟುನಿಟ್ಟಾಗಿ ಸಿಬ್ಬಂದಿಗೆ ಸೂಚಿಸಿದರು.

ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ ಈ ಎರಡು ಇನ್ಶೂರೆನ್ಸ್ ಗಳನ್ನು ಮಾಡಿಕೊಳ್ಳಲು ಗ್ರಾಮಸ್ಥರಿಗೆ ತಿಳಿಸಲಾಯಿತು,

ನರೇಗಾ ಯೋಜನೆ ಅಡಿಯಲ್ಲಿ ಏಪ್ರಿಲ್ ಹಾಗೂ ಮೇ –2025–26 ರಲ್ಲಿ ಕೆಲಸದಲ್ಲಿ 30% ರಿಯಾಯಿತಿ ನೀಡಲಾಗಿದೆ, ಸದರಿ ರಿಯಾಯಿತಿ ಸದುಪಯೋಗಪಡಿಸಿಕೊಳ್ಳಲು ಗ್ರಾಮಸ್ಥರಿಗೆ ತಿಳಿಸಲಾಯಿತು,

ಕೂಲಿಕಾರರಿಗೆ ನಿರಂತರವಾಗಿ ಕೆಲಸ ನೀಡಲಾಗುವುದು. ಜೊತೆಗೆ ಕಡ್ಡಾಯವಾಗಿ ಎನ್.ಎಂ.ಆರ್ ನಲ್ಲಿ ಇರುವ ಕೂಲಿಕಾರರೇ ಕೆಲಸಕ್ಕೆ ಹಾಜರಾಗಬೇಕು. ಜೊತೆಗೆ ಸಣ್ಣ ಮಕ್ಕಳನ್ನು ಕೆಲಸದ ಸ್ಥಳಕ್ಕೆ ಕರೆ ತರದೇ ಕೂಸಿನ ಮನೆಯಲ್ಲಿ ಬಿಟ್ಟು ಬರಲು ತಿಳಿಸಿದರು.

ಸಮುದಾಯ ಕಾಮಗಾರಿ ಜೊತೆಗೆ ವಯಕ್ತಿಕ ಕಾಮಗಾರಿ ಮಾಡಿಕೊಂಡು ಜೀವಿಯ ಅವಧಿಯಲ್ಲಿ 5 ಲಕ್ಷ ದ ವರೆಗೆ ಲಾಭ ಪಡೆಯ ಬಹುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬಸವರಾಜ್ ಕಾರ್ಯದರ್ಶಿ, ಮೌನೇಶ ಗ್ರಾಮ ಪಂಚಾಯತ್ ಸದಸ್ಯರು, ಬಾಲಪ್ಪ ತಾಲೂಕ ಐಇಸಿ ಸಂಯೋಜ-ಕರು ತಾಲೂಕ್ ಪಂಚಾಯತ ಲಿಂಗಸಗೂರು ಅದಮ್ಮ ಗ್ರಾಮ ಕಾಯಕ ಮಿತ್ರರು , ಮೇಟ್ಸ್ ಹಾಗೂ ಕೂಲಿಕರಾರು ಹಾಜರಿದ್ದರು,

# ಗೃಹರಕ್ಷಕರಿಂದ ಅಂಬೇಡ್ಕರ್ ಜಯಂತಿ

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ಸಮಾನತೆಯ ಹರಿಕಾರ, ಕೆಳಗೆ ಬಿದ್ದ ಸಮಾಜವನ್ನು ಎತ್ತಿ ಅಪ್ಪಿಕೊಂಡ ಮಹಾನ್ ದಾರ್ಶನಿಕ ಸಂವಿಧಾನ ಶಿಲ್ಪಿ, ವಿಶ್ವರತ್ನ ಡಾ ಬಾಬಾ ಸಾಹೇಬ್ ಅಂಬೇಡ್ಕರರವರಾಗಿದ್ದರೆಂದು ಕಮಲನಗರ ಗೃಹರಕ್ಷಕ ದಳದ ಘಟಕದ ಘಟಕಾಧಿಕಾರಿ ಸಿ.ಎಮ್ ಗಳಗೆ ಹೇಳಿದರು. ಪಟ್ಟಣದ ಗೃಹರಕ್ಷಕ ದಳದ ಘಟಕದ ವತಿಯಿಂದ ಹಮ್ಮಿಕೊಂಡ ಡಾ. ಅಂಬೇಡ್ಕರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಪೂಜೆ ಸಲ್ಲಿಸಿ, ಇವರ ಸಂಘರ್ಷಮಯ ಜೀವನ ಇಂದಿನ ಯುವಕರಿಗೆ ಪ್ರೇರಣೆಯಾಗಬೇಕೆಂದರು, ಶಿಕ್ಷಣ ದಿಂದ ಮಾತ್ರ ಜಗತ್ತನ್ನು ಗೆಲ್ಲಬಹುದು ಎಂದು ಸಮಾಜಕ್ಕೆ ತೋರಿಸಿ ಕೊಟ್ಟವರು ಎಂದು ಅಭಿಪ್ರಾಯ ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ದಯಾನಂದ ಚೌತಾಡೆ, ಕಲ್ಯಾಣರಾವ ಮಹಾಜನ, ರಾಜಕುಮಾರ ಮನ್ಮತಪ್ಪ, ಸಿಬ್ಬಂದಿಗಳಾದ ವಿರೇಂದ್ರ ಭೈರೆ, ಬಾಲಿಕಾ ತೋರಣೆಕರ್, ಮಹಾನಂದಾ ಬಾಲಾಜಿ, ರಂಜನಾ ಪ್ರಕಾಶ, ಸುನೀಲ ಧರಣೆ, ಖಾಜಾಮಿಯ್ಯ ಖುರೇಷಿ, ರಾಯಬಾನ ಸಂಜುಕುಮಾರ ಗಳಗೆ, ಜಗನ್ನಾಥ ಹಾಗೂ ಇನ್ನಿತರರು ಹಾಜರಿದ್ದರು.

# 7 ಕೋಟಿ ಡ್ರಗ್ಸ್ ವಶ:ಆರೋಪಿಗಳ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು ಏ.15–ಮಾದಕ ವಸ್ತುಗಳ ಮಾರಾಟ ಸಾಗಾಣೆ ವಿರುದ್ಧ ಸಮರ ಸಾರಿರುವ ವಿದೇಶಿ ಪ್ರಜೆ, ಸಿವಿಲ್ ಇಂಜಿನಿಯರ್ ಸೇರಿ 10 ಮಂದಿ ಡ್ರಗ್ಸ್ ಪೆಡ್ಲರ್ ಗಳನ್ನು ಬಂಧಿಸಿರುವ ಸಿಸಿಬಿ ಪೊಲೀಸರು 6ಕೋಟಿ 80 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಎಲೆಕ್ಟ್ರಾನಿಕ್ ಸಿಟಿ–2ನೇ ಹಂತದ ಡಿ ಮಾರ್ಟ್ ಹಿಂಭಾಗ ನಿಷೇದಿತ ಗಾಂಜಾವನ್ನು ಮಾರಾಟ ಮಾಡುತ್ತಿದ್ದ ಡ್ರಗ್ಸ್ ಪೆಡ್ಲರ್ ನನ್ನು ಬಂಧಿಸಿ 3 ಕೆಜಿ 554 ಗ್ರಾಂ ಹೈಡ್ರೋಫೋನಿಕ್ ಗಾಂಜಾ ಹಾಗೂ 26,06,500 ನಗದು ಮೊಬೈಲ್ ಸೇರಿ 4.52,54,500 ಮೌಲ್ಯದ ಮಾಲುಗಳನ್ನು ಜಪ್ತಿ ಮಾಡಿದ್ದಾರೆ.

# ಮಗಳ ಮದುವೆಗೆಂದು ಮಾಡಿಸಿದ್ದ 16 ತೊಲೆ ಬಂಗಾರ, 5 ತೊಲಿಬೆಳ್ಳಿ ದೋಚಿದ ಕಳ್ಳರು



ಮಲ್ಲಮ್ಮನುಡಿ ವಾರ್ತೆ ಬೀದರ. ಏ. 15 : ಮಗಳ ಮದುವೆಗೆಂದು ಚಿನ್ನಾಭರಣ ಖರೀದಿಸಿದ್ದ ಮಾಜಿ ಯೋಧರೊಬ್ಬರು ಲಗ್ನಪತ್ರಿಕೆ ಹಂಚಲು ಹೋಗಿದ್ದರೆ, ಇತ್ತ ಖದೀಮರು ಮನೆಗೆ ಕನ್ನ ಹಾಕಿದ್ದಾರೆ. ಮಗಳ ಮದುವೆಗೆಂದು ಮಾಡಿದ್ದ 16 ತೊಲೆ ಬಂಗಾರ, 5 ತೊಲೆ ಬೆಳ್ಳಿ ಇದೀಗ ಕಳ್ಳರ ಪಾಲಾಗಿದೆ.

ಬೀದರ್ ನಗರದ ಸಂಗಮೇಶ ಕಾಲೋನಿಯಲ್ಲಿ ಈ ಘಟನೆ ನಡೆದಿದೆ.

ಮಾಜಿ ಯೋಧ ವೀರಶೆಟ್ಟಿ ಘಾಳೆಪ್ಪಾ ರಾಮಶೆಟ್ಟಿ ಎಂಬುವವರ ಮನೆಯಲ್ಲಿ ಕಳ್ಳತನವಾಗಿದೆ.

ಮನೆಗೆ ಕನ್ನ ಹಾಕಿದ ಖದೀಮರು ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕದ್ದು ಪರಾರಿಯಾಗಿದ್ದಾರೆ. 16 ತೊಲೆ ಬಂಗಾರ, 5 ತೊಲೆ ಬೆಳ್ಳಿ, 30 ಸಾವಿರ ನಗದು ಲೂಟಿ ಮಾಡಿದ್ದಾರೆ.

ಈ ಬಗ್ಗೆ ಗಾಂಧಿಗಂಜ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನ್ಯಾಯಾಧೀಶರ ಮನೆಗಳ್ಳತನ;ಮೂವರ ಬಂಧನ



ಮಲ್ಲಮ್ಮ ನುಡಿ ವಾರ್ತೆ

ಬೀದರ,ಏ.15: ನ್ಯಾಯಾಧೀಶರ ಮನೆ ಕಳವು ಮಾಡಿದ ಮೂರು ಜನ ಆರೋಪಿತರನ್ನು ನೂತನ ನಗರ ಪೊಲೀಸರು ವಶಕ್ಕೆ ಪಡೆದು 1.77 ಲಕ್ಷ ರೂ ಮೌಲ್ಯದ ಸ್ವತ್ತನ್ನು ಜಪ್ತಿ ಮಾಡಿದ್ದಾರೆ ಎಂದು ಬೀದರ ಎಸ್ಪಿ ಪ್ರದೀಪ ಗುಂಟಿ ಅವರು ಇಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.ಕಳೆದ ಜ.20 ರಂದು 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ಸಿ–2 ನ್ಯಾಯಾಲಯದ ನ್ಯಾಯಾಧೀಶ ಎಮ್.ಡಿ ಶೈಜ್ ಚೌತಾಯಿ ಅವರು ವಾಸವಿದ್ದ ಜನವಾಡಾ ರೋಡಿನ ಪಕ್ಕದ ಸರ್ಕಾರಿ ವಸತಿ ಗೃಹದ ಬಾಗಿಲು ಕೀಲಿ ಮುರಿದು ಮನೆಯಲ್ಲಿದ್ದ 109 ಗ್ರಾಂ ಬಂಗಾರದ ಮತ್ತು 50 ಗ್ರಾಂ ಬೆಳ್ಳಿಯ (ಅಂ–ದಾಜು 8 ಲಕ್ಷ ರೂ ಮೌಲ್ಯ) ಆಭರಣಗಳನ್ನು ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದರು.ಈ ಕುರಿತು ನ್ಯಾಯಾಧೀಶರು ಸಲ್ಲಿಸಿದ ಲಿಖಿತ ದೂರಿನ ಆಧಾರದ ಮೇಲೆ ಪೊಲೀಸ್ ತನಿಖೆ ತೀವ್ರಗೊಳಿಸಲಾಗಿತ್ತು ಎಂದರು

ಇಂದು ನಸುಕಿನ ಜಾವ 2.30 ಗಂಟೆಯ ಸುಮಾರಿಗೆ ಮಹಾರಾಷ್ಟ್ರ ಲಾತೂರ ಜಿಲ್ಲೆಯ ಉದಗೀರ ರೈಲ್ವೆ ಸ್ಟೇಷನ್ ಬಳಿಯಲ್ಲಿ ಅನುಮಾನಾಸ್ಪದವಾಗಿ ಕಂಡುಬಂದ ಮೂರು ಜನರಿಗೆ ವಶ ಪಡೆದು ಕೂಲಂಕುಶವಾಗಿ ವಿಚಾರಿಸಲಾಗಿ ನ್ಯಾಯಾಧೀಶರ ಮನೆ ಕಳವು ಮಾಡಿದ ಬಗ್ಗೆ ಒಪ್ಪಿಕೊಂಡಿದ್ದಾರೆ. ಕಳವು ಮಾಡಿದ ಉಳಿದ ಸ್ವತ್ತು ಔರಂಗಬಾದನ ನಿವಾಸಿಯಾದ ಇನ್ನೊಬ್ಬ ಆರೋಪಿಯ ಹತ್ತಿರ ಇರುವ ಬಗ್ಗೆ ಹೇಳಿಕೆ ನೀಡಿದ್ದು, ತಲೆಮರೆಸಿಕೊಂಡ ಆರೋಪಿತನ ದಸ್ತಗಿರಿಗಾಗಿ ಬಲೆ ಬೀಸಲಾಗಿದೆ ಎಂದರು.

ಪ್ರಕರಣದ ಪತ್ತೆ ಕುರಿತು ಎಸ್ಪಿ ಪ್ರದೀಪ ಗುಂಟಿ,

ಹೆಚ್ಚುವರಿ ಎಸ್ಪಿ ಚಂದ್ರಕಾಂತ ಪೂಜಾರಿ,ಡಿವೈಎಸ್ಪಿ ಶಿವನಗೌಡ ಪಾಟೀಲ ಮಾರ್ಗದರ್ಶನದಲ್ಲಿ ನೂತನ ನಗರ ಠಾಣೆ ಪಿಐ ವಿಜಯಕುಮಾರ ನೇತೃತ್ವದಲ್ಲಿ, ಪಿಎಸ್ಐ ಪ್ರಭಾಕರ ಪಾಟೀಲ, ಸಿಬ್ಬಂದಿಯವರಾದ ಪ್ರಕಾಶ್ ಮಲ್ಲಿಕಾರ್ಜುನ,ನಿಂಗಪ್ಪ ಅಲ್ಲಾಪುರ ,ಗಾಂಧಿಗಂಜ ಪೊಲೀಸ ಠಾಣೆಯ ನವೀನ ಸಿ, ಗಂಗಾಧರ ಮತ್ತು ಇಮ್ರಾನ್ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು .




# ಕಾರ್ಯಕ್ರಮದ ಪೂರ್ವ ಸಿದ್ಧತೆ ಪರಿಶೀಲಿಸಿದ ಸಚಿವ ಈಶ್ವರ ಬಿ.ಖಂಡ್ರೆ



ಮಲ್ಲಮ್ಮನುಡಿ ವಾರ್ತೆಬೀದರ: ಏ.15. ಮಾನ್ಯಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರಿಂದ ಏಪ್ರಿಲ್.16 ರಂದು ಬೀದರನಲ್ಲಿ ಐತಿಹಾಸಿಕ 2025 ಕೋಟಿ ರೂ. ವೆಚ್ಚದ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ, ಮತ್ತು 1.5 ವರ್ಷಗಳ ನಂತರ ಪುನಃ ಆರಂಭವಾಗುತ್ತಿರುವ ಬೀದರ ನಾಗರಿಕ ವಿಮಾನಯಾನ ಚಾಲನೆ ಕಾರ್ಯಕ್ರಮದ ಪ್ರಯುಕ್ತ, ಇಂದು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಬೀದರ ನೆಹರೂ ಸ್ಟೇಡಿಯಂ ಹಾಗೂ ಬೀದರ ವಿಮಾನನಿಲ್ದಾಣದಲ್ಲಿ ಅಂತಿಮ ಹಂತದ ಸಿದ್ಧತೆಗಳನ್ನು ಪರಿಶೀಲಿಸಿದರು.

# ಧಗಧಗನೇ ಹೊತ್ತಿ ಉರಿದ ಕಾರು



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.15–ಜಿಲ್ಲೆಯ ಇಳಕಲ್ಲ ನಗರದ ಸರಕಾರಿ ಆಸ್ಪತ್ರೆಯ ಆವರಣದಲ್ಲಿ ನಿಂತಿದ್ದ ಮಾರುತಿ ಕಾರು ಧಗಧಗನೇ ಹೊತ್ತಿ ಉರಿದ ಘಟನೆ ಮಂಗಳವಾರ ಮಧ್ಯಾಹ್ನ ನಡೆದಿದೆ.

ರೋಗಿಯೊಬ್ಬರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಚಾಲಕ ರೋಗಿಯನ್ನು ಎಡ್ಮಿಟ್ ಮಾಡಿ ಮರಳಿ ಬಂದು ಕಾರು ಚಾಲು ಮಾಡುತ್ತಿದ್ದಂತೆ ಬೆಂಕಿ ಹೊತ್ತಿಕೊಂಡಿತು. ಕೂಡಲೇ ಚಾಲಕ ಕಾರಿನಿಂದ ಕೆಳಗೆ ಇಳಿದನು. ಒಮ್ಮೆಲೆ ಬೆಂಕಿ ಇಡೀ ಕಾರಿಗೆ ಪಸರಿಸಿ ಧಗ ಧಗ ಉರಿದು ಹೋಯಿತು. ಇಳಕಲ್ಲ ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶೋಷಿತ ಜನಾಂಗದ ಕಾರ್ಯಕರ್ತರಿಗೆ ನಿಗಮ, ಮಂಡಳಿಗಳಲ್ಲಿ ಸ್ಥಾನಮಾನ ನೀಡಲು ಮುಖ್ಯಮಂತ್ರಿಗಳಿಗೆ ವಾಘಮಾರೆ ಮನವಿ



ಮಲ್ಲಮ್ಮನುಡಿ ವಾರ್ತೆಬೀದರ್: ಜಿಲ್ಲೆಯ ಶೋಷಿತ ಜನಾಂಗಗಳ ಕಾಂಗ್ರೆಸ್ ಕಾರ್ಯಕರ್ತರು ಪಕ್ಷಕ್ಕಾಗಿ ಹಲವಾರು ವರ್ಷಗಳಿಂದ ದುಡಿಯುತ್ತಿದ್ದಾರೆ. ರಾಜ್ಯ ಸರ್ಕಾರದ ಕೆಲ ನಿಗಮ, ಮಂಡಳಿಗಳಲ್ಲಿ ನಾಮ ನಿರ್ದೇಶನ ಸ್ಥಾನಮಾನಗಳು ಖಾಲಿ ಇದ್ದು, ಜಿಲ್ಲೆಯ ಶೋಷಿತ ಜನಾಂಗಗಳ ಕಾರ್ಯಕರ್ತರಿಗೆ ಅವಕಾಶ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಲಾಗಿದೆ ಎಂದು ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಉಪಾಧ್ಯಕ್ಷ ಹಾಗೂ ಅಖಿಲ ಭಾರತೀಯ ಗೋಂಧಳಿ ಸಮಾಜ ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಸಿದ್ರಾಮ್ ಡಿ.ವಾಘಮಾರೆ ತಿಳಿಸಿದ್ದಾರೆ. ಈ ಕುರಿತು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಧುರೀಣರಾದ ಡಾ.ಸಿದ್ರಾಮ ವಾಘಮಾರೆ ಅವರು ಪತ್ರಿಕಾ ಪ್ರಕಟಣೆ ನೀಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮ ಸಮಾಜದ ಕಲ್ಪನೆಯಲ್ಲಿ ಸರ್ಕಾರ ನಡೆಸುತ್ತಿರುವುದು ಅಭಿನಂದನೀಯ. ಕಲ್ಯಾಣ ಕರ್ನಾಟಕದ ಬೀದರ್ ಜಿಲ್ಲೆಯ ಶೋಷಿತ ಜನಾಂಗಗಳ ಕಾರ್ಯಕರ್ತರನ್ನು ಕಡೆಗಣಿಸಿದ್ದು ಬೇಸರ ತರಿಸಿದೆ. ಕಳೆದ ಹಲವಾರು ವರ್ಷಗಳಿಂದ ಪಕ್ಷಕ್ಕಾಗಿ ದುಡಿಯುತ್ತಿರುವ ನಮ್ಮಂಥವರಿಗೆ ನಿಗಮ, ಮಂಡಳಿಗಳಲ್ಲಿ ನಾಮ ನಿರ್ದೇಶನ ಸ್ಥಾನ ಮಾನ ನೀಡಬೇಕೆಂದು ಮನವಿ ಮಾಡಿದ್ದರೂ ಕ್ರಮ ಕೈಗೊಂಡಿಲ್ಲ. ಕಲ್ಯಾಣ ಕರ್ನಾಟಕದ ಪ್ರಭಾವಿ ಸಚಿವರಾದ ಈಶ್ವರ್ ಖಂಡ್ರೆ, ರಹೀಂ ಖಾನ್, ಪ್ರಿಯಾಂಕ್ ಖರ್ಗೆ ಮಾಜಿ ಸಚಿವ ರಾಜಶೇಖರ ಪಾಟೀಲ,ವಿಧಾನ ಪರಿಷತ್ ಸದಸ್ಯರಾದ ಭೀಮರಾವ ಪಾಟೀಲ.ಡಾ.ಚಂದ್ರಶೇಖರ ಪಾಟೀಲ ಸೇರಿದಂತೆ ಈ ಭಾಗದ ಸಂಸದರು,ಶಾಸಕರುಗಳಿಗೂ ಮನವಿ ಮಾಡಲಾಗಿದೆ. ಎಲ್ಲ ಜನಪ್ರತಿನಿಧಿಗಳು ಕಾರ್ಯಕರ್ತರಲ್ಲಿ ಪ್ರೀತಿ, ವಿಶ್ವಾಸ ತೋರಿದ್ದಾರೆ. ಆದರೆ ಇದುವರೆಗೂ ನಿಗಮ ಮಂಡಳಿಗಳಿಗೆ ಸ್ಥಾನ ಮಾನ ನೀಡಿಲ್ಲ. ಎಂದು ರಾಜ್ಯಾಧ್ಯಕ್ಷ ಡಾ.ಸಿದ್ರಾಮ್ ಡಿ.ವಾಘಮಾರೆ ಬೇಸರ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿಗಳು ಶೋಷಿತ ಜನಾಂಗಗಳ ಧ್ವನಿಯಾಗಿದ್ದು ಬೀದರ ಜಿಲ್ಲೆಗೆ ಎಂಎಲ್ಸಿ ಸ್ಥಾನ ಹಾಗೂ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನ ನೀಡಬೇಕೆಂದು ಮನವಿ ಮಾಡಲಾಗಿದೆ ಇನ್ನು ಮುಂದೆ ಕಾರ್ಯಕರ್ತರಿಗೆ ಖಾಲಿ ಇರುವ ನಿಗಮ, ಮಂಡಳಿಗಳ ನಾಮ ನಿರ್ದೇಶನದಲ್ಲಿ ಭರ್ತಿ ಮಾಡುತ್ತಾರೆಂಬ ವಿಶ್ವಾಸವಿದೆ. ಒಂದುವೇಳೆ ನೀಡದೇ ಹೋದರೆ ಈ ಭಾಗದ ಕಾರ್ಯಕರ್ತರ ಅಸಮಾಧಾನ ಇನ್ನಷ್ಟು ಭುಗಿಲೇಳಲಿದೆ. ಮುಖ್ಯಮಂತ್ರಿಗಳು ಅದಕ್ಕೆ ಅವಕಾಶ ನೀಡಬಾರದು. ನಿಷ್ಪಕ್ಷಪಾತವಾಗಿ ಪಕ್ಷಕ್ಕಾಗಿ ಹಗಲಿರುಳು ದುಡಿದ ಕಾರ್ಯಕರ್ತರಿಗೆ ಸ್ಥಾನ ಮಾನ ನೀಡಬೇಕೆಂದು ಡಾ.ಸಿದ್ರಾಮ್ ಡಿ.ವಾಘಮಾರೆ ಮನವಿ ಮಾಡಿದ್ದಾರೆ.


ಕರ್ನಾಟಕ ಸರ್ಕಾರ

**ರಾಯಚೂರು ಮಹಾನಗರ ಪಾಲಿಕೆ**

Website:-www.raichurcity.gov.in E-mail:itstaff_ulb_raichura@yahoo.com

Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಕಾ/ಅ/81,180,183,197,199,208,219/2024–25 ದಿನಾಂಕ: 11–04–2025.

**ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).**

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವಳಿಗಾಗಿ ನಗರಸಭೆಯ ವೆಬ್‌ಸೈಟ್ WWW.raichurcity.mrc. gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

| ಕ್ರಸಂ | ಅನುದಾನದ ವಿವರ | ಕಾಮಗಾರಿಗಳ ವಿವರ | ಇಂಡೆಂಟ್ ನಂಬರ |
|---|---|---|---|
| 1 | 2020–21 15ನೇ ಹಣಕಾಸು ಅನುದಾನ | Grey Water Managament at SCSP Morarji Desai School Near Bolamandoddi Road in Raichur City. **Estimate Amount Rs.** 30,00,000.00 | DMA/2024-25/OW/ WORK_INDENT 32217/Call-2 |
| 2 | 2024–25 15ನೇ ಹಣಕಾಸು ನಿರ್ಬಂಧಿತ ಅನುದಾನ | Providing and Laying of Cable at Chicksugur WTP In Raichur City. **Estimate Amount Rs.** 5,00,000/- | DMA/2024-25/OW/ WORK_INDENT25947/ CALL-4 |
| 3 | ನಗರಸಭೆ ಅನುದಾನದಲ್ಲಿ | Demolition of Encroached Structures For Road Widening From Chandra Mouleshwar Circle to Gunj Circle In Raichur City. **Estimate Amount Rs.** 43,82,000/- | DMA/2024-25/OW/ WORK_INDENT33769/ Call-3 |
| 4 | 2023–24 15ನೇ ಹಣಕಾಸು ಮುಕ್ತ ಅನುದಾನದಲ್ಲಿ | A Providing Chainlink Fencing Cement Concrete Bench and Interlock Pavers Footpath to Garden at Panchamuki Colony and Chanakya Puri at Bolamandoddi in Ward No 21 B Providing Chainlink Fencing and Installation of Highmast Light Cement Concrete Bench and Plantation Work to Garden at Sadashiv Nagar Phase - 4 in Askihal Village of Ward No 34 C Providing Chainlink Fencing and Interlock Pavers Footpath to Garden Near Ram Mandir at Kasbe Camp Ward No 35 in Raichur City **Packege Amount Rs.** 36,00,000/- | DMA/2024-25/OW/ WORK_INDENT34424/ Call-2 |
| 5 | 2021–22 15ನೇ ಹಣಕಾಸು ನಿರ್ಬಂಧಿತ ಅನುದಾನದಲ್ಲಿ | Construction of RCC Sump at Ward No 28 Ashreya Colony in Raichur City **Estimate Amount Rs.** 20,00,000/- | DMA/2024-25/BD/ WORK_INDENT33980/ Call-2 |
| 6 | 2021–22 15ನೇ ಹಣಕಾಸು ನಿರ್ಬಂಧಿತ ಅನುದಾನ | Construction of Sump to Supply Water to Drinking Water OHT Tank in Bijanagera Road Ward N0 18 in Raichur City **Estimate Amount Rs.** 25,00,000.00 | DMA/2024-25/BD/ WORK_INDENT32066/ Call-3 |
| 7 | 2022–23 15ನೇ ಹಣಕಾಸು ಮುಕ್ತ ಅನುದಾನ | Providing and Laying of Paver Blocks Around Anjinayya Temple Ragimangadda Ward No 02 in Raichur City **Estimate Amount Rs.** 9,00,000.00 | DMA/2024-25/RD/ WORK_INDENT35240/ Call-2 |

ಸಹಿ/– ಆಯುಕ್ತರು

ಮಹಾನಗರ ಪಾಲಿಕೆ, ರಾಯಚೂರು

DIP/RCR/21/KSMCA/21/2025-26


# ಮಾದಕ ವಸ್ತುಗಳ ವಿರುದ್ಧ ವಿಶೇಷ ಅಭಿಯಾನ: ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ: ಏ. 15: ಕಳೆದ ವರ್ಷ ಜಿಲ್ಲೆಯಲ್ಲಿ ಡ್ರಗ್ಸ್‌ಗೆ ಸಂಬಂಧಿಸಿದಂತೆ 59 ಪ್ರಕರಣಗಳು ದಾಖಲಾಗಿದ್ದವು, ಪ್ರಸ್ತುತ 2025 ರ ಈ ಸಾಲಿನ ಕಳೆದ ಮೂರು ತಿಂಗಳಲ್ಲಿ 172 ಪ್ರಕರಣಗಳನ್ನು ದಾಖಲಿಸುವುದರ ಮೂಲಕ ಜಿಲ್ಲೆಯಲ್ಲಿ ಡ್ರಗ್ಸ್ ಹಾವಳಿಯನ್ನು ತಡೆಗಟ್ಟಲು ಕಟ್ಟುಕಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು. ಇಂದು ಕಲಬುರಗಿ ಪೊಲೀಸ್ ಆಯುಕ್ತರ ಕಚೇರಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಾದಕ ವಸ್ತುಗಳ ವಿರುದ್ಧ ಕಲಬುರಗಿ ನಗರ ಪೊಲೀಸ್ ವತಿಯಿಂದ ಹಮ್ಮಿಕೊಳ್ಳಲಾಗಿರುವ ವಿಶೇಷ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಸಚಿವರು ಕಳೆದ ವರ್ಷದ ಸಭೆಯಲ್ಲಿ ಮಾಧ್ಯಮ ಪ್ರತಿನಿಧಿಗಳು ಗಮನಕ್ಕೆ ತಂದಿದ್ದ ವೈದ್ಯರ ಚೀಟಿ ಇಲ್ಲದೆ ಔಷಧ ಮಾರುವ ಅಂಗಡಿಗಳಿಗೆ ಎಚ್ಚರಿಕೆ ನೀಡಲಾಗಿತ್ತು. ಇಂದು ಹೆಚ್ಚಾಗಿರುವ ಡ್ರಗ್ಸ್ ಹಾವಳಿ ಆನ್ ಲೈನ್ ಆಗಿರುವುದು ದುರಂತ,

ಗ್ರಾಮೀಣ ಮಟ್ಟದಲ್ಲಿ ಸಹ ಇದು ವಿಸ್ತರಿಸುತ್ತಿದೆ. ಇತ್ತೀಚಿಗೆ ಜಾಸ್ತಿಯಾಗುತ್ತಿರುವ ಅಪರಾಧ ಪ್ರಕರಣಗಳಲ್ಲಿ ಆರೋಪಿಗಳು ಡ್ರಗ್ಸ್ ಬಳಕೆ ಕಂಡು ಬರುತ್ತಿರುವುದು ದುರಂತ ಎಂದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.